


ಮಹಾನ್ ಮಾರ್ಕ್ಸ್‌ವಾದಿ ಚಿಂತಕ
14.6.1909 - 19.3.1998

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 22 ಸಂಚಿಕೆ 12 ಮಾರ್ಚ್ 15-21, 1999 ರೂ. 2.00

ಪ್ರಜಾಪಭ್ರುತ್ವವಾದಿ ಶಕ್ತಿಗಳಿಗೆ ಮಹತ್ವದ ವಿಜಯ

ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ರದ್ದು

ಮಾರ್ಚ್ 8ರ ರಾತ್ರಿ ರಾಷ್ಟ್ರಪತಿ ಭವನದಿಂದ ಇನ್ನೊಂದು ಅಧಿಕೃತ ಪ್ರಕಟಣೆ ಹೊರಡಿತು.- "ಸಂವಿಧಾನದ 356ನೇ ಕಲಮಿನ ಎರಡನೇ ಪರಿಚ್ಛೇದದ ಪ್ರಕಾರ ಪೆಬ್ರವರಿ 12,1999 ರಂದು ಬಿಹಾರಕ್ಕೆ ಸಂಬಂದಪಟ್ಟಂತೆ ಹೊರಡಿಸಿದ ಘೋಷಣೆ ಈ ಮೂಲಕ ರದ್ದು ಮಾಡಲ್ಪಟಿದೆ" ಎಂದು. ಇದರೊಂದಿಗೆ ಬಿಜೆಪಿ ನೇತೃತ್ವದ ಸರ್ಕಾರ ಇನ್ನೊಂದು ಬಾರಿ ಮುಖಕ್ಕೆ ಮಸಿ ಬಳಿಸಿ ಕೊಂಡಿದೆ. ಫೆಬ್ರವರಿ 12 ರಂದು ಬಿಹಾರದ ಮೇಲೆ ಹೇರಿದ್ದ ರಾಷ್ಟ್ರಪತಿ ಆಳ್ವಿಕೆಯನ್ನು ಅದು ನಿರ್ವಾಹವಿಲ್ಲದೆ ರದ್ದುಪಡಿಸಬೇಕಾಗಿ ಬಂತು. ಈ ರೀತಿ ಬಿಹಾರದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವ ಬಿಜೆಪಿ ನೇತೃತ್ವದ ಸರ್ಕಾರದ ಮತ್ತೊಂದು ಪ್ರಯತ್ನ ಶೋಚನೀಯವಾಗಿ ಸೋತಿತು.

ಕಳೆದ ಸೆಪ್ಟೆಂಬರ್‌ನಲ್ಲಿ ಅಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಬೇಕೆಂಬ ಸರ್ಕಾರದ ಮೊದಲ ಶಿಫಾರಸನ್ನು ರಾಷ್ಟ್ರಪತಿಗಳು ಹಿಂದಿರುಗಿಸಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಲೋಕಸಭೆಯಲ್ಲಿ ಹೇಗಾದರೂ ಅಧಿಕಾರಕ್ಕೆ ಅಂಟಿ ಕೊಂಡಿರಬೇಕೆಂಬ ತನ್ನ ಮಿತ್ರ ಪಕ್ಷಗಳ ಹಂಬಲದ ದುರುಪಯೋಗ ಪಡೆದು ಈ ಘೋಷಣೆಗೆ ಹೇಗೋ ಅನುಮತಿ ದೊರಕಿಸಿಕೊಂಡ ಮೇಲೆ ಬಿಜೆಪಿ ನೇತೃತ್ವದ ಸರಕಾರ ರಾಜ್ಯಸಭೆಯಲ್ಲಿ ಇದನ್ನು ತರುವುದನ್ನು ವಿಳಂಬಗೊಳಿಸುವ ತಂತ್ರವನ್ನು ಅನುಸರಿಸಿತು. ಆದರೆ ವಿರೋಧ ಪಕ್ಷಗಳ ಒತ್ತಡಗಳಿಂದಾಗಿ ಮಾರ್ಚ್ 8ರ ವೇಳೆಗೆ ಈ ಬಗ್ಗೆ ಹೇಳಿಕೆ ನೀಡಲಾಗುವುದು ಎಂದು ಪ್ರಕಟಿಸಬೇಕಾಗಿ ಬಂತು. ಈ ನಡುವೆ ಕಾಂಗ್ರೆಸ್ ಮುಖಂಡರನ್ನು ಪುಸಲಾಯಿಸುವ ಪ್ರಯತ್ನ ನಡೆಯಿತು. ಪ್ರಧಾನಿಗಳು ಸ್ವತಃ ಕಾಂಗ್ರೆಸ್ ಅಧ್ಯಕ್ಷರನ್ನು ಕರೆಸಿ ಬೆಂಬಲ ಕೋರಿದರು. ಆದರೂ ಮಾರ್ಚ್ 8ರ ವೇಳೆಗೆ ರಾಷ್ಟ್ರಪತಿ ಆಳ್ವಿಕೆಯನ್ನು ರದ್ದು ಮಾಡುವುದಲ್ಲದೆ ಬೇರೆ ಮಾರ್ಗವೇ ಇಲ್ಲ ಎಂದು ಸರ್ಕಾರಕ್ಕೆ ಸ್ಪಷ್ಟವಾಯಿತು. ಬಿಹಾರದಲ್ಲಿ ಮತ್ತೆ ಆರ್.ಜೆ.ಡಿ. ಸರಕಾರ ಅಧಿಕಾರ ವಹಿಸಿಕೊಂಡಿದೆ.

ಇದು ದೇಶದ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಒಂದು ಮಹತ್ವದ ವಿಜಯ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ. ಬಿಜೆಪಿ ಮಿತ್ರ ಕೂಟಕ್ಕೆ ಸೇರಿದ ಎಲ್ಲಾ ವಿರೋಧ ಪಕ್ಷಗಳ ದೃಢ ಹಾಗೂ ಸ್ಪಷ್ಟ ವಿರೋಧದಿಂದಾಗಿ ವಾಜಪೇಯಿ ಸರಕಾರ ಈ ಕ್ರಮ ಕೈಗೊಳ್ಳಲೇಬೇಕಾಗಿ ಬಂದಿದೆ. ರಾಜ್ಯ ಸಭೆಯಲ್ಲಿ ಸೋಲು ಖಂಡಿತವೆಂದು ತಿಳಿದಿದ್ದರೂ ಕೊನೆಯವರೆಗೂ ಅದು ಕಾಂಗ್ರೆಸ್ ಪಕ್ಷದ ಬೆಂಬಲ ಗಳಿಸಲು ಪ್ರಯತ್ನಿಸಿತು ಎಂದು ಪೊಲಿಟ್‌ಬ್ಯೂರೋ ಹೇಳಿಕೆ ಗಮನಿಸಿದೆ. ಈ ಶೋಚನೀಯ ಪತನಕ್ಕೆ ಬಿಜೆಪಿ ಮುಖಂಡತ್ವವೇ ಹೊಣೆ ಎಂದು ಪೊಲಿಟ್ ಬ್ಯೂರೋ ಹೇಳಿದೆ. ಒಂದು ಚುನಾಯಿತ ಸರಕಾರವನ್ನು ವಜಾ ಮಾಡಲು ಆರು ತಿಂಗಳೊಳಗೆ ಒಂದಲ್ಲ ಎರಡು ಬಾರಿ 356 ನೇ ಕಲಮಿನ ದುರುಪಯೋಗಕ್ಕೆ ಪ್ರಯತ್ನಿಸಿತು. 356 ನೇ ಕಲಮಿನ ಈ ಕರಾಳ ಅಂಶವನ್ನು ದುರುಪಯೋಗಪಡಿಸಿಕೊಳ್ಳುವಲ್ಲಿ ಹಿಂದಿನ ಬೇರೆ ಯಾವ ಕೇಂದ್ರ ಸರಕಾರವೂ ಇಂತಹ ನಗ್ನ ಅಥವಾ ಸರ್ವಾಧಿಕಾರಶಾಹಿ ನಿಲುವು ತೋರ್ಪಡಿಸಿರಲಿಲ್ಲ. ಒಕ್ಕೂಟ ತತ್ವವನ್ನು ಬುಡ ಮೇಲು ಮಾಡುವ ಕ್ರಮಗಳಿಂದ ಪ್ರಜಾಪ್ರಭುತ್ವ ವಿರೋಧಿ ವಿಧಾನಗಳಿಂದ ಏನೂ ಆಗುವುದಿಲ್ಲ ಎಂಬ ಎಚ್ಚರಿಕೆಯನ್ನು ಈ ಪ್ರಕರಣ ಬಿಜೆಪಿ ಕೂಟದ ಎಲ್ಲಾ ರಾಜ್ಯಕೀಯ ಪಕ್ಷಗಳಿಗೆ ನೀಡಿದೆ ಎಂದು ಪೊಲಿಟ್‌ಬ್ಯೂರೋ ಅಭಿಪ್ರಾಯಪಟ್ಟಿದೆ.

ಬಿಹಾರದಲ್ಲಿ ಮತ್ತೆ ಅಧಿಕಾರ ವಹಿಸಿ ಕೊಳ್ಳುತ್ತಿರುವ ರಾಷ್ಟ್ರೀಯ ಜನತಾದಳದ ಸರಕಾರ ತಕ್ಷಣವೇ ದಲಿತರ ಮತ್ತಿತರ ಗ್ರಾಮೀಣ ಬಡ ಜನಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದು ಪೊಲಿಟ್‌ಬ್ಯೂರೋ ಹೇಳಿದೆ. ಜನಸಾಮಾನ್ಯರಿಗೆ ಪರಿಹಾರ ಒದಗಿಸುವಂತೆ ಆಡಳಿತವನ್ನು ಸಜ್ಜುಗೊಳಿಸಬೇಕು, ಲಾಲೂ ಪ್ರಸಾದ್ ಸರಕಾರದ ಅಧಿಕಾರದ ಅವಧಿಯಲ್ಲಾಗಲೀ ನಂತರದ ಅವಧಿಯಲ್ಲಾಗಲೀ ಎಂದೂ ಸಾಕಾರಗೊಳ್ಳದ ಭೂಸುಧಾರಣೆಯ ಭರವಸೆಯನ್ನು ಪ್ರಾಮಾಣಿಕತೆಯಿಂದ ಕೈಗೆತ್ತಿಕೊಳ್ಳಬೇಕು ಎಂದು ಸಿಪಿಐ(ಎಂ) ಅಗ್ರಹಪಡಿಸಿದೆ.

ವಸಂತಕಾಲದ ಅರಳುತ್ತಿರುವ ಹೂ, ಚಿಗುರು ಕೊಳ್ಳಿ ಹಿಡಿದು ತಿರುಗುತ್ತಿರುವ ಬಿಜೆಪಿಗಳು

ಎಸ್.ವೈ.ಗುರುಶಾಂತ್

'ಚುನಾವಣೆಗಳಿಗೆ ಸಿದ್ಧರಾಗಿ' ಎಂದು ಮೊನ್ನೆ ತನ್ನ ಕಾರ್ಯಕರ್ತರಿಗೆ ಅಪ್ಪಣೆ ಕೊಡಿಸಿದವರು ಬಿಜೆಪಿಯ ವೆಂಕಯ್ಯ ನಾಯ್ಡು, ಬೆಂಗಳೂರಿನ ನಾಮಕಾವಾಸ್ತೆ ವಿಳಾಸ ನೀಡಿ ರಾಜ್ಯಸಭಾ ಸದಸ್ಯರಾದ ನಾಯ್ಡು, ಇಲ್ಲಿ ತಾವಿದ್ದುದನ್ನು ದೃಢಪಡಿಸಲು ಆಗಾಗ ಒಂದು ಪತ್ರಿಕಾಗೋಷ್ಠಿ ಮಾಡುವುದು ರೂಢಿ. ನಾಯ್ಡುವಿನ ಮಾತು ನಾಲಗೆಯಲ್ಲಿರುವಾಗಲೇ ಬೆಂಗಳೂರಿನ ಬಡಾವಣೆಗಳಲ್ಲಿ, ಮಡಿಕೇರಿ, ಶಿವಮೊಗ್ಗಗಳಲ್ಲಿ ಬೆಂಕಿ ಹಚ್ಚುವ ಕೆಲಸದಲ್ಲಿ ಖಾಕೀ ಚಡ್ಡಿಗಳು ಮಗ್ನರಾಗಿದ್ದರು.

ಜಯನಗರದ ನಾಲ್ಕನೇ ಬ್ಲಾಕ್‌ನ ರಸ್ತೆಯಂಚಿನಲ್ಲಿ ಮಣ್ಣು ಗುಡ್ಡೆಯೊಂದು ಬಹುದಿನಗಳಿಂದಲೂ ಇತ್ತು. ಅದು ವಕ್ಫ್ ಮಂಡಳಿಗೆ ಸಂಬಂಧಿಸಿದ್ದು. ಎಂದೋ ಎತ್ತಿಸಿಬಿಡಬಹುದಾಗಿದ್ದ ಅದನ್ನು ಚಡ್ಡಿಗಳು ವಿವಾದಕ್ಕೆಳೆದು ರಂಪಾಟಮಾಡಿದ್ದರಿಂದ ಅದು ಹಾಗೇ ಇತ್ತು. ಆದರೆ ಇತ್ತೀಚೆಗೆ ಅದೇ ಸ್ಥಳದಲ್ಲಿ ಆಕಸ್ಮಿಕ ಬಸ್ ಅಪಘಾತದಲ್ಲಿ ಯುವತಿ ಸಾವಿಗೀಡಾಗಿದ್ದರಿಂದ, ನಗರಪಾಲಿಕೆ, ಪೋಲಿಸ್ ಇಲಾಖೆ, ವಕ್ಫ್‌ಬೋರ್ಡ್ ನಡುವೆ ಚರ್ಚೆ ನಡೆದು ಮಣ್ಣಿನ ಗುಡ್ಡೆ ಸಾಗಿಸಲಾಯಿತು. ಇದು ಬಗೆಹರಿದದ್ದು ಚಡ್ಡಿ ವೀರರಿಗೆ ತೀರಾ ನಿರಾಶೆ ತಂದಿತು! ಹೊಸ ವಿವಾದ ಸೃಷ್ಟಿಸಲು ಹೊಂಚು ಹಾಕಿದರು.

ಈ ಗುಡ್ಡೆ ಇದ್ದ ಪ್ರದೇಶದಲ್ಲಿ ನೂರಾರು ವರ್ಷಗಳಿಂದಲೂ ನಮಾಜು ಮಾಡಲಾಗುತ್ತಿದ್ದ ಈದ್ಗಾ ಮೈದಾನದ ನಿವೇಶನ ಇದೆ. ಮಣ್ಣಿನ ಗುಡ್ಡೆ ಎತ್ತಿದ್ದರಿಂದ ಮೈದಾನಕ್ಕೆ ಒಂದು ಸಣ್ಣ ಕಾಂಪೌಂಡ್ ಹಾಕಿಕೊಳ್ಳಬೇಕೆಂದು ವಕ್ಫ್ ಮಂಡಳಿ ಕೋರಿತ್ತು. ಅದಕ್ಕಾಗಿ ಮಹಾನಗರ ಪಾಲಿಕೆ ಅನುಮತಿ ನೀಡಿ 'ಖಾತಾ' ನೀಡಿದರು. ಮೊಸರಿನಲ್ಲಿ ಕಲ್ಲು ಹುಡುಕುತ್ತಿದ್ದ ಸಂಘ ಪರಿವಾರವು ಕೂಡಲೇ ಇದನ್ನೇ ಎತ್ತಿ ನಗರ ಪಾಲಿಕೆಯ ಮೇಯರ್, ಉಪಮೇಯರ್ ಮೇಲೆ ಧಾಳಿ ನಡೆಸಿ ಸಭೆಯಲ್ಲಿಯೂ ಅವಾಚ್ಯವಾಗಿ ಕೂಗಾಡಿ, ದಾಂಧಲೆ ಎಬ್ಬಿಸಿ ಧರಣಿ ನಡೆಸಿದ್ದಾರೆ. ಅಲ್ಪಸಂಖ್ಯಾತರನ್ನು ಹೀಯಾಳಿಸಿದ್ದಾರೆ. ಉಪಮೇಯರ್ ಷಹತಾಜ್ ಖಾನುಂರ ಮೇಲೆ ಆಕ್ರಮಣಗೈದು ಸೀರೆ ಎಳೆದು, ಜಡೆ ಜಗ್ಗಿಸುವವರೆಗೂ ತಮ್ಮ 'ಸಂಸ್ಕೃತಿ' ಪ್ರದರ್ಶಿಸಿದ್ದಾರೆ, ಕಾರು ಬಡಿದಿದ್ದಾರೆ. ನಂತರ ಜಯನಗರದಲ್ಲಿ ಶಾಸಕನಾಗುವ ಕನಸು ಕಾಣುತ್ತಿರುವ 'ಪುಂಡು ಕಂದಾಯ'ಕೋರನೂ, ಸಚಿವ ಅನಂತಕುಮಾರನ ಶಿಷ್ಯನೂ ಆಗಿರುವ ಬಿಜೆಪಿಯ ಅವತಾರಿಯೊಬ್ಬನ ನೇತೃತ್ವದಲ್ಲಿ ಬಂದ್ ಮೂಲಕ ಮತಯಾಚನೆಗೆ ಕರೆ ನೀಡಿದ್ದೂ ಆಯ್ತು. ಕೆಲವು ಅಂಗಡಿಗಳು ಮಾತ್ರ ಮುಚ್ಚಿದ್ದೂ ಆಯ್ತು. ಈ ಎಲ್ಲಾ ದಾಂಧಲೆಗಳ ನಡುವೆ 'ವಂದೇ ಮಾತರಂ' ಎಂಬ ಮಂತ್ರ ಹೇಳಲು ಮಾತ್ರ ಚಡ್ಡಿಗಳು ಮರೆಯಲಿಲ್ಲ.

ಕೊಡಗಿನ ಸುಂದರ ಮಡಿಕೇರಿ ಐತಿಹಾಸಿಕವಾದ ಪ್ರದೇಶವೂ ಹೌದು. ಆದರೆ ಇಲ್ಲಿರುವ ಹಲವಾರು ಸ್ಮಾರಕಗಳನ್ನು ಯಾರೂ ನೋಡಹೋಗುವುದಿಲ್ಲ. ಬಹುತೇಕ ಜನರಿಂದ ನೋಡಿಸಿಕೊಳ್ಳದ ಒಂದು ಪ್ರದೇಶವೆಂದರೆ ಲಿಂಗಾಯತ ಮಠಗಳ ಸ್ಮಾರಕಗಳು. ಇವು ತುಂಬಾ ಹಳೆಯದಾದ ಸ್ವರೂಪದಲ್ಲಿವೆ. ಈ ಪ್ರದೇಶಕ್ಕೆ ಹೊಂದಿಕೊಂಡು ಕಳೆದ 20-30 ವರ್ಷಗಳಿಂದ ಕೆಲವು ಜನರು ಪುಟ್ಟ ಮನೆಮಾಡಿಕೊಂಡು ವಾಸವಾಗಿದ್ದಾರೆ. ಈ ಪ್ರದೇಶ ಪುರಾತತ್ವ ಇಲಾಖೆಯ ಅಧೀನದಲ್ಲಿದೆ. ಮಡಿಕೇರಿ ನಗರ ಅಭಿವೃದ್ಧಿ ಪ್ರಾಧಿಕಾರವು ಈ ಪ್ರದೇಶದಲ್ಲಿ ಒಂದಿಷ್ಟು ಜಾಗವನ್ನು ನಿವೇಶನಗಳನ್ನಾಗಿಸಿ, ಬಡಜನರಿಗೆ ನೀಡಲು ನಿರ್ಧರಿಸಿತು. ಈ ತೀರ್ಮಾನ ಮಾಡುವಾಗ ಪುರಾತತ್ವ ಇಲಾಖೆಯೊಂದಿಗೆ ಸಮಾಲೋಚಿಸಬೇಕಿತ್ತು, ನಿಜ. ಸಹಜವಾಗಿ ಈ ಇಲಾಖೆಯ ಜಮೀನು ಬೇರೆ ಕಾರಣಗಳಿಗೆ ಬಳಸುವಂತಿಲ್ಲ ಎಂಬ ನಿಯಮವಿದೆ. ಇದು ಫಲಿಸಿದ್ದು ಸಮನ್ವಯದ ಅಭಾವದಿಂದ. ಪರಸ್ಪರ ಮಾತುಕತೆ ಮೂಲಕ ಬಗೆಹರಿಯಬಹುದಾದ ಸಣ್ಣ ಸಮಸ್ಯೆ ಇದು. ಆದರೆ.... ಕೊಡಗಿನ ಮೂರು ಕ್ಷೇತ್ರಗಳಲ್ಲಿ ಗೆದ್ದಿರುವ ಬಿಜೆಪಿಯು, ಆಂತರಿಕ ಕಿತ್ತಾಟ, ಜನವಿರೋಧಿ ಕೆಲಸಗಳಿಂದ ಜನರ ತಿರಸ್ಕಾರಕ್ಕೆ ಈಡಾಗಿರುವಂತೆಯೇ ಮುಖ ಉಳಿಸಿಕೊಳ್ಳಲು ಕೂಡಲೇ ಕಣಕ್ಕೆ ಇಳಿಯಿತು. ಶಾಸಕರು, ಮಠಾಧೀಶರನ್ನು, ರೆಡಿ ಮಾಡಿ ಮಠದ ಗದ್ದಿಗೆ ಉಳಿಸಲು ಧುಮುಕಿದರು. 'ಗದ್ದಿಗೆ ಹಿತರಕ್ಷಣಾ ಸಮಿತಿ'ಯು ದಿಢೀರನೇ ಉದಯವಾಯಿತು. ಚಳುವಳಿಯೂ ಆರಂಭಗೊಂಡಿತು. ಬಡಜನರಿಗೆ ನಿವೇಶನ ನೀಡುವ ನಿರ್ಧಾರಕ್ಕೆ ನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿರುವವರು ಮುಸ್ಲಿಂ ಅಲ್ಪಸಂಖ್ಯಾತರಾಗಿರುವುದೇ ಕಾರಣವೆಂದು ಕೊಡಗಿನ ತುಂಬಾ ಕೂಗು ಹಬ್ಬಿಸಲಾಯಿತು. ಈ ಗದ್ದುಗೆ ಕಡೆ ಮುಖ ಕೂಡ ತಿರುವಿ ನೋಡದ ಕೆಲವು ಮಠಾಧೀಶರು ಚಳುವಳಿಗೆ ಇಳಿದಿದ್ದು ಒಂದು ವಿಶೇಷ. ಜಿಲ್ಲಾಧಿಕಾರಿಗಳ ಸಮಕ್ಷಮದಲ್ಲಿ ಸಭೆ ನಡೆದು ಪುರಾತತ್ವ ಇಲಾಖೆ ನಿವೇಶನ ಯಥಾ ಸ್ಥಿತಿ ಕಾಯ್ದುಕೊಳಬೇಕೆಂಬ ನಿಯಮ ಪ್ರಕಟಿಸಿದ ಬಳಿಕವೂ 'ವಿಧಾನಸಭಾ ಕಲಾಪ ನಡೆಯಲು ಬಿಡುವುದಿಲ್ಲ' ಎಂದ ಬಿ.ಬಿ.ಶಿವಪ್ಪನವರು, 'ಕರಸೇವೆಗೆ ಈಗಲೇ ಸಿದ್ಧ' ಎಂದ ಶಾಸಕ ಅಪ್ಪಚ್ಚು ರಂಜನ್, ಮತ್ತವರ ಬೆಟಾಲಿಯನ್ ನಿಜವಾಗಿಯೂ ಬಯಸುತ್ತಿರುವುದೇನು ಎಂಬುದೀಗ ಚರ್ಚೆಯ ವಿಚಾರವಾಗಿದೆ. ಮುಖ ಉಳಿಸಿಕೊಳ್ಳುವ ಬಿಜೆಪಿಯ ಉಪಾಯವನ್ನು ಸಿಪಿಐ(ಎಂ) ಬಯಲಿಗೆಳೆದಿದೆ.

ಹಾಗೇ ಶಿವಮೊಗ್ಗ ಈಗ ಚಡ್ಡಿಗಳ ಕಣವಾಗಿದೆ. ಅಲ್ಲಿ ಬಿಜೆಪಿ ಸಂಸತ್ ಸದಸ್ಯರದ್ದೇ ದರ್ಬಾರು. ಬಿಜೆಪಿಯ ಕೋಮುವಾದ ವಿರೋಧಿಸಿ, ಅನ್ಯಾಯ, ಹಗರಣವನ್ನು ಬಯಲಿಗೆಳೆಯುತ್ತಿದ್ದ ದಿಟ್ಟತನದ ಸ್ಥಳೀಯ ಪತ್ರಿಕೆ 'ಕ್ರಾಂತಿದೀಪ'ದ ಮೇಲೆ, ಸಂಘ ಪರಿವಾರದ ಧಾಳಿ ಆರಂಭವಾಗಿದೆ. ಇತ್ತೀಚೆಗೆ ಮುದ್ರಣಾಲಾಯಕ್ಕೆ ಆಕ್ರಮಣ ಮಾಡಿದ ಈ ಪುಂಡರ ಗುಂಪು ಆಸ್ತಿಪಾಸ್ತಿ ಧ್ವಂಸಗೊಳಿಸಿದೆ. ಸಂಪಾದರು, ಸಹ ಸಂಪಾದಕರು ಮತ್ತು ಸಿಬ್ಬಂದಿಯವರ ಮೇಲೆ ಮರಣಾಂತಿಕ ಹಲ್ಲೆ ನಡೆದಿದೆ. ಅವರು ಆಸ್ಪತ್ರೆಯಲ್ಲಿರುವಾಗ ಸ್ವತಃ ಎಂ.ಪಿ.ಯವರೇ ಆಸ್ಪತ್ರೆಗೆ ಹೋಗಿ ಪ್ರಾಣ ತೆಗೆಯುವ ಬೆದರಿಕೆ ಒಡ್ಡಿದ್ದಾರೆ, ಬುದ್ಧಿ ಕಲಿತುಕೊಳ್ಳದಿದ್ದರೆ ಏನಾಗುತ್ತೆ ಎಂದು ತಿಳಿಯಿರಿ ಎಂದು ಕೂಗಾಡಿದ್ದಾರೆ. ಚಡ್ಡಿಗಳ ಈ ದಾಂಧಲೆಯ ವಿರುದ್ಧ ಪ್ರಗತಿಪರರು, ನಾಗರೀಕರು, ಸಿಪಿಐ(ಎಂ) ಪಕ್ಷ ಒಳಗೊಂಡು ಇತರ ರಾಜಕೀಯ ಪಕ್ಷಗಳು ಉಗ್ರ ಪ್ರತಿಭಟನೆ ನಡೆಸಿದ್ದಾರೆ. ಶಿವಮೊಗ್ಗ ಬಂದ್ ನಡೆಸಿ 5000 ಕ್ಕೂ ಅಧಿಕ ಜನರ ಮೆರವಣಿಗೆ ನಡೆಸಿ ಸಂಘ ಪರಿವಾರಕ್ಕೆ ಎಚ್ಚರಿಸಿದ್ದಾರೆ.

ಖಾಸಗೀ ಟೆಲಿಕಾಂ ಕಂಪನಿಗಳಿಗೆ ಅನುಕೂಲವಾದ ದರ ಏರಿಕೆ

ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (TRAI) ಮಾರ್ಚ್ 9 ರಂದು ಟೆಲಿಫೋನ್ ದರಗಳನ್ನು ಏಪ್ರಿಲ್ 1 ರಿಂದ ಪರಿಷ್ಕರಿಸುವ ಪ್ರಕಟಣೆಯನ್ನು ಹೊರಡಿ ಸಿದೆ. ಇದರ ಪ್ರಕಾರ ಮುಂದಿನ ಮೂರು ವರ್ಷಗಳಲ್ಲಿ ನಗರ ಪ್ರದೇಶಗಳಲ್ಲಿ ಟೆಲಿಫೋನ್ ಚಂದಾದಾರರು 60% ರಿಂದ 72% ದಷ್ಟು ಹೆಚ್ಚು ತಿಂಗಳ ಬಾಡಿಗೆ ತೆರಲೆಬೇಕಾಗುತ್ತದೆ. ಗ್ರಾಮೀಣ ಪ್ರದೇಶ ಗಳಲ್ಲಿ ಈ ಏರಿಕೆ 140% ರಷ್ಟು. ಟೆಲಿಫೋನ್ ಕರೆ ದರಗಳನ್ನು 25% ರಿಂದ 50% ರವರೆಗೆ ಉಚಿತ ಕರೆಗಳ ಪ್ರಮಾಣವನ್ನು ಕಡಿತ ಮಾಡಲಾಗಿದೆ. ಆದರೆ ಎಸ್.ಟಿ.ಡಿ. ಹಾಗೂ ಅಂತ ರ್ರಾಷ್ಟ್ರೀಯ ಕರೆಗಳ ದರ ಮುಂದಿನ ಮೂರು ವರ್ಷಗಳಲ್ಲಿ 45% ರಿಂದ 50% ದ ವರೆಗೆ ಇಳಿಯಲಿದೆ.

TRAIನ ಈ ಪರಿಷ್ಕೃತ ದರಗಳನ್ನು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಬಲವಾಗಿ ವಿರೋಧಿಸಿದೆ.

ಈ ಏರಿಕೆಗಳನ್ನು ಕಂಪನಿಗಳು ಮತ್ತು ದೊಡ್ಡ ವ್ಯಾಪಾರೀ ವರ್ಗಕ್ಕೆ ದೂರವಾಣಿ ಸೌಲಭ್ಯ ಒದಗಿಸುವ ಖಾಸಗೀ ಟೆಲಿಕಾಂ ಕಂಪನಿಗಳಿಗೆ ಅನುಕೂಲ ಮಾಡಿಕೊಡಲೆಂದೇ ಮಾಡಲಾಗಿದೆ. ಆದ್ದರಿಂದಲೇ ಸಾಮಾನ್ಯ ಕರೆ ದರಗಳನ್ನು, ಬಾಡಿಗೆ ದರಗಳನ್ನು ಹೆಚ್ಚಿಸಿ ಎಸ್‌ಟಿಡಿ/ಐಎಸ್‌ಡಿ ದರಗಳನ್ನು ಇಳಿಸಲಾಗಿದೆ. ಈ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಟೆಲಿಫೋನ್ ಜಾಲವನ್ನು ವಿಸ್ತರಿಸಲು ಸಬ್ಸಿಡಿ ಒದಗಿಸುವ ನೀತಿಯನ್ನು ಕೈಬಿಡಲಾಗುತ್ತಿದೆ ಎಂದು ಪೊಲಿಟ್‌ಬ್ಯೂರೋ ಟೀಕಿಸಿದೆ.

ಈ ಹಿಂದೆ ಈ ಪರಿಷ್ಕೃತ ದರಗಳ ಪ್ರಸ್ತಾಪಗಳನ್ನು ಇಟ್ಟಾಗಲೇ ಸಿಪಿಐ(ಎಂ) ಪೊಲಿಟ್‌ಬ್ಯೂರೋ ದೂರಸಂಪರ್ಕ ಪ್ರಾಧಿಕಾರ ದೊಡ್ಡ ಬಂಡವಾಳಸ್ಥರ ಲಾಬಿಗಳ ವಕೀಲನಂತೆ ವರ್ತಿಸುತ್ತಿದೆ ಎಂದು ಟೀಕಿಸಿದ್ದನ್ನು ಇಲ್ಲಿ ನೆನಪಿಸಿ ಕೊಳ್ಳಬಹುದು. ಈ ಏರಿದ ದರಗಳನ್ನು ಜನ ಒಪ್ಪುವುದಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸರಕಾರ ತಕ್ಷಣ ಮಧ್ಯ ಪ್ರವೇಶಿಸಿ ಈ ದರ ಏರಿಕೆಗಳನ್ನು ರದ್ದು ಮಾಡಬೇಕು ಎಂದು ಆಗ್ರಹಪಡಿಸಿದೆ.

ಈ ಸಾಮಾನ್ಯ ದೂರವಾಣಿ ದರ ಏರಿಕೆಗಳಿಗೆ ಎಲ್ಲೆಡೆಯಿಂದ ಪ್ರತಿಭಟನೆ ಬಂದಿದೆ. ಸರಕಾರದ ಬಜೆಟ್ಟನ್ನು ಸ್ವಾಗತಿಸಿದ, ಅಲ್ಲಿ ಸಬ್ಸಿಡಿಗಳ ಕಡಿತದ ಬಗ್ಗೆ ಬಾಯಿಮುಚ್ಚಿಕೊಂಡಿದ್ದ, ಸಬ್ಸಿಡಿಗಳ ಕಡಿತವನ್ನು ಪ್ರತಿಪಾದಿಸುತ್ತಾ ಈ ಬಗ್ಗೆ ಚರ್ಚೆಯಾಗಲಿ ಎನ್ನುತ್ತಿರುವ ಪ್ರಧಾನಿ ಗಳನ್ನು ಸದಾ ಪ್ರಶಂಸಿಸುವ ತೃಣಮೂಲ ಕಾಂಗ್ರೆಸ್ಸಿನ ಮಮತಾ ಬ್ಯಾನರ್ಜಿ ಕೂಡಾ ಈಗ ಅದೇ ನಿಲುವನ್ನು ದೂರವಾಣಿ ಕರೆ ಗಳಿಗೆ ಅನ್ವಯಿಸಿದಾಗ ಬೊಬ್ಬೆ ಹಾಕಿದ್ದಾರೆ.

ಸದ್ಯಕ್ಕಂತೂ ಬಿಜೆಪಿ ನೇತೃತ್ವದ ಸರಕಾರ ಈ ದರ ಏರಿಕೆಗಳನ್ನು ಪರಾಮರ್ಶಿಸುವುದಾಗಿ ಹೇಳಿದೆ. ಆದರೆ ಜನಸಾಮಾನ್ಯರಿಗೆ ನೀಡುವ ಸಬ್ಸಿಡಿಗಳನ್ನು ಕಡಿತ ಮಾಡಿ ಸಂಪನ್ನ ವಿಭಾಗಗಳಿಗೆ ಅದನ್ನು ವರ್ಗಾಯಿಸಬೇಕೆನ್ನುವ ಸರಕಾರ ಈ ದರ ಏರಿಕೆಗಳನ್ನು ತಾನಾಗಿಯೇ ರದ್ದು ಮಾಡುತ್ತದೆ ಎಂದು ನಿರೀಕ್ಷಿಸಲು ಸಾಧ್ಯವೇ?

ಸುಪಾರಿ ಸರಣಿ ಕೊಲೆಗಳಲ್ಲಿ ಭಾಗಿಯಾಗಿರುವ ಸಚಿವರ ವಜಾ - ಸಿಪಿಐ(ಎಂ) ಆಗ್ರಹ

ಸುಪಾರಿ ಸರಣಿ ಕೊಲೆಯ ಮತ್ತೊಂದು ಪ್ರಕರಣದಲ್ಲಿ ಕರ್ನಾಟಕ ಸರ್ಕಾರದ ಸಚಿವ ಮಾಲೀಕಯ್ಯ ಗುತ್ತೇದಾರ್‌ರವರ ಮೇಲೆ ಮಹಾರಾಷ್ಟ್ರ ಪೋಲೀಸರು ಆರೋಪ ಪಟ್ಟಿ ಸಲ್ಲಿಸಿದ್ದು, ಇಂತಹ ಕ್ರಿಮಿನಲ್ ಸಚಿವರನ್ನು ತತ್‌ಕ್ಷಣವೇ ಮಂತ್ರಿಮಂಡಲದಿಂದ ವಜಾಗೊಳಿಸಬೇಕೆಂದು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸೆಕ್ರಟಾರಿಯೇಟ್ ಮುಖ್ಯಮಂತ್ರಿ ಜೆ.ಹೆಚ್.ಪಟೇಲರನ್ನು ಆಗ್ರಹಿಸಿದೆ.

ಹಿಂದಿನ ಕೊಲೆ ಪ್ರಕರಣಗಳಲ್ಲಿ ಮಾಲೀಕಯ್ಯ ಗುತ್ತೇದಾರ್ ಭಾಗಿಯಾಗಿದ್ದಾಗ್ಯೂ, ಮುಖ್ಯಮಂತ್ರಿಗಳು ಸೂಕ್ತ ಕ್ರಮ ಜರುಗಿಸದೇ ವಿಳಂಬಿಸಿದ್ದಾರೆ. ಇಂತಹ ಕ್ರಿಮಿನಲ್ ವ್ಯಕ್ತಿಗಳು ಮಂತ್ರಿಮಂಡಲದಲ್ಲಿ ಮುಂದುವರಿದಿರು ವುದು ರಾಜ್ಯದ ಜನತೆಗೆ ಮಾಡಿದ ಅಪಮಾನ ಮತ್ತು ಅನೈತಿಕವೆಂದು ಸಿಪಿಐ(ಎಂ) ಅಭಿಪ್ರಾಯ ಪಟ್ಟಿದೆ. ಮುಖ್ಯಮಂತ್ರಿಗಳು ಕೇವಲ 'ತಾಂತ್ರಿಕ' ಅಂಶಗಳ ಬಗ್ಗೆ ಮಾತನಾಡುವುದು ಸರಿಯಲ್ಲ ಎಂದು ತಿಳಿಸಿದೆ.

ಅಲ್ಲದೇ ಈ ಸುಪಾರಿ ಕೊಲೆ ಪ್ರಕರಣಗಳಲ್ಲಿ ಭಾಗಿಯಾಗಿರುವ ಶಾಸಕ ಸುಭಾಶ್ ಗುತ್ತೇದಾರ್ ಮುಂತಾದವರ ಮೇಲೆ ಈ ಕೂಡಲೇ ಕ್ರಮ ಜರುಗಿಸಬೇಕು. ಇದೀ ಪ್ರಕರಣದ ತನಿಖೆಯಲ್ಲಿ ಯಾವುದೇ ರಾಜಕೀಯ ಹಸ್ತಕ್ಷೇಪ ಇರಬಾರದು ಎಂದು ಸಿಪಿಐ(ಎಂ) ಒತ್ತಾಯಿಸಿದೆ.


ಬಂಡವಾಳಿಗರಿಗೆ ಬಡ್ಡಿ ದರ ಕಡಿತ

ಬಂಡವಾಳಿಗರ ದೊಡ್ಡ ಬೇಡಿಕೆಯಿತ್ತು-ಬಡ್ಡಿದರಗಳನ್ನು ಇಳಿಸಿ ಕಡಿಮೆ ದರದಲ್ಲಿ ಸಾಲ ದೊರೆಯುವಂತೆ ಮಾಡಿ. ಔದ್ಯಮಿಕ ಹಿಂಜರಿತ ಕಡಿಮೆಯಾಗತ್ತದೆ ಎಂದು ಯಶವಂತ ಸಿನ್ಹಾರ ಬಜೆಟ್ ಇಂತಹ ರಿಯಾಯಿತಿ ನೀಡುವ ತಯಾರಿ ಮಾಡಿತ್ತು. ಭಾರತೀಯ ರಿಸರ್ವ್ ಬ್ಯಾಂಕ್ ಬಡ್ಡಿದರಗಳನ್ನು ಇಳಿಸಿದೆ. ಈಗ ಬ್ಯಾಂಕುಗಳಿಗೆ ಬಡ್ಡಿದರಗಳನ್ನು ಇಳಿಸದೆ ನಿರ್ವಾಹವಿಲ್ಲ. ಆದ್ದರಿಂದ ಬ್ಯಾಂಕುಗಳು, ಬಡ್ಡಿ ದರಗಳನ್ನು ಇಳಿಸತೊಡಗಿವೆ.

ಭಾರತೀಯ ರಿಸರ್ವ್ ಬ್ಯಾಂಕ್ ಬ್ಯಾಂಕುಗಳಿಗೆ ನೀಡುವ ಸಾಲಗಳಿಗೆ ವಿಧಿಸುವ ಬಡ್ಡಿದರಕ್ಕೆ ಬ್ಯಾಂಕ್ ದರ ಎನ್ನುತ್ತಾರೆ. ಈ ಬ್ಯಾಂಕ್ ದರ ಶೇ. 9 ರಷ್ಟಿದ್ದದ್ದನ್ನು ಈಗ ಶೇ. 8ಕ್ಕೆ ಇಳಿಸಲಾಗಿದೆ. ಇದರ ಜೊತೆಗೆ ನಗದು ಶುಲ್ಕ ಅನುಪಾತ-ಅಂದರೆ ಬ್ಯಾಂಕುಗಳು ತಮ್ಮ ಠೇವಣಿ ಹಣದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಕಡ್ಡಾಯವಾಗಿ ಇಡಬೇಕಾದ ಮೊತ್ತವನ್ನು ಶೇ. 11 ರಿಂದ ಶೇ. 10.5 ಕ್ಕೆ ಇಳಿಸಿದೆ. ಈ ಅರ್ಧ ಶೇಕಡಾದ ಒಟ್ಟು ಮೊತ್ತ 3000 ಕೋಟಿ ರೂಪಾಯಿಗಳಷ್ಟಾಗುತ್ತದೆ. ಅಂದರೆ ಇಷ್ಟು ಹೆಚ್ಚಿನ ಹಣ ಬ್ಯಾಂಕುಗಳು ಸಾಲ ನೀಡಲು/ ವಿನಿಯೋಗಿಸಲು ದೊರೆಯುತ್ತದೆ. ಇದರಿಂದ ಬ್ಯಾಂಕುಗಳಿಗೆ ಹೆಚ್ಚಿನ ಲಾಭಮಾಡಿಕೊಳ್ಳಲು ಸಾಧ್ಯವಾಗುತ್ತದೆಂಬುದು ರಿಸರ್ವ್‌ಬ್ಯಾಂಕಿನ ತರ್ಕ.

ಈ ರೀತಿಯ ಬಡ್ಡಿದರದ ಕಡಿತ ಬ್ಯಾಂಕುಗಳ ಮೇಲೆ ಹೀಗಿರುತ್ತದೆ: ಬ್ಯಾಂಕುಗಳು ನೀಡಿದ ಸಾಲಗಳ ಮೇಲಿನ ಬಡ್ಡಿದರವನ್ನು ಕೂಡಲೇ ಕಡಿಮೆ ಮಾಡಬೇಕಾಗುತ್ತದೆ. ಆದರೆ ಠೇವಣಿಗಳ ಮೇಲೆ ಬ್ಯಾಂಕುಗಳು ನೀಡುವ ಬಡ್ಡಿ ದರವನ್ನು ಮುಂದೆ ಹೊಸದಾಗಿ ಬರುವ ಠೇವಣಿಗಳ ಮೇಲೆ ಮಾತ್ರ ಮಾಡಬೇಕಾಗುತ್ತದೆ. ಅಂದರೆ ಬಡ್ಡಿಬರುವುದು ಕೂಡಲೇ ಕಡಿಮೆಯಾಗುತ್ತದೆ. ನೀಡುವ ಬಡ್ಡಿ ಪ್ರಮಾಣ ನಿಧಾನವಾಗಿ ಕಡಿಮೆಯಾಗುತ್ತದೆ. ಇದರಿಂದ ಒಟ್ಟಾರೆಯಾಗಿ ಬ್ಯಾಂಕುಗಳಿಗೆ ಹಾನಿಯಾಗುವ ಸಾಧ್ಯತೆಯೇ ಹೆಚ್ಚು. ಲಾಭ? ಬಹುತೇಕ ಬಂಡವಾಳಿಗರಿಗೆ.

ಇಲ್ಲೂ ಬ್ಯಾಂಕುಗಳ ಪ್ರತಿಕ್ರಿಯೆ ನೋಡಿ. ಸರ್ಕಾರಿ ಹಿಡಿತದ ಬ್ಯಾಂಕುಗಳು ಬಡ್ಡಿ ದರಗಳನ್ನು ಕೂಡಲೇ ಕಡಿಮೆ ಮಾಡಿದವು. ಖಾಸಗೀ ಬ್ಯಾಂಕುಗಳು ತಾವು ನೀಡುವ ಬಡ್ಡಿದರಗಳನ್ನು ಕಡಿಮೆ ಮಾಡಲು ಹೊರಟಿವೆ. ಮೊದಲು ಕಡಿಮೆ ಮಾಡಿ ಅನಂತರ ಸಾಲಗಳ ಮೇಲೆ ಪಡೆವ ಬಡ್ಡಿದರಗಳನ್ನು ಇದು ಬಂಡವಾಳಿಗರ ಬಜೆಟ್‌ನ ನಂತರದ ಕತೆ.



ಸ್ಥಗಿತಗೊಂಡಿರುವ ಸಾರ್ವಜನಿಕ ಹೂಡಿಕೆ

ಬರುವ ಸಾಲಿನಲ್ಲೂ ಸಾರ್ವಜನಿಕ ಹೂಡಿಕೆ ಈ ಸಾರಿಯ ಮಟ್ಟದಲ್ಲೇ ಇರುತ್ತದೆ. ಅಂತರ್‌ರಚನಾ ಸೌಕರ್ಯಗಳಿಗೆ ಹೆಚ್ಚಿನ ಒತ್ತು ನೀಡುವ ಸಾರ್ವಜನಿಕ ಹೂಡಿಕೆ ಮಾಡಿ ಔದ್ಯಮೀಕರಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವ ನಿರೀಕ್ಷೆಯನ್ನು ಕೆಲವು ಉದ್ಯಮಿಗಳಾದರೂ ಇಟ್ಟುಕೊಂಡಿದ್ದರು. ಆದರೆ ಸರ್ಕಾರ ಈ ದಿಸೆಯಲ್ಲಿ ಗಮನವನ್ನೇ ನೀಡದೇ ಹೋಗಿದೆ.

ಕೇಂದ್ರ ಯೋಜನಾ ವೆಚ್ಚ 103521 ಕೋಟಿ ರೂಪಾಯಿಗಳೆಂದು ನಿಗದಿಪಡಿಸಲಾಗಿದೆ. ಕಳೆದ ಸಾಲಿನ ಬಜೆಟ್ ಅಂದಾಜಿಗಿಂತಲೂ 125.39 ಕೋಟಿ ರೂಪಾಯಿಗಳಷ್ಟು ಇದು ಹೆಚ್ಚಾಗಿದ್ದರೂ 1999-2000 ಸಾಲಿನ ಬಜೆಟ್ ಅಂದಾಜಿಗಿಂತ ಇದು 2566 ಕೋಟಿ ರೂಪಾಯಿಗಳಷ್ಟು ಕಡಿಮೆಯಾಗಿರುತ್ತದೆ.

1999-2000 ಸಾಲಿಗೆ ಬಜೆಟ್ ಬೆಂಬಲ 77000 ಕೋಟಿ ರೂಪಾಯಿಗಳಷ್ಟು ಮಾತ್ರ.

ಉದ್ಯೋಗ ಕಡಿತದ ಹೊರೆ

ಸಿನ್ಹಾ ತಮ್ಮ ಬಜೆಟ್ಟಿನಲ್ಲಿ ಸರ್ಕಾರೀ ಉದ್ಯೋಗಗಳನ್ನು ಕಡಿಮೆ ಮಾಡುವ ಮಾತನ್ನಾಡಿದ್ದಾರೆ. ತಮ್ಮ ಮಂತ್ರಾಲಯದ ಒಬ್ಬ ಕಾರ್ಯದರ್ಶಿಯನ್ನು ಆಗಲೇ ತೆಗೆದು ಹಾಕಿದ್ದಾರೆ. ಮೂರು ಕೋಟಿ ಜನ ಸಂಖ್ಯೆಯುಳ್ಳ ಭಾರತಕ್ಕೆ ದೊಡ್ಡ ಸರಕಾರಿ ಯಂತ್ರದ ಅವಶ್ಯಕತೆ ಇದ್ದೇ ಇದೆ ಎಂಬುದು ಯಾರಿಗಾದರೂ ಗೊತ್ತಾಗುವ ವಿಚಾರ. ಆದರೆ ಖರ್ಚು ಕಡಿತವನ್ನು ಮಾಡುವ ಐ.ಎಂ.ಎಫ್. ವಿಶ್ವಬ್ಯಾಂಕ್‌ಗಳ ಅಣತಿಯ ಪಾಲನೆ ಸರ್ಕಾರಕ್ಕೆ ದೊಡ್ಡದಾಗಿ ಕಂಡಿದೆ.

ಈಗ ಇನ್ನೂ ಹಲವು ಉದ್ಯೋಗಗಳನ್ನು ಸರ್ಕಾರ ಕಡಿಮೆ ಮಾಡಲಿದೆಯಂತೆ. ಈ ಕಾರ್ಯಕ್ಕೆ ಸರ್ಕಾರ ಆರಿಸಿಕೊಂಡಿರುವ ಇಲಾಖೆಗಳು ಯಾವುವು ಗೊತ್ತೆ? ಮೊದಲು ಈ ಕಾರ್ಯ ಆರೋಗ್ಯ ಗ್ರಾಮೀಣಾಭಿವೃದ್ಧಿ ಇಲಾಖೆಗಳಲ್ಲಿ ಆಗಲಿದೆಯಂತೆ. ಅಂದರೆ ಈ ಕಾರ್ಯ ಯಾವ ದಿಸೆಯಲ್ಲಿ ನಡೆಯುತ್ತಿದೆ ಎಂಬುದು ಸ್ಪಷ್ಟವಲ್ಲವೆ? ಸಾಮಾಜಿಕ ಕಲ್ಯಾಣದ ಕೆಲಸ ಕಾರ್ಯಗಳಿಗೆ ಹೊಡೆತ ಕೊಡುವಂತೆಯೇ ಈ ಉದ್ಯೋಗ ಕಡಿತ ನಡೆಯಲಿದೆ.

ಇದು ಐ.ಎಂ.ಎಫ್. ವಿಶ್ವ ಬ್ಯಾಂಕುಗಳು ತೋರಿರುವ ದಾರಿ ಅಲ್ಲವೆ?



ಮಾರ್ಚ್ 14 ಕ್ಕೆ ಮಾರ್ಕ್ಸ್‌ವಾದದ ಜನಕ ಕಾರ್ಲ್ ಮಾರ್ಕ್ಸ್‌ರವರು ನಿಧನರಾಗಿ 116 ವರ್ಷಗಳು ಸಲ್ಲುತ್ತವೆ. ಅವರು ನಿಧನರಾದ ನೂರ ಹದಿನಾರನೆಯ ಈ ವರ್ಷ ಬಹಳ ಮುಖ್ಯವಾದ ವರುಷ. ಅವರು ನಿಧನರಾಗಿ ಮೂರು ದಶಕಗಳ ನಂತರ ಅವರ ಚಿಂತನೆ ಪ್ರಪ್ರಥಮ ಕಾರ್ಮಿಕ ಕ್ರಾಂತಿಯ ಮೂಲಕ ಜಗತ್ತಿನ ಎಲ್ಲಾ ಪ್ರಭುಗಳೂ ತಲ್ಲಣಿಸುವಂತೆ ಮಾಡಿತು. ಮಾರ್ಕ್ಸ್‌ವಾದಕ್ಕೆ ಲೆನಿನ್ ವಾದದ ಹೊಸ ಚಿಗುರು ಮೂಡಿತು. ಜಗತ್ತಿನೆಲ್ಲೆಡೆ ಹಬ್ಬಿ ಬೆಳೆಯಿತು.

ಕೆಲವೇ ವರ್ಷಗಳ ಹಿಂದೆ ಮಾರ್ಕ್ಸ್‌ವಾದದಿಂದ ದೂರ ಸರಿದವರಿಂದಾದ ತಪ್ಪುಗಳ ಫಲವಾಗಿ ಮಾರ್ಕ್ಸ್‌ವಾದದ ಸಮಾಧಿ ಮಾಡಲು ಅದರ ಶತ್ರುಗಳು ಬಯಸಿದರು. ಆದರೆ 1998 ಈ ಬಂಡವಾಳಶಾಹಿ - ಸಾಮ್ರಾಜ್ಯಶಾಹಿ ಶತ್ರುಗಳ ಕನಸನ್ನು ಹುಸಿ ಮಾಡಿ, ಅವರ ಕಾಲಡಿಯ ನೆಲವೇ ಕುಸಿದು ಮತ್ತೆ ಯಾರು ತಡೆಯೊಡ್ಡಿದರೂ ಜಗತ್ತಿನ ಜನತೆ ಮಾರ್ಕ್ಸ್‌ವಾದದ ಕಡೆಗೆ ನೋಡುವಂತಾಯಿತು. ಜಪಾನ್ ಸೇರಿದಂತೆ ಥೈಯ್‌ಲ್ಯಾಂಡ್, ಇಂಡೋನೇಶಿಯ ಮೊದಲಾದ ಪೂರ್ವ ಏಷ್ಯಾದ ದೇಶಗಳ ಬ್ರೆಜಿಲ್ ಮೊದಲಾದ ಅಮೆರಿಕಾದ ಹಿತ್ತಲಿನಲ್ಲಿರುವ ದೇಶಗಳ ಕಂಪನ ಮಾರ್ಕ್ಸ್‌ರವರು ಹೇಳಿದ ಸಾರ್ವಕಾಲಿಕ ಸತ್ಯ - 'ಬಂಡವಾಳ ಶಾಹಿ ಇರುವವರೆಗೂ ಬಿಕ್ಕಟ್ಟುಗಳು ಇರುತ್ತವೆ' ಎಂಬ ಸತ್ಯವನ್ನು ಎಲ್ಲರೂ ನೆನಪಿಸಿಕೊಂಡರು 1998-99 ರಲ್ಲಿ.

ಮಾರ್ಕ್ಸ್‌ವಾದದ ವಿಜಯದ ಈ ದಿನಗಳಲ್ಲಿ ಮಾರ್ಕ್ಸ್‌ರವರ ಜೊತೆ 'ಜೀವವೊಂದು ದೇಹವೆರಡು' ಎಂಬಂತೆ ಜೀವಿಸಿದ, ಚಿಂತಿಸಿದ ಎಂಗೆಲ್ಸ್‌ರವರು ತಮ್ಮ ಆತ್ಮೀಯ ಗೆಳೆಯನ ಮರಣದ ದಿನ ಲಂಡನ್ನಿನ ಹೈಗೇಟ್ಸ್ ಸ್ಮಶಾನದಲ್ಲಿ ಮಾರ್ಕ್ಸ್‌ರವರ ಜೀವನದ ಸಾರವನ್ನೇ ಭಟ್ಟಿಯಿಳಿಸಿದಂತೆ ಮಾಡಿದ ಪುಟ್ಟ ಭಾಷಣ.

ಅನು: **ಜಿ.ಎನ್.ನಾಗರಾಜ್**

ಯುಗಯುಗಗಳಲ್ಲಿಯೂ ಮೊಳಗುವ ಹೆಸರು ಕಾರ್ಲ್‌ಮಾರ್ಕ್ಸ್

(ಕಾರ್ಲ್‌ಮಾರ್ಕ್ಸ್ ಸಮಾಧಿಯ ಬಳಿ ಎಂಗೆಲ್ಸ್‌ರಿಂದ ಸ್ಮರಣೆ)

ಮಾರ್ಚ್ ಹದಿನಾಲ್ಕರ ಮಧ್ಯಾಹ್ನ ಎರಡೂ ಮುಕ್ಕಾಲು ಗಂಟೆಯ ಸಮಯ, ಜಗತ್ತಿನ ಅತಿ ಶ್ರೇಷ್ಠ ಚಿಂತನಪರನೊಬ್ಬ ಚಿಂತಿಸುವುದನ್ನು ನಿಲ್ಲಿಸಿದ. ಕೇವಲ ಎರಡು ನಿಮಿಷಗಳು ಮಾತ್ರ ಅವರನ್ನು ಒಬ್ಬಂಟಿಯಾಗಿ ಬಿಟ್ಟಿದ್ದೆವು. ಮರಳಿ ಬಂದಾಗ ಅವರು ಆರಾಮ ಕುರ್ಚಿಯಲ್ಲಿ ಶಾಂತವಾಗಿ ನಿದ್ದೆಗೆ ಸಂದಿದ್ದರು. ಶಾಶ್ವದ ನಿದ್ದೆಗೆ ಸಂದಿದ್ದರು.

ಚಾರಿತ್ರಿಕ ವಿಜ್ಞಾನಕ್ಕೆ, ಯುರೋಪು, ಅಮೇರಿಕಾಗಳ ವಿಶ್ವದ ಎಲ್ಲಾ ದೇಶಗಳ ಹೋರಾಟ ಜೀವಿ ಶ್ರಮಿಕರಿಗೆ ಇವರ ಸಾವಿನಲ್ಲಿ ಅಪರಿಮಿತ ನಷ್ಟವೊಂದು ಸಂಭವಿಸಿತು. ಈ ಮಹಾನ್ ವ್ಯಕ್ತಿತ್ವದ ಅಗಲಿಕೆಯಿಂದ ಉಂಟಾದ ಕಂದರ ಸ್ವಲ್ಪ ಸಮಯದಲ್ಲಿಯೇ ಎಲ್ಲರಿಗೂ ನಷ್ಟದ ಅರಿವನ್ನು ತಂದುಕೊಡಲಿದೆ.

ಡಾರ್ವಿನ್ ಜೀವ ಜಗತ್ತಿನ ಅಭಿವೃದ್ಧಿಯ ನಿಯಮಗಳನ್ನು ಕಂಡರಿಸಿದಂತೆಯೇ ಮಾರ್ಕ್ಸ್ ಮಾನವ ಇತಿಹಾಸದ ಅಭಿವೃದ್ಧಿಯ ನಿಯಮಗಳನ್ನು ಶೋಧಿಸಿದ. ಅಜೀರ್ಣವಾಗುವಷ್ಟು ತತ್ವಗಳ ಅತಿ ಬೆಳವಣಿಗೆಯ ರಾಶಿಯಲ್ಲಿ ಮುಚ್ಚಿಹೋಗಿದ್ದ ಒಂದು ಸರಳ ಸಂಗತಿ ಅದು. ಮಾನವತೆಗೆ, ರಾಜಕೀಯ, ವಿಜ್ಞಾನ, ಕಲೆ, ಧರ್ಮಗಳಲ್ಲಿ ತೊಡಗುವ ಮೊದಲೇ ಅನ್ನ, ನೀರು ನೆರಳು ಉಡುಪುಗಳು ಅವಶ್ಯಕ; ಆದ್ದರಿಂದ ಬದುಕಿರಲು ಬೇಕಾದ ತಕ್ಷಣದ ಲೌಕಿಕ ವಸ್ತುಗಳ ಉತ್ಪಾದನೆ ಅಂದರೆ ಒಂದು ಕಾಲಘಟ್ಟದ ಅಥವಾ ಜನಸಮೂಹದ ಆರ್ಥಿಕ ಅಭಿವೃದ್ಧಿಯ ಮಟ್ಟವೆಂಬ ತಳಹದಿಯ ಮೇಲೆಯೇ ಎಲ್ಲ ರಾಜ್ಯ, ಸಂಘಟನೆ, ಸಂಸ್ಥೆಗಳು, ಕಾನೂನು ಕಲೆ, ಧರ್ಮದ ಕಲ್ಪನೆಗಳು ಬೆಳೆದಿರುವುದು. ಈ ಬೆಳಕಿನಲ್ಲಿ ಇವೆಲ್ಲ ಸಂಗತಿಗಳನ್ನು ವಿವೇಚಿಸಬೇಕಾಗಿದೆ. ಇಲ್ಲಿಯವರೆವಿಗೂ ನಡೆದಿರುವಂತೆ ವಿರುದ್ಧ ದಿಕ್ಕಿನಲ್ಲಿ ಅಲ್ಲ.

ಇದಿಷ್ಟೆ ಅಲ್ಲ, ಮಾರ್ಕ್ಸ್ ಈವತ್ತಿನ ಬಂಡವಾಳಶಾಹಿ ಉತ್ಪಾದನಾ ವಿಧಾನದ ನಿರ್ದೇಶಕ ನಿಯಮಗಳನ್ನು ಮತ್ತು ಈ ಉತ್ಪಾದನಾ ವಿಧಾನದಿಂದ ರೂಪಿಸಲ್ಪಟ್ಟ ಬಂಡವಾಳಶಾಹಿ ಜಗತ್ತನ್ನು ಸಂಶೋಧಿಸಿದರು. ಅಧಿಕ ಮೌಲ್ಯದ ಶೋಧ, ಯಾವ ಸಮಸ್ಯೆಯನ್ನು ಬಿಡಿಸಲು ಬಂಡವಾಳಶಾಹಿ ಅರ್ಥತಜ್ಞರ, ಸಮಾಜವಾದಿ ವಿಮರ್ಶಕರ ಸಂಶೋಧನಗೆಳು ಕತ್ತಲಲ್ಲಿ ತಡಕಾಡುತ್ತಿದ್ದವೋ ಅದರ ಮೇಲೆ ಒಮ್ಮೆಗೇ ಬೆಳಕು ಬೀರಿದಂತಾಯಿತು.


ಒಂದು ಜೀವಮಾನಕ್ಕೆ ಇಂತಹ ಎರಡು ಸಂಶೋಧನೆಗಳು ಸಾಕು. ಇಂತಹ ಒಂದೇ ಸಂಶೋಧನೆಯನ್ನು ನಡೆಸಿದ ಮನುಷ್ಯನೂ ಕೂಡ ಬಹಳ ಸುಖಿ. ಆದರೆ ಮಾರ್ಕ್ಸ್ ಸಂಶೋಧಿಸಿದ ಪ್ರತಿಕ್ಷೇತ್ರದಲ್ಲಿಯೂ - ಅವರು ಅನೇಕ ವಿಷಯಗಳನ್ನು ಶೋಧಿಸಿದರು-ಯಾವುದರಲ್ಲಿಯೂ ಮೇಲು ಮೇಲಿನ ಕೆರೆದಾಟವಲ್ಲ-ಪ್ರತಿಯೊಂದರಲ್ಲಿಯೂ, ಗಣಿತ ಶಾಸ್ತ್ರದಲ್ಲಿ ಸಹ ಸ್ವತಂತ್ರ ಸಂಶೋಧನೆಗಳನ್ನು ಮಾಡಿದ್ದಾರೆ.

ಇಂತಹ ವೈಜ್ಞಾನಿಕ ಮಾನವರಾಗಿದ್ದರು ಅವರು. ಆದರೆ ಇಷ್ಟು ಅವರ ಕೆಲಸದ ಅರ್ಧ ಕೂಡ ಅಲ್ಲ. ಮಾರ್ಕ್ಸ್‌ರಿಗೆ ವಿಜ್ಞಾನ ಚಾರಿತ್ರಿಕವಾಗಿ ಕ್ರಿಯಾಶೀಲ ಕ್ರಾಂತಿಕಾರಿ ಶಕ್ತಿ. ವಿಜ್ಞಾನದ ತತ್ವಗಳಲ್ಲಿಯ ಪ್ರತಿ ಹೊಸ ಸಂಶೋಧನೆಯನ್ನೂ, ಅದರ ಪ್ರಾಯೋಗಿಕ ರೂಪದ ಬಗ್ಗೆ ಯಾರಿಗೂ ಊಹಿಸಲಾಗದಿದ್ದರೂ ಅತೀವ ಸಂತೋಷದಿಂದ ಸ್ವಾಗತಿಸುತ್ತಿದ್ದರು. ಆದರೆ ಜಾಗತಿಕ ಅಭಿವೃದ್ಧಿಯಲ್ಲಿ ಕೈಗಾರಿಕೆಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ಸಂಶೋಧನೆಗಳನ್ನು ಸ್ವಾಗತಿಸುವ ಅವರ ಸಂತೋಷ ಬೇರೆಯ ತೆರನೇ ಆಗಿರುತ್ತಿತ್ತು. ಉದಾಹರಣೆಗಾಗಿ ಅವರು ವಿದ್ಯುತ್ತಿನ ಉಪಯೋಗದಲ್ಲಿನ ಸಂಶೋಧನೆಗಳನ್ನು ನಿಕಟವಾಗಿ ಪರಿಶೀಲಿಸುತ್ತಿದ್ದರು. ತೀರಾ ಇತ್ತೀಚಿನ ಮಾರ್ಸಲ್ ಡೆಪ್ರೆಸ್‌ರ ಸಂಶೋಧನೆಯನ್ನು ಕೂಡಾ.

ಮಾರ್ಕ್ಸ್ ಇವೆಲ್ಲವುದಕ್ಕಿಂತ ಹೆಚ್ಚಾಗಿ ಒಬ್ಬ ಕ್ರಾಂತಿಕಾರಿ. ಬಂಡವಾಳಶಾಹಿ ಸಮಾಜವನ್ನು ಅದು ರೂಪಿಸಿದ ರಾಜ್ಯಾಡಳಿತ ಸಂಸ್ಥೆಗಳನ್ನು ಕಿತ್ತೆಸೆಯುವುದರಲ್ಲಿ, ಯಾವ ಶ್ರಮಿಕ ವರ್ಗಕ್ಕೆ ಮೊತ್ತಮೊದಲು ಅದರ ಸ್ಥಿತಿಯ ಬಗ್ಗೆ, ಅದರ ಅಗತ್ಯಗಳ ಬಗ್ಗೆ, ಅದರ ಬಿಡುಗಡೆಯ ನಿಯಮಗಳ ಬಗ್ಗೆ ಪ್ರಜ್ಞೆಯನ್ನು ಮೂಡಿಸಿದರೋ ಆ ಶ್ರಮಿಕವರ್ಗದ ಬಂಧ ವಿಮೋಚನೆಯ ಬಗ್ಗೆ ಯಾವುದಾದರೊಂದು ರೀತಿಯಲ್ಲಿ ಸಹಾಯ ಮಾಡುವುದೇ ಅವರ ಜೀವನದ ಪರಮ ಗುರಿಯಾಗಿತ್ತು. ಹೋರಾಟ ಅವರ ಜೀವನದ ಅಂಗ. ಅವರು ಗಟ್ಟಿತನದಿಂದ, ಆವೇಗದಿಂದ ಕಾದಿದ್ದರು ಮತ್ತು ಅನ್ಯರಿಗೆ ಸಾಧ್ಯವಾಗದಷ್ಟು ಯಶಸ್ಸನ್ನು ಪಡೆದರು. ಮೊದಲನೇ 'ರೈನಿಷೇ ಝುಟುಂಗ್(1842), ಪ್ಯಾರಿಸಿನ 'ವೊರ್‌ವಾರಟ್ಸ್' (1844), ಡ್ಯೂಷ್‌ಟ್ಸ್ ಸೆಲರ್ ಝುಟುಂಗ್(1847), ನ್ಯೂರೈನಿಷೆ ಝುಟುಂಗ್ (1848-49) ನ್ಯೂಯಾರ್ಕ್ ಟ್ರಿಬ್ಯೂನ್ (1852-61) ಈ ಪತ್ರಿಕೆಗಳಲ್ಲಿ ಕೆಲಸ, ಇದರ ಜೊತೆಗೆ ನೂರಾರು ಹೋರಾಟದ ಹಸ್ತಪತ್ರಿಕೆಗಳು, ಪ್ಯಾರಿಸ್ ಬ್ರಸ್ಸೆಲ್ಸ್, ಲಂಡನ್‌ನ ಸಂಘಟನೆಗಳು, ಕೊನೆಯಲ್ಲಿ ಇವೆಲ್ಲಕ್ಕೂ ಕಿರೀಟವಿಡುವಂತೆ ಜಾಗತಿಕ ಕೆಲಸಗಾರರ ಸಂಘಟನೆ ಇವೆಲ್ಲವೂ ಬೇರೆ ಇನ್ನೇನನ್ನು ಮಾಡಿರದಿದ್ದರೂ ಹೆಮ್ಮೆಪಡಬಹುದಾದ ಕೆಲಸ. ಮತ್ತು ಇವೆಲ್ಲದರ ಪರಿಣಾಮವಾಗಿ ಮಾರ್ಕ್ಸ್ ಅವರ ಕಾಲದಲ್ಲಿಯೇ ಅತ್ಯಂತ ದ್ವೇಷಕ್ಕೊಳಗಾದ ಸುಳ್ಳು ಅಪವಾದಗಳಿಗೊಳಗಾದ ಮನುಷ್ಯ. ಸರ್ವಾಧಿಕಾರಿ ಮತ್ತು ಸಂಸದೀಯ ಸರ್ಕಾರಗಳೆರಡೂ ಅವರನ್ನು ಗಡೀಪಾರು ಮಾಡಿದವು. ಬಂಡವಾಳಶಾಹಿಗಳು, ಸಂಪ್ರದಾಯ ಪಾಲಕರಿರಲಿ, ಅರೆ ಪ್ರಜಾಪ್ರಭುತ್ವವಾದಿಗಳಿರಲಿ ಅವರ ಮೇಲೆ ಅಪನಿಂದನೆಯ ಮಳೆಗರೆಯುವುದರಲ್ಲಿ ಸ್ಪರ್ಧಿಸಿದರು. ಇವೆಲ್ಲವನ್ನೂ ಗಣನೆಗೇ ತೆಗೆದುಕೊಳ್ಳದೇ ಜೇಡರ ಬಲೆಯನ್ನು ಸರಿಸುವಂತೆ ಪಕ್ಕಕ್ಕೊತ್ತರಿಸಿದರು. ಅತಿ ಅವಶ್ಯಕವಾದಾಗ ಮಾತ್ರ ಉತ್ತರಿಸಿದರು.

ಅವರು ಸೈಬೀರಿಯಾದ ಗಣಿಗಳಿಂದ, ಕ್ಯಾಲಿಫೋರ್ನಿಯಾದವರೆಗಿನ, ಯುರೋಪು, ಅಮೆರಿಕಾಗಳ ಎಲ್ಲ ಪ್ರದೇಶಗಳ ಲಕ್ಷಾಂತರ ಕ್ರಾಂತಿಕಾರಿ ಶ್ರಮಿಕರಿಂದ ಗೌರವಿಸಲ್ಪಟ್ಟು ಪೂಜಿಸಲ್ಪಟ್ಟು, ಪ್ರೀತಿಸಲ್ಪಟ್ಟು ಸತ್ತರು. ನಾನು ಧೈರ್ಯವಾಗಿ ಹೇಳುತ್ತೇನೆ - ಅವರಿಗೆ ಅನೇಕ ವಿರೋಧಿಗಳಿದ್ದರೂ ಒಬ್ಬನೇ ಒಬ್ಬ ವೈಯಕ್ತಿಕ ಶತ್ರು ಇರಲಿಲ್ಲವೆಂದು.

ಅವರ ಹೆಸರು ಯುಗಯುಗಗಳಲ್ಲಿಯೂ ಮೊಳಗುತ್ತದೆ, ಹಾಗೆಯೇ ಅವರ ಕೆಲಸವೂ ಕೂಡ.



ವಿಧಾನಸಭೆಯಲ್ಲಿ ಬಿಪಿಎಲ್ ಕಾರ್ಮಿಕರ ಮುಷ್ಕರದ ಪ್ರತಿಧ್ವನಿ

ಬಿಪಿಎಲ್ ಕಾರ್ಮಿಕರು ತಮ್ಮ ಹಠಮಾರಿ, ಅನ್ಯಾಯಕಾರೀ ಮಾಲಕನ ವಿರುದ್ಧ ನಡೆಸುತ್ತಿರುವ ದೀರ್ಘ ಹೋರಾಟ ಮಾರ್ಚ್ 11ರಂದು ವಿಧಾನಸಭೆಯಲ್ಲೂ ಪ್ರತಿಧ್ವನಿತಗೊಂಡಿತು. ಇದನ್ನು ಮೊದಲು ಎತ್ತಿದವರು ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿಯವರು. ಬಿಪಿಎಲ್ ಮಾಲಕರು ಅನ್ಯಾಯಕಾರಿ ವರ್ತನೆಗಳಲ್ಲಿ ತೊಡಗಿದ್ದಾರೆ, ಕನಿಷ್ಠ ಕೂಲಿಯನ್ನೂ ಕೊಡುತ್ತಿಲ್ಲ ಎಂದ ಅವರು ಮಾಲಕನ ದುರ್ವರ್ತನೆಗಳನ್ನು ವಿವರಿಸಿದರು. ಮಹಿಳಾ ಕಾರ್ಮಿಕರು ಮದುವೆಯಾಗುವುದನ್ನೂ ನಿಷೇಧಿಸುವ ಮಾಲಕ ಈತ. ಸರಕಾರ ಕೂಡಾ ಇಂತಹ ಒಬ್ಬ ಮಾಲಕನ ಪರವಾಗಿ ನಿಂತುದನ್ನು ಶ್ರೀರಾಮರೆಡ್ಡಿ ಬಲವಾಗಿ ಖಂಡಿಸಿದರು. ಅನ್ಯಾಯದ ವರ್ತನೆಗಳಿಗಾಗಿ ಆಡಳಿತ ಮಂಡಳಿಯ ಸದಸ್ಯರನ್ನು ಬಂಧಿಸುವ ಬದಲು ಈ ಸರಕಾರ 300 ಮಹಿಳಾ ಕಾರ್ಮಿಕರನ್ನು ಬಂಧಿಸಿ ರಾಜ್ಯದ ವಿವಿಧ ಜೈಲುಗಳಿಗೆ ಅಟ್ಟಿತು ಎಂದು ಅವರು ಸರಕಾರವನ್ನು ತರಾಟೆಗೆ ತೆಗೆದುಕೊಂಡರು.

ಉಪಮುಖ್ಯಮಂತ್ರಿ ಸಿದ್ಧರಾಮಯ್ಯನವರು ತಾತ್ಕಾಲಿಕವಾಗಿ ಕಾರ್ಮಿಕ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದಾಗ ಮ್ಯಾನೇಜ್‌ಮೆಂಟಿಗೆ ಕಾರ್ಮಿಕ ಸಂಘದೊಂದಿಗೆ ಹಾಗೂ ಸರಕಾರದೊಂದಿಗೆ ಮಾತುಕತೆ ನಡೆಸುವಂತೆ ಹೇಳಿದ್ದರೂ ಮಾಲಕ ಕಿವಿಗೊಡಲಿಲ್ಲ. ಆದರೆ ಸಂಬಂಧ ಪಟ್ಟ ಫೈಲು ಅದು ಹೇಗೋ ಮುಖ್ಯಮಂತ್ರಿ ಗಳ ಬಳಿ ಹೋಯಿತು. ಫೆಬ್ರುವರಿ 26ರಂದು ಸರಕಾರ ಮುಷ್ಕರವನ್ನು ನಿಷೇಧಿಸಿತು. ನಂತರ ಸ್ವಲ್ಪಕಾಲ ಕಾರ್ಮಿಕ ಮಂತ್ರಿಯಾಗಿದ್ದ ಬಿ.ಎಲ್.ಶಂಕರ್ ರವರು ಮಾತುಕತೆ ನಡೆಸಲು ಹೇಳಿದ್ದನ್ನೂ ಕೇಳಲಿಲ್ಲ ಎಂಬುದನ್ನು ಶ್ರೀರಾಮರೆಡ್ಡಿಯವರು ಸದನದ ಗಮನಕ್ಕೆ ತಂದರು. ಲೇಬರ್ ಕಮಿಶನರ್ ಬಿಪಿಎಲ್ ಕಾರ್ಮಿಕ ಸಂಘಕ್ಕೆ ಮಾನ್ಯತೆಯನ್ನು ಹಿಂತೆಗೆದುಕೊಳ್ಳುವ ಬೆದರಿಕೆ ಹಾಕಿರುವುದನ್ನು ಶ್ರೀರಾಮರೆಡ್ಡಿ ಕಟುವಾಗಿ ಟೀಕಿಸಿದರು. ಈಗ ಕಾರ್ಮಿಕ ಮಂತ್ರಿಯಾಗಿರುವ ಅಮರನಾಥ ಶೆಟ್ಟಿ ರಾಜಿ ಮಾತುಕತೆಗೆ ಪ್ರಯತ್ನಗಳನ್ನು ಮುಂದುವರೆಸುತ್ತಿದೆ ಎನ್ನುತ್ತಾ ವಿಬಿನ್ನ ರಾಜ್ಯಗಳಲ್ಲಿರುವ ಕಂಪನಿಯ ಒಂದು ಘಟಕದಲ್ಲಿನ ಕಾರ್ಮಿಕ ಸಂಘವನ್ನು ಮಾನ್ಯ ಮಾಡಲು ಸಾಧ್ಯವಾಗು ವುದಿಲ್ಲ ಎಂದು ಅಭಿಪ್ರಾಯಪಟ್ಟಾಗ ಶ್ರೀರಾಮರೆಡ್ಡಿ ಯವರ ಜೊತೆಗೆ ಇತರ ಸದಸ್ಯರೂ ಅದಕ್ಕೆ ಸವಾಲು ಹಾಕಿದರು. ಜನತಾ ದಳದ ಎನ್. ರಾಜಣ್ಣ ಹಾಗೂ ಕನ್ನಡ ಚಳುವಳಿಯ ವಾಟಾಳ್ ನಾಗರಾಜ್‌ರವರೂ ಮಾಲಕರೊಂದಿಗೆ ಸರಕಾರ ಶಾಮೀಲಾಗಿದೆ ಎಂದು ಟೀಕಿಸಿದರು. ಮಾಲಕರ ದುರಹಂಕಾರ ಬೆಳೆಯುತ್ತಿದೆ, ಸರಕಾರ ಅವರಿಗೆ ನೀಡಿದ ಪೋಲೀಸ್ ರಕ್ಷಣೆಯನ್ನು ಹಿಂತೆಗೆದು ಕೊಳ್ಳಬೇಕು ಎಂದು ಅವರು ಆಗ್ರಹಿಸಿದರು. ಕಾರ್ಮಿಕ ಮಂತ್ರಿಗಳ ಉತ್ತರದಿಂದ ಸದಸ್ಯರಿಗೆ ಸಮಾಧಾನವಾಗಲಿಲ್ಲ. ಸಭಾಧ್ಯಕ್ಷರೂ ಅತೃಪ್ತಿ ವ್ಯಕ್ತಪಡಿಸಿದರು. ಈ ಹೊಸ ಮಂತ್ರಿಗಳ ನೆರವಿಗೆ ಯಾವ ಹಿರಿಯ ಮಂತ್ರಿಯೂ ಬಾರದ್ದನ್ನು ಕಂಡ ಸಭಾಧ್ಯಕ್ಷರು ಅವರಲ್ಲಿ ಯಾರಾದರೂ ಉತ್ತರಿಸುವ ಹೊಣೆ ವಹಿಸಬೇಕು ಎಂದರು. ಆಗ ಭಾರಿ ನೀರಾವರಿ ಮಂತ್ರಿ ಕೆ.ಎಲ್. ನಾಗೇಗೌಡರು ತಾವು ಮುಖ್ಯಮಂತ್ರಿಗಳೊಂದಿಗೆ ಮಾತನಾಡುವು ದಾಗಿ ತಿಳಿಸಿದರು.

ಕೃಷ್ಣಾ ನೀರಾವರಿ ಯೋಜನೆ ಪೂರ್ಣಗೊಳಿಸಲು ರೈತರ ಆಗ್ರಹ

ಉಳಿದಿರುವ ಒಂದು ವರ್ಷದ ಅವಧಿಯಲ್ಲಿ ಕೃಷ್ಣಾ ನೀರಾವರಿ ಯೋಜನೆ ಪೂರ್ಣಗೊಳಿಸಿ ನಮ್ಮ ಪಾಲಿನ 734, ಟಿ.ಎಂ.ಸಿ. ನೀರು ಬಳಕೆ ಮಾಡಿಕೊಳ್ಳಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಇಂಡಿ ತಾಲ್ಲೂಕು 7ನೇ ಸಮ್ಮೇಳನ ಸರ್ಕಾರಕ್ಕೆ ಒತ್ತಾಯಿಸಿದೆ. ಆಲಮಟ್ಟಿ ಅಣೆಕಟ್ಟಿನ ಗೇಟುಗಳನ್ನು ಅಳವಡಿಸಲು ಸುಪ್ರೀಂಕೋರ್ಟ್ ತನ್ನ ಒಪ್ಪಿಗೆ ನೀಡಿರುವ ದರಿಂದ ರಾಜ್ಯ ಸರ್ಕಾರ ಶೀಘ್ರ ಕ್ರಮಕ್ಕೆ ಗೊಳ್ಳುವಂತೆಯೂ ರೈತ ಸಮ್ಮೇಳನ ಒತ್ತಾಯಿಸಿದೆ.

ಸಮ್ಮೇಳನವನ್ನು ಜಿಲ್ಲಾ ಅಧ್ಯಕ್ಷರಾದ ಭೀಮಸಿ ಕಲಾದಗಿ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಈಳಿಗೇರ ಮಾತನಾಡಿದರು.

ಸಮ್ಮೇಳನಕ್ಕೆ ಶುಭಕೋರಿ ಸಿಐಟಿಯು ಮುಖಂಡ ವಿ.ಎಂ.ಸೊನ್ನದ, ಜೆಎಂಎಸ್ ನ ಲಕ್ಷ್ಮಿ ವೈಲಾರಿ, ಲಕ್ಷ್ಮಿ ಪಾಗಲ್, ಎಸ್.ಎಫ್.ಐ. ನ ಬಿ.ಡಿ.ಪಾಟೀಲ, ಡಿವೈಎಫ್ಐ ನ ಲಿಂಗರಾಜ ಬಿದರಿ ಕುಂದಿ ಮೊದಲಾದವರು ಮಾತನಾಡಿದರು. ಅಧ್ಯಕ್ಷತೆಯನ್ನು ಗ್ಯಾನಾಬಾ ಪಾಟೀಲ ವಹಿಸಿ, ರಾಮಣ್ಣಾ ಶಿರ್ಸ್ಯಾಡ ಸ್ವಾಗತಿಸಿ, ಪರಮಾತ್ಮ ಬಂದಪಟ್ಟಿ ವಂದಿಸಿದರು.

ಸಮ್ಮೇಳನದ ಅಂಗವಾಗಿ ನೂರಾರು ರೈತರ ಮೆರವಣಿಗೆಯು ಇಂಡಿಯ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು.

ನೂತನ ತಾಲ್ಲೂಕು ಸಮಿತಿ

ಅಧ್ಯಕ್ಷರು: ಸೋಮಣ್ಣಾ ಮೈತ್ರಿ, ಉಪಾಧ್ಯಕ್ಷರುಗಳು: ಬಸಪ್ಪಾ ಪರೀಟ್, ಶೈಲ ಗಬ್ಬೂರ, ಸುರೇಶಗೌಡ ಪಾಟೀಲ, ಕಾರ್ಯದರ್ಶಿ: ಪರಮಾತ್ಮ ಬಂದಪಟ್ಟಿ, ಸಹಕಾರ್ಯದರ್ಶಿಗಳು: ರಾಘವೇಂದ್ರ, ಕುಲಕರ್ಣಿ, ಶಾಂತಪ್ಪ ಶಿವಣಗಿ, ಖಜಾಂಚಿ: ರಾಮಣ್ಣ ಶಿರಶ್ಯಾಡ

'ಹೊಸ ಶತಮಾನದೆಡೆಗೆ ಯುವ ಜನ' ಸಮಾವೇಶ



ದೇಶದ ಯುವ ಜನತೆ ಕೋಮುವಾದಗಳಿಂದ ಆಕರ್ಷಿತರಾಗಿ ದಾರಿ ತಪ್ಪುತ್ತಿರುವ ಸಂದರ್ಭದಲ್ಲಿ ಬೆಂಗಳೂರು ಜಿಲ್ಲಾ ಡಿ.ವೈ.ಎಫ್.ಐ. ಸಂಘಟನೆ ಮಾರ್ಚ್ 5 ರಂದು ಹೊಸ ಶತಮಾನದೆಡೆಗೆ ಯುವ ಜನ ಎಂಬ ವಿಷಯದಡಿಯಲ್ಲಿ ಸಮಾವೇಶ ಸಂಘಟಿಸಿತು.

ಕೇಂದ್ರದ ಬಿಜೆಪಿ ಸರ್ಕಾರವು ಐ.ಎಂ.ಎಫ್. ವಿಶ್ವ ಬ್ಯಾಂಕಿನ ಆದೇಶದಂತೆ ಅಗತ್ಯವಸ್ತುಗಳ ಬೆಲೆಗಳನ್ನು ಏರಿಸಿ ಬಹು ಸಂಖ್ಯಾತ ಹಿಂದುಗಳು ಬಿಜೆಪಿ ಸರ್ಕಾರದಿಂದ ತೊಂದರೆಗೊಳಗಾಗಿದ್ದಾರೆ ಎಂದು ಸಮಾವೇಶ ಉದ್ಘಾಟಿಸಿದ ರಾಜ್ಯ ಕಾರ್ಯದರ್ಶಿ ಎಸ್. ವೈ. ಗುರುಶಾಂತ್ ಆತಂಕ ವ್ಯಕ್ತಪಡಿಸಿದರು.

ನೈಸರ್ಗಿಕ ಸಂಪನ್ಮೂಲದ ಜೊತೆಗೆ ಶ್ರಮ ಸಂಪನ್ಮೂಲವು ಸಮೃದ್ಧವಾಗಿರುವ ಭಾರತ ದೇಶವನ್ನು ಸಾಮ್ರಾಜ್ಯ ಶಾಹಿಗಳಿಗೆ ಅಡಿಯಾಳನ್ನಾಗಿ ಮಾಡಿದೆ 21 ನೇ ಶತಮಮಾನಕ್ಕೆ ಹೆಜ್ಜೆಯಿಡುವ ಸಂದರ್ಭದಲ್ಲಿ ತೀವ್ರ ರೀತಿಯ ವೈಜ್ಞಾನಿಕ ಪ್ರಗತಿಯಾಗುತ್ತಿದ್ದರೂ ಅದರ ಫಲ ಜನ ಸಾಮಾನ್ಯರಿಗೆ ಲಭ್ಯವಾಗಿಲ್ಲ ದೇಶದಲ್ಲಿ 20 ಕೋಟಿ ನಿರುದ್ಯೋಗಿಗಳು ಸೃಷ್ಠಿಯಾಗಿದ್ದಾರೆ. ಮತೀಯ ಮೂಲವಾದ ಬೆಳೆಯುತ್ತಿದ್ದು ಇಂತಹ ಸಂದರ್ಭದಲ್ಲಿ ಯುವ ಜನರನ್ನು ಹೊಸದಾರಿಗೆ ಕೊಂಡೊಯ್ಯಲು ಅವರನ್ನು ಸಂಘಟಿಸ ಬೇಕಾಗಿದೆ. ಎಂದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ ಕಾರ್ಮಿಕ ಮುಖಂಡರೂ ಆದ ಎನ್.ಕೆ. ಉಪಾಧ್ಯಾಯರು ಮಾತನಾಡಿ ಸ್ವಾತಂತ್ರ್ಯ ಹೋರಾಟದ ಚಳುವಳಿಯ ಆಶಯವನ್ನು ವಿವರಿಸಿದರು. ಸಮಾವೇಶದ ಅಧ್ಯಕ್ಷತೆಯನ್ನು ಗೋಪಾಲಕೃಷ್ಣ ವಹಿಸಿದರು.

ಇದೇ ಸಂದರ್ಭದಲ್ಲಿ ಹೊಸ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರು- ಲಕ್ಷ್ಮಣ್ ಕುಮಾರ್. ಉಪಾಧ್ಯಕ್ಷರು- ರಾಮಚಂದ್ರ, ರವಿಚಂದ್ರನ್, ಚಲುವರಾಜ್, ಕಾರ್ಯದರ್ಶಿ-ಕೆ.ಶ್ರೀನಿವಾಸ್. ಸಹಕಾರ್ಯದರ್ಶಿಗಳು ವೆಂಕಟೇಶ್, ಗೋಪಾಲ್ ಮತ್ತು ಖಜಾಂಚಿ ವೆಂಕಟರೆಡ್ಡಿ.

ಸಮಾರೋಪ ಸಮಾರಂಭದಲ್ಲಿ ಕೆ.ಪ್ರಕಾಶ್, ಗೋಪಾಲ್ ಕೃಷ್ಣ, ಮತ್ತು ಹೇಮಂತ್ ರಾಜ್ ಮೊದಲಾದವರು ಮಾತನಾಡಿದರು.

ಬೀಡಿ ಕೈಗಾರಿಕೆಗೆ ರಾಷ್ಟ್ರೀಯ ನೀತಿ ರೂಪಿಸಿ

ಸರ್ಕಾರಗಳ ತಪ್ಪು ನೀತಿಗಳಿಂದಾಗಿ ಬೀಡಿ ಕೈಗಾರಿಕೆ ಮತ್ತು 65 ಲಕ್ಷ ಬೀಡಿಕಾರ್ಮಿಕರು ಸಂಕಷ್ಟ ಎದುರಿಸುತ್ತಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಬೀಡಿ ಕಾರ್ಮಿಕರ ಒಕ್ಕೂಟ ಕಾರ್ಯದರ್ಶಿ ಜೆ. ಬಾಲಕೃಷ್ಣ ಶೆಟ್ಟಿ ಆತಂಕ ವ್ಯಕ್ತಪಡಿಸಿ ಕೂಡಲೇ ಬೀಡಿ ವಲಯಕ್ಕೆ ರಾಷ್ಟ್ರೀಯ ನೀತಿಯೊಂದನ್ನು ರೂಪಿಸುವಂತೆ ಆಗ್ರಹಿಸಿದರು.

ಅವರು ಮಾರ್ಚ್ 2 ರಂದು ನಡೆದು ದ. ಕನ್ನಡದ ವಾಮಂಜೂರು ಪ್ರದೇಶ ಬೀಡಿ ಕೆಲಸಗಾರರ ಸಂಘದ 14 ನೇ ವಾರ್ಷಿಕ ಸಭೆಯಲ್ಲಿ ಮಾತನಾಡಿದರು. ಬೀಡಿ ಕೈಗಾರಿಕೆಯಿಂದ 265 ಕೋಟಿಗೂ ಹೆಚ್ಚು ಆದಾಯ ಸಂದಾಯ ವಾಗುತ್ತಿದೆ. ಬಹುತೇಕ ತೆರಿಗೆ ವಂಚಿಸಿ ಕಾರ್ಮಿಕರಿಗೂ ಯಾವುದೇ ಸೌಲಭ್ಯ ನೀಡದಿರುವ ಮಾಲೀಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆಯೂ ಸರ್ಕಾರಕ್ಕೆ ಜೆ. ಬಾಲಕೃಷ್ಣ ಶೆಟ್ಟಿ ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ಶುಭಕೋರಿ ಸದಾಶಿವದಾಸ್ ರೈತಸಂಘದ ಬೋಜು ಕೋಟ್ಯಾನ್, ಜೆ.ಎಂ.ಎಸ್.ನ ಮಾಲತಿ ಮೊದಲಾದವರು ಮಾತನಾಡಿದರು.

ಬೀಡಿಕಾರ್ಮಿಕರಿಗೆ ವಾರದಲ್ಲಿ 6 ದಿನ ಕೆಲಸ ಕೊಡಬೇಕು ಹಾಗೂ ವಾಮಂಜೂರು ಕೆತ್ತಿಕಲ್ ಗುಡ್ಡ ಜರಿತದಿಂದಾಗಿ ನೀರು ಮನೆಗಳಿಗೆ ನುಗ್ಗವ ಸಂಭವ ಇರುವುದರಿಂದ ತೋಡುಗಳಲ್ಲಿ ಮಣ್ಣು ತೆಗೆಯ ಬೇಕು ಎಂಬತ್ಯಾದಿ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ನೂತನ ಪದಾಧಿಕಾರಿಗಳು: ಅಧ್ಯಕ್ಷರು- ಕೆ. ಮುಂಡಪ್ಪ, ಉಪಾಧ್ಯಕ್ಷೆ- ರುಕ್ಮಿಣಿ ಕಾರ್ಯದರ್ಶಿ ಕೆ. ಗಂಗಯ್ಯ ಅಮೀನ್, ಜೊತೆ ಕಾರ್ಯದರ್ಶಿ ಗಳು ಇಬ್ರಾಹಿಂ, ಪುಷ್ಪ, ಜಯ ಕೋಶಾಧಿಕಾರಿಯಾಗಿ ಬಿ.ಗೋಪಾಲ್ ಜೊತೆಗೆ 13 ಸದಸ್ಯರುಳ್ಳ ಕಾರ್ಯಕಾರಿ ಸಮಿತಿ ಆಯ್ಕೆಗೊಂಡಿತು.


ಖಾಲಿ ಹುದ್ದೆಗಳ ಭರ್ತಿಗೆ ರಾಯಚೂರು ಸಮ್ಮೇಳನದ ಒತ್ತಾಯ

ಯುವಜನತೆಯನ್ನು ಭಾದಿಸುತ್ತಿರುವ ನಿರುದ್ಯೋಗ ತೊಲಗಿಸಲು ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿಮಾಡಬೇಕೆಂದು ರಾಯಚೂರು ಜಿಲ್ಲಾ ಡಿವೈ ಎಫ್ ಐ ಅಧ್ಯಕ್ಷ ಶರಬಣ್ಣ ನಾಗಲಾಪೂರ ಸರ್ಕಾರಕ್ಕೆ ಒತ್ತಾಯಿಸಿದರು. ಅವರು ಮಾರ್ಚ್ 1ರಂದು ನಡೆದ ರಾಯಚೂರು ಮತ್ತು ಕೊಪ್ಪಳ ಜಿಲ್ಲಾ 6ನೇ ಯುವಜನ ಸಮ್ಮೇಳದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆ ಉಂಟಾಗಿದ್ದು. ಇದು ಸ್ವಾಗತಾರ್ಹವಾದರೂ ಉದ್ಯೊಗ ರಹಿತ ಬೆಳವಣಿಗೆಗೆ ಅವಕಾಶ ಮಾಡಿ ಕೊಟ್ಟಿದೆ. ಇದರಿಂದಾಗಿ ಉದ್ಯೋಗವಕಾಶ ಕಡಿತ ಗೊಳ್ಳುತ್ತಿದ್ದು ಇದು ಯುವಜನರಲ್ಲಿ ಆತಂಕ ಮೂಡಿಸಿದೆ. ಈ ಪರಿಸ್ಥಿತಿಯನ್ನು ಕೋಮುವಾದಿಗಳು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ವಿಷಾದನೀಯ ಎಂದು ಡಿವೈ ಎಫ್ ಐ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರು ಶಾಂತ್ ಹೇಳಿದರು. ಇದೇ ಸಂದರ್ಭದಲ್ಲಿ ಕ್ರೈಸ್ತ, ಅಲ್ಪಸಂಖ್ಯಾತರ ಮೇಲೆ ನಡೆಯು ತ್ತಿರುವ ಹಲ್ಲೆಯನ್ನು ಖಂಡಿಸಿದರು.

ಸಮ್ಮೇಳನವು ಜಿಲ್ಲಾಭಿವೃದ್ದಿಗೆ ಸಂಬಂಧಿಸಿದಂತೆ ಕೆಳಗಿನ ನಿರ್ಣಯಗಳನ್ನು ಕೈಗೊಂಡಿತು.

ಕೊಪ್ಪಳ-ಗದ್ವಾಲ್ ರೈಲ್ವೆ ಕಾಮಗಾರಿ ಆರಂಭಿಸಬೇಕು. ನಾರಾಯಣಪುರ ಬಲದಂಡೆ ಕಾಮಗಾರಿ ಪೂರ್ಣಗೊಳಿಸಬೇಕು. ತುಂಗಭದ್ರ ಎಡದಂಡೆನಾಲೆ ಶಾಶ್ವತ ದುರಸ್ಥಿಗೊಳಿಸಬೇಕು. ಸಿಂದನೂರು ನಗರವನ್ನು ಧೂಳಿನಿಂದ ಮುಕ್ತಗೊಳಿಸಲು ಡಾಂಬರೀಕರಣ ಮಾಡಬೇಕು, ಮತ್ತು ಶಿಕ್ಷಕಿ ನಿರ್ಮಲ ಹಾಗೂ ಅವರ ಸಹೋದರರ ಮೇಲೆ ಹಲ್ಲೆ ಮಾಡಿದವರನ್ನು ಶಿಕ್ಷೆಗೊಳಪಡಿಸುವಂತೆ ಒತ್ತಾಯಿಸಿತ್ತು.



ಸಮ್ಮೇಳನವು 21 ಸದಸ್ಯರುಗಳ ಹೊಸ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಿತು.

ಬಿಜಾಪುರ ಜಿಲ್ಲಾ ಸಮಾವೇಶ

ಫೆಬ್ರವರಿ 25 ರಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ಜಿಲ್ಲಾ ಸಮಿತಿ ಸಮಾವೇಶವೊಂದನ್ನು ಸಂಘಟಿಸಿತ್ತು. ಸಮಾವೇಶ ಉದ್ಘಾಟಿಸಿದ ಹಿರಿಯ ಕಾರ್ಮಿಕ ಮುಖಂಡರಾದ ಎನ್.ಕೆ.ಉಪಾಧ್ಯಾಯ ಮಾತನಾಡಿ ಕೇಂದ್ರದ ಬಿಜೆಪಿ ಸರ್ಕಾರವು ಕಾಂಗ್ರೆಸ್ಸಿನ ಹೊಸ ಆರ್ಥಿಕ ನೀತಿಯನ್ನು ಮುಂದುವರಿಸಿ ಯುವಜನತೆಯನ್ನು ನಿರುದ್ಯೋಗದ ಕೂಪಕ್ಕೆ ತಳ್ಳುತ್ತಿದೆ ಎಂದರು. **ನಿರುದ್ಯೋಗ, ಬಡತನ, ಸಮಾಜ ಕಲ್ಯಾಣ ರೂಪಿಸಬೇಕಾದ** ಸರ್ಕಾರ ಮತೀಯ ಭಾವನೆ ತಳೆದು ಯುವಜನರನ್ನು ತಪ್ಪುದಾರಿಗೆಳೆಯುತ್ತಿದೆ. ಆದ್ದರಿಂದ ಯುವ ಜನರು ಎಚ್ಚೆತ್ತು ಸಂಘಟಿತ ಹೋರಾಟದ ಮೂಲಕ ಸರಿದಾರಿ ತುಳಿಯಬೇಕೆಂದರು.

ಮುಖ್ಯ ಅತಿಥಿಗಳಾಗಿ ರಾಜ್ಯ ಕಾರ್ಯದರ್ಶಿ ಎಸ್.ವೈ.ಗುರುಶಾಂತ್ ಮಾತನಾಡಿ ಯುವ ಜನತೆ ಕೋಮುವಾದದಿಂದ ದೂರ ಸರಿದು ಸಮ ಸಮಾಜದ ಏಳಿಗೆಗೆ ಶ್ರಮಿಸಬೇಕೆಂದು ಕರೆ ನೀಡಿದರು.

ಸಮಾವೇಶದಲ್ಲಿ ವಿ.ಎಂ.ಕಾಳೆ, ಗೌರಿಶಂಕರ ಗಾಂಧಿ, ವಿ.ಎಂ.ಸೊನ್ನದ, ಆರ್.ಹೆಚ್.ಕಲಾದಗಿ ಮಾಸ್ತರರು, ರೈತ ಸಂಘದ ಭೀಮಸಿ ಕಲಾದಗಿ, ಅಣ್ಣರಾಯ ಈಳೀಗೇರ, ಸುರೇಖಾ ರಜಪೂತ, ಬಂಡಿ ಪಾಟೀಲ ಮೊದಲಾದವರು ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಲಿಂಗರಾಜು ಬಿದರಕುಂದಿ ಕಾರ್ಯಕ್ರಮ ನಿರ್ವಹಿಸಿದರು. ಲಕ್ಷ್ಮಿ ವೈಲಾರಿ ಕ್ರಾಂತಿಗೀತೆಯೊಂದಿಗೆ ಪ್ರಾರಂಭವಾದ ಸಮಾವೇಶ ಸಿದ್ದಣ್ಣಾ ಐರೋಡಗಿಯವರ ವಂದನೆಯೊಂದಿಗೆ ಮುಕ್ತಾಯಗೊಂಡಿತು.

ಕೋಮುವಿರೋಧಿ ಸಮಾವೇಶ

ರಾಯಚೂರು: ಭಾರತ ವಿದ್ಯಾರ್ಥಿ ಫೆಡರೇಷನ್ ಮತ್ತು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು)ನ ಸಂಯುಕ್ತ ಆಶ್ರಯದಲ್ಲಿ ಜಿಲ್ಲಾ ಮಟ್ಟದ 'ಕೋಮುವಿರೋಧಿ ಸಮಾವೇಶ' ಇತ್ತೀಚೆಗೆ ಕೃಷಿ ಭವನದಲ್ಲಿ ನಡೆಯಿತು.

ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ದೇಶದಲ್ಲಿ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಸಮುದಾಯಗಳ ಮೇಲೆ ನಿರಂತರ ಹಲ್ಲೆ ನಡೆಯುತ್ತಿದೆ. ಬಿಜೆಪಿ ಸರ್ಕಾರವು ದೇಶದ ಜಾತ್ಯಾತೀತ ಸಂವಿಧಾನವನ್ನು ತಿರುಚಲು ಯತ್ನಿಸಿ ನಂತರ ಜನತೆಯ ತೀವ್ರ ಪ್ರತಿಭಟನೆಯಿಂದ ಕೈಬಿಡಬೇಕಾಯಿತೆಂದು ಸಮಾವೇಶ ಉದ್ಘಾಟಿಸಿದ ಸಿಐಟಿಯು ರಾಜ್ಯಾಧ್ಯಕ್ಷರಾದ ಎಸ್.ಸೂರ್ಯ ನಾರಾಯಣ ರಾವ್ ಬಿಜೆಪಿಯ ಒಳ ಹುನ್ನಾರವನ್ನು ಬಿಡಿಸಿದರು.

ಆರ್.ಎಸ್.ಎಸ್., ಭಜರಂಗದಳ, ವಿಶ್ವಹಿಂದೂಪರಿಷತ್‌ಗಳ ಕೈಗೆ ಅಧಿಕಾರ ಒಪ್ಪಿಸಿರುವ ವಾಜಪೇಯಿ ದೇಶ ಕಂಡ ದುರ್ಬಲ ಪ್ರಧಾನಿ ಎಂದರು. ದೇಶದ ಹಿಂದೂ ಮುಸ್ಲಿಂ, ಕ್ರಿಶ್ಚಿಯನ್ ಸಹಬಾಳ್ವೆ ನಡೆಸುವುದರ ಮುಖಾಂತರ ದೇಶದ ಸಾಮರಸ್ಯ ಕಾಪಾಡಬೇಕೆಂದು ಸೂರಿಯವರು ಕರೆ ನೀಡಿದರು.

ಸಮಾವೇಶದಲ್ಲಿ ರೈತಸಂಘದ ಚಂದ್ರಶೇಖರ ಬಾಳೆ, ಸೆಂಟ್ ಫ್ರಾನ್ಸಿಸ್ ಜೇವಿಯರ್ ಚರ್ಚ್‌ನ ಮುಖ್ಯಸ್ಥರಾದ ಫ್ರಾನ್ಸಿಸ್ ಭಗವಂತರಾಜ, ಎಐಟಿಯುಸಿಯ ಸೈಯದ್ ಸಿಬ್ಗತುಲ್ಲಾ, ಖಾಜಾ ಅಜ್ಮೇರ, ರೆವರೆಂಡ್ ಡಿ.ಡೇವಿಡ್ ಪಾಸ್ಟರ್, ಎಸ್.ಎಫ್.ಐ.ನ ಡಿ.ಎಸ್.ಶರಣ ಬಸವ ಮೊದಲಾದವರು ಮಾತನಾಡಿದರು. ತಿಪ್ಪಯ್ಯ ನಾಯಕ ಸ್ವಾಗತಿಸಿ ಕೆ.ಜಿ.ವೀರೇಶ ವಂದಿಸಿದರು.

ಸಮಾವೇಶದ ಪ್ರಾರಂಭದಲ್ಲಿ 500 ಕ್ಕೂ ಹೆಚ್ಚು ಜನರು ಕೋಮು ವಿರೋಧಿ ರ್‍ಯಾಲಿ ನಡೆಸಿದರು.

ಸಹಿ ಸಂಗ್ರಹ ಚಳುವಳಿ ಉದ್ಘಾಟನೆ

ಹೊನ್ನಾವರ: ಭಾರತ ದೇಶದ ಸಾರ್ವಭೌಮತೆ, ಕೋಮು ಸೌಹಾರ್ದತೆ ಕಾಪಾಡಲು ಕೋಮುವಾದದ ವಿರುದ್ಧ ಕೋಟಿ ಸಹಿ ಸಂಗ್ರಹ ಚಳುವಳಿಯ ಅಂಗವಾಗಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕಾಸರಗೋಡು ಗ್ರಾಮದಲ್ಲಿ ಮಾರ್ಚ್ 6 ರಂದು ಸಹಿ ಸಂಗ್ರಹ ಚಳುವಳಿ ಉದ್ಘಾಟನೆಯಾಯಿತು. ಸಿಪಿಐ(ಎಂ) ಜಿಲ್ಲಾ ಮುಖಂಡರಾದ ತಿಲಕಗೌಡ ಮತ್ತು ಸುಭಾಶ್ ಕೊಪ್ಪಿಕರ್ ಸಹಿ ಮಾಡುವ ಮೂಲಕ ಉದ್ಘಾಟಿಸಿದರು. ನೂರಾರು ನಾಗರೀಕರು ಮತ್ತು ಕಾರ್ಮಿಕರು ಸಹಿಮಾಡಿದರು.

ನಂತರ ಮಾತಾಡಿದ ಮುಖಂಡರು ಕೋಮುವಾದದ ಅಪಾಯವನ್ನು ವಿವರಿಸಿ ಎಲ್ಲಾ ಜನ ಸಮುದಾಯ ಈ ಚಳುವಳಿಯಲ್ಲಿ ಭಾಗವಹಿಸುವಂತೆ ಕರೆನೀಡಿದರು.

ಶುಭಾಶಯಗಳು

ವಿದ್ಯಾರ್ಥಿ ಮುಖಂಡ ಚಂದ್ರಪ್ಪ ಹೊಸ್ಕೇರ ಮತ್ತು ಟಿ.ಆರ್. ವೇದಾವತಿ ತಮ್ಮ ಮದುವೆಯ ನೆನಪಾಗಿ ಐಕ್ಯರಂಗಕ್ಕೆ 200 ರೂಗಳ ಕಾಣಿಕೆ ನೀಡಿದ್ದಾರೆ. ಅವರ ನವ ಬದುಕಿಗೆ 'ಐಕ್ಯರಂಗ'ದ ಶುಭಾಶಯಗಳು.

ಚಿಕ್ಕಬಳ್ಳಾಪುರ ತಾಲೂಕಿನ ಪಿ.ಸರ್ದಾರ್ ಚಾಂದ್ ಪಾಷಾ ಮತ್ತು ರಫಿ ಉನ್ನೀಸಾರವರ ವಿವಾಹದ ನೆನಪಿಗಾಗಿ 'ಐಕ್ಯರಂಗ'ಕ್ಕೆ ತಲಾ 101 ರೂ ಗಳನ್ನು ಕಾಣಿಕೆಯಾಗಿ ನೀಡಿರುತ್ತಾರೆ.


ಈ ದಂಪತಿಗಳಿಗೆ 'ಐಕ್ಯರಂಗ' ಬಳಗದ ಶುಭಾಶಯಗಳು

ಶ್ಯಾಮಸುಂದರ್ ಮಹೇಂದ್ರಕರ್ ಹಾಗೂ ವಸಂತಕುಮಾರ್ ಮಹೇಂದ್ರಕರ್ ರವರುಗಳ ವಿವಾಹವು ಫೆಬ್ರವರಿ 20 ರಂದು ರಾಯಚೂರು ಜಿಲ್ಲೆಯ ಜಾಲಹಳ್ಳಿಯಲ್ಲಿ ಜಂಟಿಯಾಗಿ ನಡೆಯಿತು.

ಈ ಸವಿನೆನಪಿಗೆ ಐಕ್ಯರಂಗಕ್ಕೆ 100 ರೂಗಳ ಕಾಣಿಕೆ ನೀಡಿರುತ್ತಾರೆ. ಅವರಿಗೆ ಐಕ್ಯರಂಗದ ಶುಭಾಶಯಗಳು.

ಯಶಸ್ವಿ ಎಐಕೆಎಸ್ ಸಮ್ಮೇಳನ

ಹೊಸ ಸನ್ನಿವೇಶದ ಸವಾಲುಗಳಿಗೆ ಉತ್ತರಿಸಲು ಸಜ್ಜಾಗಲು ಕರೆ



ವರದಿ: ಕೆ.ಪ್ರಕಾಶ್

ಅಖಿಲ ಭಾರತ ಕಿಸಾನ್ ಸಭಾದ 29 ನೇ ಸಮ್ಮೇಳನ ಮಾರ್ಚ್ 5-8, 1999 ರವರೆಗೆ ಕೇರಳದ ಕಲ್ಲಿಕೋಟೆಯಲ್ಲಿ ಅತ್ಯಂತ ಯಶಸ್ವಿಯಾಗಿ ಜರುಗಿತು. ದೇಶದ 20 ರಾಜ್ಯಗಳಿಂದ 1,28,45,248 ಸದಸ್ಯತ್ವವನ್ನು ಪ್ರತಿನಿಧಿಸಿ 699 ಪ್ರತಿನಿಧಿಗಳು ಭಾಗವಹಿಸಿದ್ದ ಈ ಸಮ್ಮೇಳನವು ಒಟ್ಟಾರೆ ಬದಲಾಗುತ್ತಿರುವ ಸನ್ನಿವೇಶದಲ್ಲಿ ಒಂದು ಮೈಲಿಗಲ್ಲಾಗಿದೆ.

ಮಾರ್ಚ್ 5 ರಂದು ಮುಂಜಾನೆ ಇ.ಎಂ.ಎಸ್. ನಗರದಲ್ಲಿ (ಠಾಗೋರ್ ಮೆಮೋರಿಯಲ್ ಹಾಲ್) ಕಿಸಾನ್ ಸಭಾದ ಅತ್ಯಂತ ಹಿರಿಯ ಸಂಗಾತಿ ಕಾಂ|| ಹರ್ಕಿಷನ್ ಸಿಂಗ್ ಸುರ್ಜಿತ್ ರವರಿಂದ ಧ್ವಜಾರೋಹಣದೊಂದಿಗೆ ಸಮ್ಮೇಳನದ ಚಟುವಟಿಕೆಗಳು ಆರಂಭಗೊಂಡವು.

ಸುರ್ಜಿತ್‌ರಿಂದ ಉದ್ಘಾಟನೆ

ಕಾಂ|| ಹರ್ಕಿಷನ್ ಸಿಂಗ್ ಸುರ್ಜಿತ್‌ರವರು ಸಮ್ಮೇಳನದ ಉದ್ಘಾಟನೆಯನ್ನು ಮಾಡುತ್ತಾ 1936 ರಲ್ಲಿ ಲಕ್ನೋದಲ್ಲಿ ಸಣ್ಣ ಶಕ್ತಿಯಾಗಿ ಪ್ರಾರಂಭಗೊಂಡ ಕಿಸಾನ್ ಸಭಾ ಇಂದು ಬೃಹತ್ ಶಕ್ತಿಯಾಗಿ ಬೆಳೆಯುತ್ತಿದೆ. ಮಾಪಿಳ್ಳೆ ದಂಗೆ, ಕಯ್ಯೂರು ಹುತಾತ್ಮರ ಹೋರಾಟ, ಕರಿವೆಳ್ಳೂರು ಕವುಂಬಾಯಿ ಫೈರಿಂಗ್ ಇತ್ಯಾದಿ ಹೋರಾಟಗಳ ನಾಡಾದ ಮಲಬಾರ್ ಪ್ರಾಂತ್ಯದ ಕಲ್ಲಿಕೋಟೆಯಲ್ಲಿ ಸಮ್ಮೇಳನ ನಡೆಯುತ್ತಿದೆ ಎಂದು ಸುರ್ಜಿತ್ ನೆನಪಿಸಿದರು. ಕಿಸಾನ್ ಸಭಾ ಪ್ರಾರಂಭಗೊಂಡಾಗ ಇದ್ದ ಪ್ರಶ್ನೆಗಳಿಗೂ ಮತ್ತು ಇಂದಿನ ಪ್ರಶ್ನೆಗಳಿಗೂ ಅಪಾರ ವ್ಯತ್ಯಾಸವಾಗಿದ್ದರೂ, ಹಲವಾರು ಪ್ರದೇಶಗಳಲ್ಲಿ ಭೂಮಿ ಸಂಬಂಧಗಳಲ್ಲಿ ಬದಲಾವಣೆಗಳಾಗಿದ್ದರೂ, ಭೂಮಿ ಪ್ರಶ್ನೆಯು ಇಂದಿಗೂ ಅತ್ಯಂತ ಪ್ರಮುಖವಾದ ವಿಷಯವಾಗಿದೆ ಎಂದರು.

ಕೃಷಿ ಕ್ಷೇತ್ರದಲ್ಲಿ, ವಿಜ್ಞಾನ ತಂತ್ರಜ್ಞಾನದ ಕ್ರಾಂತಿ ಹಸಿರು ಕ್ರಾಂತಿ, ಮತ್ತು ಬಹಳ ಮುಖ್ಯವಾಗಿ ಬಂಡವಾಳಶಾಹಿ ಸಂಬಂಧಗಳು ಅಪಾರ ಬದಲಾವಣೆಗಳನ್ನು ತಂದಿದ್ದು ಹೊಸ ಸವಾಲುಗಳನ್ನು ಸೃಷ್ಟಿಸಿದೆ. ಇವುಗಳನ್ನು ಸರಿಯಾಗಿ ಅರ್ಥೈಸಿಕೊಂಡು ಅದಕ್ಕೆ ಸರಿಯಾದ ಮತ್ತು ನಿರ್ದಿಷ್ಟವಾದ ಘೋಷಣೆಗಳನ್ನು ರೂಪಿಸುವುದು ಅಗತ್ಯವಾಗಿದೆ ಎಂದರು.

ಜಾಗತೀಕರಣ ಮತ್ತು ಉದಾರೀಕರಣದ ನೀತಿಗಳ ಜಾರಿಯಿಂದಾಗಿ ಕಳೆದ ದಶಕದಲ್ಲಿ ಕೃಷಿ ರಂಗವು ನಾಟಕೀಯವಾದ ತಿರುವನ್ನು ಪಡೆದಿದೆ. ಕೃಷಿ ಬೆಳವಣಿಗೆಯು ಕುಸಿದಿರುವುದರ ಪರಿಣಾಮವಾಗಿ ಆಹಾರ ಧಾನ್ಯಗಳ ಉತ್ಪಾದನೆಯ ವೇಗವು ಶೇ. 1.5ಕ್ಕೆ ಇಳಿದಿದೆ. ಕೃಷಿಯ ಮಂದಗತಿಯ ಬೆಳವಣಿಗೆ ಮತ್ತು ಆಹಾರಧಾನ್ಯಗಳ ಉತ್ಪಾದನೆಯಲ್ಲಿ ಕುಸಿತ ಉಂಟಾಗಿದ್ದರೂ ಕೇಂದ್ರ ಸರ್ಕಾರದ ಯೋಜನಾ ವೆಚ್ಚವು ಇಳಿಮುಖದಲ್ಲಿದೆ. ಇದು ಎಲ್ಲಾ ಅಗತ್ಯವಸ್ತುಗಳ ಬೆಲೆಗಳನ್ನು ಮತ್ತಷ್ಟು ಏರಿಸಲಿದೆ. ಐ.ಎಂ.ಎಫ್. ಮತ್ತು ವಿಶ್ವ ಬ್ಯಾಂಕ್‌ಗಳ ಷರತ್ತುಗಳಿಂದಾಗಿ ಆಹಾರ ರಕ್ಷಣೆಯ ಗಂಭೀರವಾದ ಬೆದರಿಕೆಯನ್ನು ಎದುರಿಸುತ್ತಿದೆ, ಎಂದು ಸುರ್ಜೀತ್ ಹೇಳಿದರು. ಭೂಮಿಯನ್ನು ವಾಣಿಜ್ಯ ಬೆಳೆಗಳಿಗೆ ಪರಿವರ್ತಿಸುವ ಮತ್ತು ಆಹಾರ ಪದಾರ್ಥಗಳಿಗೆ ಆಂತರಿಕವಾಗಿ ಕೊರತೆಯಿದ್ದರೂ ವಿದೇಶಗಳಿಗೆ ನೇರವಾಗಿ ರಫ್ತು ಮಾಡುವ ಪ್ರಕ್ರಿಯೆಯು ಇಂದಿನ ಉದಾರೀಕರಣ ಯುಗದಲ್ಲಿ ಹೆಚ್ಚುತ್ತಿದೆ. 1990 ರಲ್ಲಿ ಧಾನ್ಯಗಳು ಮತ್ತು ಬೇಳೆಗಳನ್ನು ಒಟ್ಟಾರೆ ಬಿತ್ತನೆ ಮಾಡಿದ್ದ ಪ್ರದೇಶದ ಶೇ. 4 ರಷ್ಟು ಈಗ ಸೋಯಾ, ಎಣ್ಣೆ ಬೀಜಗಳು ಮತ್ತು ಹತ್ತಿಯ ಪ್ರದೇಶವಾಗಿದೆ. 1960ರ ನಂತರ ಇದೇ ಮೊದಲು ಬಾರಿಗೆ ಆಹಾರದ ಉತ್ಪಾದನೆಯು, ಜನಸಂಖ್ಯಾ ಬೆಳವಣಿಗೆಗಿಂತ ಹಿಂದೆ ಬಿದ್ದಿದೆ ಎಂದು ಸುರ್ಜಿತ್‌ರವರು ಹೇಳಿದರು.

ಉದಾರೀಕರಣ ನೀತಿಯ ಮತ್ತೊಂದು ಅಂಶವೇನೆಂದರೆ ದೊಡ್ಡ ಬಂಡವಾಳದಾರರು ಮತ್ತು ಬಹುರಾಷ್ಟ್ರೀಯ ಕಂಪನಿಗಳು ವಿಶಾಲವಾದ ಭೂಮಿಯನ್ನು ಕೊಳ್ಳಲು ಅನುವು ಮಾಡಿಕೊಡುವ ಭೂಮಿತಿ ಕಾಯ್ದೆಯ ತಿದ್ದುಪಡಿಗಳಾಗಿವೆ. ಭೂರಹಿತರಿಗೆ ಭೂಮಿಯನ್ನು ಹಂಚುವ ಬದಲಿಗೆ ಅದನ್ನು ಇವರಿಗೆ ಒಪ್ಪಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಜೊತೆಗೆ, ಸಾಮಾಜಿಕ ಜವಾಬ್ದಾರಿಗಳಿಂದ ಸರ್ಕಾರ ತಪ್ಪಿಸಿಕೊಳ್ಳುತ್ತಿರುವುದರ ಕಾರಣದಿಂದ, ನೀರಾವರಿ, ವಿದ್ಯುತ್, ಮೂಲ ಸೌಲಭ್ಯಗಳು ಮತ್ತು ಸಂಶೋಧನೆ-ಅಭಿವೃದ್ಧಿಯ ವೆಚ್ಚಗಳಲ್ಲಿ ವಿಪರೀತವಾದ ಕಡಿತಗಳಾಗುತ್ತಿವೆ. ವಿದ್ಯುತ್‌ನ ಖಾಸಗೀಕರಣವು ಕೃಷಿ ರಂಗವನ್ನು ತೀವ್ರವಾಗಿ ಭಾದಿಸುತ್ತಿದೆ. ಇಲ್ಲೆಲ್ಲಾ ಸರ್ಕಾರವು ಬಂಡವಾಳ ಹೂಡಿಕೆಯನ್ನು ಕಡಿತಗೊಳಿಸುತ್ತಿರುವು ದರಿಂದ ರೈತ ಚಳುವಳಿಯ ಮುಂದೆ ಹೊಸ ಸವಾಲುಗಳು ಸೃಷ್ಟಿಯಾಗಿವೆ ಎಂದು ಸುರ್ಜಿತ್‌ರವರು ಹೇಳಿದರು.

1994 ರ ಮಾರಕೇಶ್ ಒಪ್ಪಂದದ ನಂತರ ಬಿಜೆಪಿ ಸರ್ಕಾರವು ಪೇಟೆಂಟ್ ಕಾಯ್ದೆಗೆ ತಿದ್ದುಪಡಿಯನ್ನು ತಂದು ಸುಗ್ರೀವಾಜ್ಞೆ ಹೊರಡಿಸಿದೆ. ಭಾರತವು ಸಸ್ಯ ಮತ್ತು ಪ್ರಾಣಿ ತಳಿಗಳಿಗೆ ಪೇಟೆಂಟ್ ವ್ಯವಸ್ಥೆಯನ್ನು ಜಾರಿಗೊಳಿಸುವುದು ಈ ಒಪ್ಪಂದದ ಅಗತ್ಯವಾಗಿದೆ. ಇದರಿಂದಾಗಿ, ಬೀಜ ಮತ್ತು ಬೆಳೆಗಳ ಮೇಲೆ ಬ.ರಾ. ಕಂಪನಿಗಳಿಗೆ ಹಾಗೂ ಏಕಸ್ವಾಮ್ಯದಾರರಿಗೆ ಸಂಪೂರ್ಣ ಹಿಡಿತ ಉಂಟಾಗುತ್ತದೆ. ಇದರಿಂದಾಗುವ ಅಪಾಯವನ್ನು ಈಗ ಬಾಸುಮತಿ ಮತ್ತು ಹಿಂದೆ ಹರಿಷಿಣ ಮತ್ತು ಬೇವುಗಳಲ್ಲಿ ಕಂಡಿದ್ದೇವೆ. ಪೇಟೆಂಟ್ ಕಾಯ್ದೆ ತರಲು ಹೊರಟಿರುವ ತಿದ್ದುಪಡಿಯಿಂದ ತೀವ್ರವಾದ ಹೊಡೆತ ಬೀಳುವುದು ಕೃಷಿ ಮತ್ತು ಆರೋಗ್ಯ ರಕ್ಷಣೆಯ ಮೇಲೆ. ಆದ್ದರಿಂದ ಇದರ ಅಪಾಯಗಳ ಬಗ್ಗೆ ತೀವ್ರವಾದ ಚಳುವಳಿಯನ್ನು ಕಟ್ಟುವ ಅಗತ್ಯವನ್ನು ಸುರ್ಜಿತ್‌ರವರು ಒತ್ತಿ ಹೇಳಿದರು.

ಕೃಷಿ ಕ್ಷೇತ್ರದಲ್ಲಿ ಹಣಕಾಸು ಸಂಸ್ಥೆಗಳ ಪ್ರವೇಶದಿಂದ ಉಂಟಾಗುವ ಅಪಾಯಗಳ ಬಗ್ಗೆ ಸುರ್ಜಿತ್ ಎಚ್ಚರಿಸಿದರು ಮತ್ತು ಇಂದಿನ ಕೃಷಿರಂಗದ ಒಟ್ಟಾರೆ ಬಿಕ್ಕಟ್ಟುಗಳನ್ನು ವಿವರಿಸಿದರು.

ಆದ್ದರಿಂದಾಗಿ ಭೂಮಾಲಿಕತ್ವದ ಸಂಪೂರ್ಣ ನಾಶ ಮತ್ತು ಭೂರಹಿತರಿಗೆ ಭೂಮಿ ಹಂಚುವುದು ಕಾರ್ಷಿಕ ಕ್ರಾಂತಿಯ ಕೇಂದ್ರೀಯ ಘೋಷಣೆಯಾಗಿ ಇಂದಿಗೂ ಮುಂದುವರೆದಿದೆ. ಇದಕ್ಕಾಗಿ ಹೋರಾಡುವಾಗಲೇ ಹೆಚ್ಚುವರಿ ಭೂಮಿಯ ವಿತರಣೆ, ಬೆಳೆಗಳ ರಕ್ಷಣೆ, ಆದಿವಾಸಿಗಳ ಭೂರಕ್ಷಣೆ, ಭೂದಾಖಲೆಗಳ ಸೃಷ್ಟಿ ಇತ್ಯಾದಿ ತಕ್ಷಣದ ಪ್ರಶ್ನೆಗಳ ಮೇಲೆ ಚಳುವಳಿ ರೂಪಿಸುವುದು ಅಗತ್ಯವಾಗಿದೆ.

ಈ ಉದ್ದೇಶಕ್ಕಾಗಿ ಹೋರಾಡುವಾಗ ಪ್ರತಿ ರಾಜ್ಯ ಅಥವಾ ಪ್ರದೇಶದಲ್ಲಿನ ನಿರ್ದಿಷ್ಟ ಸನ್ನಿವೇಶವನ್ನು ರೈತ ರಾಜಕೀಯ ಪ್ರಜ್ಞೆಯನ್ನು ಮತ್ತು ನಮ್ಮ ಸಂಘಟನಾ ಶಕ್ತಿಯನ್ನು ಗಣನೆಗೆ ತೆಗೆದುಕೊಳ್ಳ ಬೇಕೆಂದು ಸುರ್ಜಿತ್‌ರವರು ಎಚ್ಚರಿಸಿದರು.

ಈ ನಿಟ್ಟಿನಲ್ಲಿ ಇತರೆ ದುಡಿಯುವ ಜನ ವಿಭಾಗಗಳು ಮತ್ತು ದುರ್ಬಲ ವರ್ಗಗಳ ಜೊತೆಗಿನ ಐಕ್ಯತೆಯನ್ನು ಕಾಪಾಡಲು ಕಿಸಾನ್ ಸಭಾ ಮುಂದಿರಬೇಕೆಂದು ಉದ್ಘಾಟನೆ ಮಾಡುತ್ತಾ ಸುರ್ಜಿತ್‌ರವರು ಕರೆ ನೀಡಿದರು.

ಕರಡು ವರದಿಯ ಚರ್ಚೆ

ತೀವ್ರವಾಗಿ ಬದಲಾಗುತ್ತಿರುವ ಸನ್ನಿವೇಶದ ಹೊಸ ಕಣ್ಣೋಟವನ್ನು ನೀಡುವ ಕರಡು ವರದಿಯನ್ನು ಮಂಡಿಸಿದ್ದು ಸಂಘಟನೆಯ ಪ್ರಬುದ್ಧತೆಯನ್ನು ಎತ್ತಿ ಹಿಡಿದ ಅಂಶವಾಗಿತ್ತು. ವರದಿಯಲ್ಲಿ 28 ನೇ ಸಮ್ಮೇಳನದ ತೀರ್ಮಾನಗಳ ಜಾರಿಗೆ

→



ನೂತನ ಅಧ್ಯಕ್ಷರು

ಸಮ್ಮೇಳನವು AIKS ನ ನೂತನ ಅಧ್ಯಕ್ಷರನ್ನಾಗಿ ಕಾಂ|| ಎಸ್. ರಾಮಚಂದ್ರನ್ ಪಿಳ್ಳೆಯವರನ್ನು ಅವಿರೋಧವಾಗಿ ಆಯ್ಕೆ ಮಾಡಿತು.

ನೂತನ AIKC

123 ಸದಸ್ಯರ (3 ಸ್ಥಾನ ಖಾಲಿ) ಅಖಿಲ ಭಾರತ ಕಿಸಾನ್ ಕೌನ್ಸಿಲ್‌ನ್ನು ಸರ್ವಾನುಮತದಿಂದ ನಂತರ ಆಯ್ಕೆ ಮಾಡಲಾಯಿತು.

ನೂತನ CKC

ಪ್ರತ್ಯೇಕವಾಗಿ ಸಭೆ ಸೇರಿದ AIKC ಯು 42 ಸದಸ್ಯರ ಕೇಂದ್ರ ಕಿಸಾನ್ ಕೌನ್ಸಿಲ್‌ನ್ನು ಆಯ್ಕೆ ಮಾಡಿತು. ಪ್ರಧಾನ ಕಾರ್ಯದರ್ಶಿಗಳಾಗಿ ಕಾಂ|| ಕೆ. ವರದರಾಜನ್ ಆಯ್ಕೆಯಾದರು.

ಕರ್ನಾಟಕದಿಂದ:

ಕರ್ನಾಟಕದಿಂದ AIKC ಗೆ 4 ಸದಸ್ಯರು ಆಯ್ಕೆಯಾದರು - ಮಾರುತಿ ಮಾನಪಡೆ, ಜಿ.ಸಿ. ಬಯ್ಯಾರೆಡ್ಡಿ, ಯು. ಬಸವರಾಜ್ ಮತ್ತು ಪಿ. ಜಗನ್ನಾಥ್

ಇದರಲ್ಲಿ ಕಾಂ|| ಮಾರುತಿ ಮಾನಪಡೆಯವರು CKC ಯ ಸದಸ್ಯರಾಗಿ ಆಯ್ಕೆಯಾದರು.

20 ರಾಜ್ಯಗಳಿಂದ ಬಂದಿದ್ದವರಲ್ಲಿ 652 ಪ್ರತಿನಿಧಿಗಳು ಮತ್ತು 47 ವೀಕ್ಷಕರಿದ್ದರು. ಒಟ್ಟಾರೆ 21 ಮಹಿಳಾ ಪ್ರತಿನಿಧಿಗಳಿದ್ದರು. ಕರ್ನಾಟಕದಿಂದ 11 ಪ್ರತಿನಿಧಿಗಳು ಹಾಗೂ 3 ವೀಕ್ಷಕರು ಭಾಗವಹಿಸಿದ್ದರು. ಜೊತೆಗೆ AIAWU ನ ಸೌಹಾರ್ದ ಪ್ರತಿನಿಧಿಯಾಗಿ ಜಿ.ಎನ್. ನಾಗರಾಜ್ ಮತ್ತು SFI ನ ಸೌಹಾರ್ದ ಪ್ರತಿನಿಧಿಯಾಗಿ ಕೆ. ಪ್ರಕಾಶ್ ಭಾಗವಹಿಸಿದ್ದರು.

ಶುಭಾಶಯ ಕೋರಿದವರು

ಕಾಂ|| ಪ್ರೆಡ್ಡೀ ಹಕ್, ಅಧ್ಯಕ್ಷರು, ಟ್ರೇಡ್ ಯೂನಿಯನ್ಸ್ ಇಂಟರ್‌ನ್ಯಾಷನಲ್.
ಕಾಂ|| ಅತುಲ್ ಕುಮಾರ್ ಅಂಜನ್, ಪ್ರ. ಕಾರ್ಯದರ್ಶಿ AIKS (CPI)
ಕಾಂ|| ಬೀರ್ ಸಿಂಗ್ ಮಹತೋ, ಪ್ರ. ಕಾರ್ಯದರ್ಶಿ ಅ.ಭಾ. ಅಗ್ರಗಾಮಿ ಕಿಸಾನ್ ಸಭಾ
ಕಾಂ|| ಎಂ.ಕೆ. ಪಂಧೆ, ಪ್ರ ಕಾರ್ಯದರ್ಶಿ, CITU,
ಕಾಂ|| ಎ. ವಿಜಯರಾಘವನ್, ಪ್ರ ಕಾರ್ಯದರ್ಶಿ, AIAWU
ಕಾಂ|| ಕೃಷ್ಣ ದಾಸ್ , ಅಧ್ಯಕ್ಷರು ,DYFI
ಕಾಂ|| ಪಿ. ಕೃಷ್ಣಪ್ರಸಾದ್, ಸಹಕಾರ್ಯದರ್ಶಿ, ಎಸ್.ಎಫ್.ಐ.



ಸಮ್ಮೇಳನದಲ್ಲಿ ಭಾಗವಹಿಸಿದ್ದವರು

- 1943 ರಲ್ಲಿ ಕಯ್ಯೂರು ಹೋರಾಟದಲ್ಲಿ ನೇಣುಗಂಬ ಏರಿದವರು ನಾಲ್ವರು, ಸಣ್ಣ ವಯಸ್ಸಿನ ಕಾರಣದಿಂದ ನೇಣಿನ ಬದಲಿಗೆ ಜೀವಾವಧಿ ಶಿಕ್ಷೆ ಅನುಭವಿಸಿದವರು ಒಬ್ಬರು- ಚೂರಿಕ್ಕಾಡನ್ ಕೃಷ್ಣನ್ ನಾಯರ್ - ಈಗ ಹಿರಿಯ ಸಂಗಾತಿ ಇವರು ಬಂದಿದ್ದರು.
- ಬಿಹಾರದಲ್ಲಿ ಭೂಮಾಲಿಕರ ಪಿತೂರಿಗೆ ಬಲಿಯಾದವರು ಅಜಿತ್ ಸರ್ಕಾರ್. ಇವರ ಹೆಂಡತಿ ಶಿಕ್ಷಕಿಯಾಗಿದ್ದ ಮಾಧವಿ ಸರ್ಕಾರ್ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದಾರೆ. ಅಜಿತ್ ಸರ್ಕಾರ್ ಕ್ಷೇತ್ರದಲ್ಲಿ ಜನ ಇವರನ್ನು ಶಾಸಕಿಯನ್ನಾಗಿ ಗೆಲ್ಲಿಸಿದ್ದಾರೆ. ಶಿಕ್ಷಕಿ ಈಗ ರೈತ ಹೋರಾಟಗಾರ್ತಿ
- ನಮ್ಮವರೇ ಆದ ಭೀಮಸಿಯನ್ನು ಬರಿಗಾಲ ಗಾಂಧಿ ಎಂದಿದ್ದರು. ಸಮ್ಮೇಳನದಲ್ಲೆಲ್ಲಾ ಎದ್ದು ಕಾಣುತ್ತಿದ್ದವರು ಬರಿಮೈಯ ಗಾಂಧಿ ರಾಮ್ ಲಖನ್ ಸಿಂಗ್. ಮ. ಪ್ರದೇಶದ ಹಿಂದಿನ ಶಾಸಕರಾಗಿದ್ದು ವಿಧಾನಸಭೆಯಲ್ಲಿ ಬಟ್ಟೆ ಹರಿದ ಪ್ರಸಂಗ ನಡೆಯಿತು. ಅಂದಿನಿಂದ ಮೇಲಂಗಿ ಧರಿಸುತ್ತಿಲ್ಲ.
- 1936 ರಲ್ಲಿ AIKS ಪ್ರಾರಂಭಗೊಂಡಾಗಿನಿಂದಲೂ ಅದರ ಸದಸ್ಯರಾಗಿರುವವರು ಕಾಂ|| ಹರ್ಕಿಷನ್ ಸಿಂಗ್ ಸುರ್ಜಿತ್ ಮತ್ತು ಕಾಂ|| ಎಂ.ಪಿ. ನಾರಾಯಣನ್ ನಂಬಿಯಾರ್.
- ಸಮ್ಮೇಳನದಲ್ಲಿದ್ದವರು 652 ಪ್ರತಿನಿಧಿಗಳು, 47 ವೀಕ್ಷಕರು , ಮಹಿಳೆಯರು 21 ಇವರ ಮಧ್ಯೆ ಒಬ್ಬರಾಗಿದ್ದವರು ಬಿಜೆಪಿಯ ಕೋಮುವಾದಿ ಶಿಕ್ಷಣದ ಪಿತೂರಿಯನ್ನು ಸೋಲಿಸಲು ಕಾರಣರಾದ ಕಾಂತಿ ಬಿಸ್ವಾಸ್, ಪಂಚಾಯತ್ ರಾಜ್ ಮಂತ್ರಿಗಳಾದ ಸೂರ್ಯಕಾಂತ್ ಮಿಶ್ರಾ ಮತ್ತು 13 ಮಂತ್ರಿಗಳು.
- ಬಿಹಾರ, ಉತ್ತರ ಪ್ರದೇಶದಲ್ಲಿ ಭೂಮಾಲಿಕರ ಪಡೆಗಳ, ರಣವೀರ ಸೇನೆಗಳ ದಾಳಿಗಳಿಗೆ ಎದೆಯೊಡ್ಡಿ ನಿಂತು ನಿತ್ಯ ಭೂಮಿಗಾಗಿ ಹಾಗೂ ಹತ್ತು ಹಲವು ಪ್ರಶ್ನೆಗಳಿಗಾಗಿ ಹೋರಾಡುತ್ತಿರುವ ಸಂಗಾತಿಗಳು.
- ತ್ರಿಪುರಾದಲ್ಲಿ ಪ್ರತ್ಯೇಕತಾವಾದಿಗಳ ಉಗ್ರಗಾಮಿಗಳ ದಾಳಿಗಳ ನಡುವೆ ನಿಂತು ಶ್ರಮಿಸುತ್ತಿರುವ ಸಂಗಾತಿಗಳು
- ಜಮ್ಮು ಕಾಶ್ಮೀರದಲ್ಲಿ, ಅಸ್ಸಾಂನಲ್ಲಿ, ಸಿಕ್ಕಿಂನಲ್ಲಿ ಜೀವ ಬೆದರಿಕೆಗಳನ್ನು ಲೆಕ್ಕಿಸದೆ ರೈತ ಚಳುವಳಿ ಕಟ್ಟುತ್ತಿರುವ ಹೋರಾಟಗಾರರು
- ಒಂದು ಕೋಟಿ ಸದಸ್ಯತ್ವವನ್ನು ಹೊಂದಿರುವ ಪಶ್ಚಿಮ ಬಂಗಾಳ ಪ್ರಬುದ್ಧ ಸಂಗಾತಿಗಳು, ಹೋರಾಟಗಳೇ ಮೈವೆತ್ತಿ ಬಂದಿರುವ ಕೇರಳದ ಸಂಗಾತಿಗಳು.
- ಆದಷ್ಟು ಬೇಗನೆ ಎಡ ಪ್ರಜಾಸತ್ತಾತ್ಮಕ ರಾಜಕೀಯ ಬದಲಾವಣೆಯನ್ನು ತರುತ್ತೇವೆನ್ನುವ ಆಂಧ್ರ ತಮಿಳುನಾಡಿನ ಸಂಗಾತಿಗಳು, ಹೀಗೆ ಪ್ರಸಕ್ತ ಭೂಮಾಲಿಕ ಬಂಡವಾಳಶಾಹಿ ಪ್ರಭುತ್ವದ ವಿರುದ್ಧ ಹೋರಾಟದಲ್ಲಿ ದೃಢವಾಗಿ ನಿಂತ ಸಮರಧೀರರ ಸಂಗಮ ಈ ಸಮ್ಮೇಳನ. ○

ಸಂಬಂಧಿಸಿದ ಮೊದಲ ಭಾಗ ಪ್ರಸಕ್ತ ಕೃಷಿ ರಂಗದ ಸ್ಥಿತಿಗತಿಗಳಿಗೆ ಸಂಬಂಧಿಸಿದ ಎರಡನೇ ಭಾಗ, ಹಾಗೂ ಸಂಘಟನಾ ವಿಷಯದ ಮೂರನೇ ಭಾಗ - ಹೀಗೆ 3 ಭಾಗಗಳಾಗಿ ವರದಿಯನ್ನು AIKS ನ ಪ್ರಧಾನ ಕಾರ್ಯದರ್ಶಿ ಕಾಂ॥ ಎಸ್. ರಾಮಚಂದ್ರನ್ ಪಿಳ್ಳೆರವರು ಮಂಡಿಸಿದರು.

1991 ರಲ್ಲಿ ಜಾರಿಗೆ ಬಂದ ನೂತನ ಕೃಷಿ ನೀತಿಯು ರೈತರನ್ನು ಕೃಷಿಯನ್ನು ಮತ್ತು ದೇಶವನ್ನು ನಾಶಕ್ಕೆ ದೂಡುತ್ತದೆ ಎಂದು ಕಿಸಾನ್ ಸಭಾ ಹೇಳುತ್ತಾ ಬಂದ ಅಂಶವು ಸತ್ಯವಾಗಿದೆ. 1993 ರಲ್ಲಿ AIKS ಮತ್ತು AIAWU ಜಂಟಿಯಾಗಿ ಹೊರತಂದ ಪರ್ಯಾಯ ಕೃಷಿ ನೀತಿಯು ನೂತನ ಕೃಷಿ ನೀತಿ ಕೃಷಿ ರಂಗದ ಸಮಸ್ಯೆಗಳನ್ನಾಗಲಿ ರೈತರ ಸಮಸ್ಯೆಗಳನ್ನಾಗಲೀ ಪರಿಹರಿಸಲು ಸಾಧ್ಯವಿಲ್ಲ, ಬದಲಿಗೆ ರೈತರ ಬಡತನವನ್ನು ಹೆಚ್ಚಿಸುತ್ತದೆ, ಗ್ರಾಮೀಣ ನಿರುದ್ಯೋಗವನ್ನು ಹೆಚ್ಚಿಸುತ್ತದೆ, ಬೆಳೆಗಳ ಪದ್ಧತಿಯನ್ನು ಬದಲಾಯಿಸುತ್ತದೆ, ಆಹಾರ ಧಾನ್ಯಗಳ ಬೆಳೆಗಳನ್ನು ಹೆಚ್ಚಿಸುತ್ತದೆ, ಆಹಾರ ಪದಾರ್ಥದ ವಿಷಯದಲ್ಲಿ ಆಮದಿಗೆ ಆಧಾರಪಡುವಂತೆ ಮಾಡುತ್ತದೆ, ಬ.ರಾ ಕಂಪನಿಗಳ ಮತ್ತು ಸಾಮ್ರಾಜ್ಯಶಾಹಿ ದೇಶಗಳಿಗೆ ಕೃಷಿರಂಗವು ಅಧೀನವಾಗುವಂತೆ ಮಾಡುತ್ತದೆ ಎಂದು ಹೇಳಿದ್ದು ಸತ್ಯವಾಗುತ್ತಾ ಬಂದಿದೆ ಎಂದು ವರದಿಯು ಹೇಳುತ್ತದೆ. ಇದಕ್ಕೆ ಪೂರಕವಾಗಿ ಹಲವಾರು ಅಂಶಗಳನ್ನು ಅಂಕಿ-ಸಂಖ್ಯೆಗಳ ಸಮೇತ ವರದಿಯು ಸಾಬೀತು ಪಡಿಸುತ್ತಾ ಹೋಗಿದೆ.

ದಿವಾಳಿಕೋರ ಧೋರಣೆಗಳು, ಸಾಮ್ರಾಜ್ಯಶಾಹಿಯ ಉದ್ದೇಶಗಳು, ಇಂತಹ ಉದ್ದೇಶಗಳ ಜೊತೆ ಕೈಜೋಡಿಸಿರುವ ಶ್ರೀಮಂತ ವರ್ಗದ ಕೆಲ ವಿಭಾಗಗಳು, ಈ ವಿಭಾಗಗಳು ಉದ್ದೇಶಿಸಿರುವಂತಹ ಬೆಳವಣಿಗೆ ಮತ್ತು ನ್ಯಾಯವನ್ನು ಒದಗಿಸಲಾರದ ಬಂಡವಾಳಶಾಹಿ ಮಾರುಕಟ್ಟೆಶಕ್ತಿಗಳ ಅನಿಯಂತ್ರಿತ ಕಾರ್ಯಾಚರಣೆ, ಜಾಗತೀಕರಣ, ಪೇಟೆಂಟ್ ಕಾನೂನುಗಳು, ಕೃಷಿ ರಂಗದಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರವೇಶಿಸುತ್ತಿರುವ ಬ.ರಾ.ಕಂಪನಿಗಳು ಸೇರಿದಂತೆ ಕಾರ್ಪೊರೇಟ್ ವಲಯ (ಏಪ್ರಿಲ್ 95 ರಿಂದ ಮಾರ್ಚ್ 98 ರವರೆಗೆ ಮೂರು ವರ್ಷಗಳಲ್ಲಿ ವಿದೇಶೀ ನೇರ ಹೂಡಿಕೆಯ 635 ಸೂಚನೆಗಳಿಗೆ ಒಪ್ಪಿಗೆ ನೀಡಲಾಗಿದೆ. ಇದರಲ್ಲಿ ಬಹುತೇಕ ಕಂಪನಿಗಳು ರೈತರನ್ನು ತಮ್ಮ ನೆಲದಿಂದ ಒಕ್ಕಲೆಬ್ಬಿಸಿವೆ ಮತ್ತು ನಿರುದ್ಯೋಗಿಗಳನ್ನಾಗಿ ಮಾಡಿದೆ.) ಇಂತಹ ನೀತಿಗಳನ್ನು ಹಿಂದಿನ ಸರ್ಕಾರಗಳಿಗಿಂತಲೂ ದೊಡ್ಡ ಪ್ರಮಾಣದಲ್ಲಿ ಜಾರಿಗೊಳಿಸುತ್ತಿರುವ ರೈತ ವಿರೋಧಿ ಬಿಜೆಪಿ ಸರ್ಕಾರ ಹೀಗೆ ಭಾರತದ ಕೃಷಿ ಮತ್ತು ರೈತರು ಅಪಾಯದಲ್ಲಿದ್ದಾರೆ ಎಂದು ವರದಿಯು ಹೇಳುತ್ತಾ ಇಂತಹ ಕ್ಲಿಷ್ಟ ಸ್ಥಿತಿಯನ್ನು ಎದುರಿಸಲು ವಿಶಾಲವಾದ ಐಕ್ಯತೆಯನ್ನು ಮತ್ತು ವಿಶಾಲವಾದ ಚಳುವಳಿಗಳನ್ನು ಹರಿಬಿಡಲು ಕರೆಕೊಟ್ಟಿದೆ.

ಇಂತಹ ಧೋರಣೆಯೊಂದಿಗೆ ನಿರ್ದಿಷ್ಟವಾದ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳಲು ರೈತ ಚಳುವಳಿ ಮುಂದಾಗಬೇಕು, ವಿವಿಧ ಪ್ರದೇಶಗಳಲ್ಲಿ ಬರುವ ವಿವಿಧ ಪ್ರಶ್ನೆಗಳಿಗೆ ನಿರ್ದಿಷ್ಟವಾಗಿ ಸ್ಪಂದಿಸುವಂತಾಗಬೇಕೆಂದು ಹೇಳಲಾಗಿದೆ.

ಭೂಮಿ ಮತ್ತು ಭೂಸುಧಾರಣೆ ಸಂಬಂಧಿತ ಪ್ರಶ್ನೆಗಳು, ನೀರಾವರಿ ವಿದ್ಯುತ್ ಸಮಸ್ಯೆಗಳು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಆದ್ಯತೆ ನೀಡಲು ಮತ್ತು ಇದರಿಂದ ಉತ್ಪಾದಕತೆಯನ್ನು ಹೆಚ್ಚಿಸುವ ಪ್ರಶ್ನೆಗಳು, ಮೂಲ ಸೌಕರ್ಯಗಳ ಪ್ರಶ್ನೆ ಅಭಿವೃದ್ಧಿಯ ಪ್ರಶ್ನೆ, ಸಾಲ ಸೌಲಭ್ಯಗಳ ಪ್ರಶ್ನೆ ಹೆಚ್ಚುತ್ತಿರುವ ಋಣಭಾರ, ಕಳಪೆ ಗುಣಮಟ್ಟದ ರಸಗೊಬ್ಬರಗಳು ಮತ್ತು ಕೀಟನಾಶಕಗಳು, ಮಾರುಕಟ್ಟೆ ವ್ಯವಸ್ಥೆಯ ಪುನರ್ ವ್ಯವಸ್ಥೆ ಮತ್ತು ಬೆಂಬಲಿತ ಬೆಲೆಯ ಪ್ರಶ್ನೆಗಳು, ನೈಸರ್ಗಿಕ ವಿಕೋಪಗಳು, ಸಮಗ್ರ ಬೆಳೆ ವಿಮಾ ಯೋಜನೆ, ಕೃಷಿ ಆಧಾರಿತ ಕೈಗಾರಿಕೆಗಳು, ಸರ್ಕಾರಿ ಯೋಜನೆಗಳು, ತೋಟಗಾರಿಕೆ ಪಶು ಸಂಗೋಪನೆ ಮೀನುಗಾರಿಕೆ ಇತ್ಯಾದಿ ಪರಿಸರ ಪ್ರಶ್ನೆಗಳು, ಹೆಚ್ಚುತ್ತಿರುವ ರೈತರ ಆತ್ಮಹತ್ಯೆಗಳು, ಬಿಜೆಪಿಯ ಕೋಮುವಾದಿ ಅಪಾಯ ಜಾತಿ ತುಳಿತ ಮತ್ತು ಜಾತಿ ವಿಭಜನೆ ಮಹಿಳೆಯರನ್ನು ಭಾದಿಸುವ ಪ್ರಶ್ನೆಗಳು, ಪಂಚಾಯತ್‌ರಾಜ್ ಸಂಸ್ಥೆಗಳ ಮತ್ತು ಸಹಕಾರಿ ಸಂಘಟನೆಗಳ ಪ್ರಜಾಪ್ರಭುತ್ವೀಕರಣ, ನಿರ್ದಿಷ್ಟ ಪ್ರಶ್ನೆಗಳನ್ನು ನಿರ್ದಿಷ್ಟವಾಗಿ ಅಭ್ಯಾಸ ಮಾಡುವುದರ ಪ್ರಾಮುಖ್ಯತೆ, ಐಕ್ಯ ಚಳುವಳಿಯ ಸಾಧ್ಯತೆಗಳು, ಹೀಗೆ..., ಹೊಸ ನೀತಿಗಳಿಂದ ಕೃಷಿರಂಗ ಮತ್ತು ರೈತರ ಮೇಲಾಗುತ್ತಿರುವ ಪ್ರತಿಯೊಂದು ವಿಷಯವನ್ನು ನಿರ್ದಿಷ್ಟವಾಗಿ ವಿಮರ್ಶಿಸುವ ಪ್ರಯತ್ನವನ್ನು ವರದಿಯಲ್ಲಿ ಮಾಡಲಾಗಿತ್ತು.

ಸಂಘಟನೆಯ ವಿಭಾಗದಲ್ಲಿ ಪ್ರಸ್ತಾಪಿಸುತ್ತಾ, ಕಳೆದ ಅವಧಿಯಲ್ಲಿ ದೇಶಾದ್ಯಂತ ಚಟುವಟಿಕೆಗಳು ಹೆಚ್ಚಾಗಿದ್ದು ಕಿಸಾನ್ ಸಭಾ ಹಿಂದಿನ ಅವಧಿಗಿಂತ ಹೆಚ್ಚು ಕ್ರಿಯಾಶೀಲಗೊಂಡಿದೆ ಎಂದು ಗುರುತಿಸಲಾಗಿದೆ. ಆದರೆ ಹೆಚ್ಚಿನ ರಾಜ್ಯಗಳಲ್ಲಿ ಸದಸ್ಯತ್ವ ಹೆಚ್ಚಾಗದಿರುವ ಬಗ್ಗೆ ವಿಮರ್ಶಿಸಲಾಗಿದೆ. ರಾಜ್ಯ ಮತ್ತು ಜಿಲ್ಲಾ ಕೇಂದ್ರಗಳಲ್ಲಿನ ಸಂಘಟನಾ ನ್ಯೂನತೆಗಳು ಹಾಗೂ ನಿರಂತರತೆಯ ಕೊರತೆಯಿಂದಾಗಿ ಈ ಸಮಸ್ಯೆ ಹಾಗೇ ಮುಂದುವರೆದಿರುವ ಬಗ್ಗೆ ಗುರುತಿಸುತ್ತಾ ಇದನ್ನು ಸರಿಪಡಿಸಲು ಒತ್ತಿ ಹೇಳಲಾಗಿದೆ.

ವಿವಿಧ ಹಂತಗಳಲ್ಲಿ ನಾಯಕತ್ವವನ್ನು ಗಟ್ಟಿಗೊಳಿಸುವುದು, ದುರ್ಬಲ ಚಳುವಳಿಯಿರುವ ರಾಜ್ಯಗಳ ತಾಲ್ಲೂಕು ಮತ್ತು ಪ್ರದೇಶಗಳಲ್ಲಿ ಹಾಗೂ ಕೆಳ ಹಂತದ ಘಟಕಗಳಲ್ಲಿ ವಾರ್ಷಿಕ ಸಮ್ಮೇಳನಗಳನ್ನು ನಡೆಸುವುದು, ಸಮರ್ಥ ಕಾರ್ಯಕರ್ತರನ್ನು ಗುರುತಿಸುವುದು ಮತ್ತು ಅಭಿವೃದ್ಧಿಪಡಿಸುವುದು, ವ್ಯವಸ್ಥಿತವಾದ ನಿಧಿ ಸಂಗ್ರಹ ಪ್ರಜಾಸತ್ತಾತ್ಮಕವಾಗಿ ಕೆಲಸ ಮಾಡುವುದು, ರೈತ ಮತ್ತು ಕೃಷಿ ಕಾರ್ಮಿಕರ ಐಕ್ಯತೆ ಎತ್ತಿ ಹಿಡಿಯುವುದು, ಜೊತೆಗೆ ಕಾರ್ಮಿಕ ವರ್ಗದ ಜೊತೆ ಐಕ್ಯ ಹೋರಾಟಗಳನ್ನು ನಡೆಸುವುದು, ಹೀಗೆ..., ವಿವಿಧ ಅಂಶಗಳ ಬಗ್ಗೆ ನಿರ್ದಿಷ್ಟ ಸೂಚನೆಗಳನ್ನು ನೀಡಲಾಗಿದೆ.

ಭೂಮಾಲಿಕ ಬಂಡವಾಳಶಾಹಿ ನೀತಿಗಳ ದೆಸೆಯಿಂದ ಉಂಟಾಗಿರುವ ಅತೃಪ್ತಿಯನ್ನು ಬಳಸಿಕೊಳ್ಳಲು ಬಿಜೆಪಿ ಪ್ರಯತ್ನಿಸುತ್ತಿರುವ ಬಗ್ಗೆ ಮತ್ತು ಬೇರೆಲ್ಲಾ ಸರ್ಕಾರಗಳಿಗಿಂತಲೂ ಒಂದೆಜ್ಜೆ ಮುಂದೆ ಹೋಗಿ ವಿನಾಶಕಾರಿ ನೀತಿಗಳನ್ನು ಜಾರಿಗೊಳಿಸುತ್ತಿರುವ ಬಗ್ಗೆ ಹಾಗೂ ಅದರ ಕೋಮುವಾದಿ ಅಪಾಯಗಳನ್ನು ವಿಮರ್ಶಿಸಲಾಗಿದೆ.

ಪ್ರತಿನಿಧಿಗಳ ಚರ್ಚೆ

ಪ್ರಧಾನ ಕಾರ್ಯದರ್ಶಿ ಮಂಡಿಸಿದ ಕರಡು ವರದಿಯ ಮೇಲೆ 20 ರಾಜ್ಯಗಳಿಂದ 27 ಪ್ರತಿನಿಧಿಗಳು ಸುಮಾರು 7 1/2 ಗಂಟೆಗಳ ಕಾಲ ಚರ್ಚೆಯಲ್ಲಿ ಭಾಗವಹಿಸಿದ್ದರು. ಚರ್ಚೆಯಲ್ಲಿ ಹಲವಾರು ಸಲಹೆಗಳು, ಪ್ರಶ್ನೆಗಳು, ವಿಮರ್ಶೆಗಳನ್ನು ಮಾಡಲಾಯ್ತು. ಚರ್ಚೆಯ ಗುಣಮಟ್ಟ ಉತ್ತಮವಾಗಿತ್ತು. ರೈತ ಚಳುವಳಿ ಎದುರಿಸುವ ಸಮಸ್ಯೆಗಳು ಮತ್ತು ನಾವು ವಹಿಸಬೇಕಾದ ಪಾತ್ರ ಜವಾಬ್ದಾರಿಗಳ ಬಗ್ಗೆ ಮತ್ತು ಸನ್ನಿವೇಶವನ್ನು ವಿಶ್ಲೇಷಿಸುವಲ್ಲಿನ ಸಮಾನ ತಿಳುವಳಿಕೆ, ವಿಶ್ಲೇಷಣೆಯಲ್ಲಿನ ಐಕ್ಯತೆ ಬಹಳ ಮುಖ್ಯವಾಗಿ ಕಂಡು ಬಂದ ಅಂಶಗಳು.

ಒಟ್ಟಾರೆ ಚರ್ಚೆಯನ್ನು ಕ್ರೋಢೀಕರಿಸುತ್ತಾ ಉತ್ತರ ನೀಡಿದ ಪ್ರ. ಕಾರ್ಯದರ್ಶಿಯವರು, ನಮ್ಮ ಮುಂದಿರುವ ದೊಡ್ಡ ಸವಾಲುಗಳನ್ನು ಎದುರಿಸಲು, ತಳದಲ್ಲಿ ರೈತರ ವಿಶಾಲ ಐಕ್ಯತೆಯನ್ನು ಇತರೆ ಕಾರ್ಮಿಕ ವರ್ಗಗಳ ಜೊತೆಗಿನ ಐಕ್ಯತೆಯ ಅಗತ್ಯವನ್ನು ಒತ್ತಿ ಹೇಳಿದರು.

ನಮ್ಮ ಮುಂದಿರುವ ವಿಫುಲವಾದ ಅವಕಾಶಗಳನ್ನು ಬಳಸಿಕೊಂಡು ಚಳುವಳಿಯನ್ನು ಬೆಳೆಸಲು,

1. ನಮ್ಮ ಸಂಘಟನೆಯನ್ನು ಹೆಚ್ಚೆಚ್ಚು ಕ್ರಿಯಾಶೀಲ ಗೊಳಿಸಬೇಕು
2. ರೈತರ ಪ್ರಜ್ಞೆಯನ್ನು ಮೇಲಕ್ಕೆತ್ತರಿಸಬೇಕು. ಅದಕ್ಕಾಗಿ ಮೂಲ ಪ್ರಶ್ನೆಗಳ ಜೊತೆ ದಿನ ನಿಂತ್ಯದ ಸಮಸ್ಯೆಗಳನ್ನು ಲಿಂಕ್ ಮಾಡಬೇಕು.
3. ಭೂಮಾಲಿಕ-ಬಂಡವಾಳಶಾಹಿ ವರ್ಗಗಳ ಸೈದ್ಧಾಂತಿಕ ಹೇರಿಕೆಯನ್ನು ಬಹಳ ಮುಖ್ಯವಾಗಿ ದುರ್ಬಲ ರಾಜ್ಯಗಳಲ್ಲಿ, ಎದುರಿಸಬೇಕು ಎಂದು ಇಡೀ ಚರ್ಚೆಗೆ ಸ್ಪಷ್ಟ ದಿಕ್ಕನ್ನು ಸೂಚಿಸಿದರು.

ಅಂತಿಮವಾಗಿ ಕರಡು ವರದಿಯನ್ನು ಸರ್ವಾನುಮತದಿಂದ ಸಮ್ಮೇಳನ ಅಂಗೀಕರಿಸಿತು.

ಆಯೋಗಗಳ ಚರ್ಚೆ

ನಾಲ್ಕು ಪ್ರಮುಖ ವಿಷಯಗಳ ಮೇಲೆ ಆಯೋಗಗಳನ್ನು ರಚಿಸಲಾಗಿತ್ತು.

1. ನೂತನ ಆರ್ಥಿಕ ನೀತಿ ಮತ್ತು ಕೃಷಿಯ ಮೇಲೆ ಇದರ ಪರಿಣಾಮಗಳು. ಈ ಆಯೋಗದ ಅಧ್ಯಕ್ಷರು ಬಿಪ್ಲಬ್ ದಾಸ್‌ಗುಪ್ತಾ
2. ಸಾಲ ಮತ್ತು ದರಗಳು: ಅಧ್ಯಕ್ಷರು -ಪಿ.ಕೆ.ಟಂಡನ್
3. ಪಶು ಸಂಗೋಪನೆ ಮತ್ತು ಮೀನುಗಾರಿಕೆ. ಅಧ್ಯಕ್ಷರು -ಮೆಹಬೂಬ್ ಜಹೇದಿ
4. ಗುಡ್ಡಗಾಡು ಪ್ರಶ್ನೆಗಳು, ಅಧ್ಯಕ್ಷರು-ಸಮರ್ ಚೌಧರಿ.

ಪ್ರತ್ಯೇಕವಾಗಿ ಸಭೆ ಸೇರಿ ಸುಮಾರು 4/12 ಗಂಟೆಗಳ ಕಾಲ ಕ್ರೋಡೀಕರಿಸಿದ ವರದಿಯನ್ನು ಸಮ್ಮೇಳನದಲ್ಲಿ ಮಂಡಿಸಿದವು. ನಂತರ ಸಮ್ಮೇಳನ ಈ ವರದಿಗಳನ್ನು ಸರ್ವಾನುಮತದಿಂದ ಅಂಗೀಕರಿಸಿತು. ○

ನಿರ್ಣಯಗಳು

ಬಡ ಬೆಳೆಗಾರರಿಗೆ ಸಾಲ - ಬೆಂಬಲ ವ್ಯವಸ್ಥೆ ಒಂಭತ್ತಂಶದ ಬೇಡಿಕೆಗಳ ಈಡೇರಿಕೆಗೆ ಆಗ್ರಹ

ಸಾಲ ಎಂಬುದು ಬಹುಪಾಲು ರೈತರಿಗೆ ಅಗತ್ಯವಾದ ಒಂದು ಪ್ರಮುಖ ಕೃಷಿ ಲಾಗುವಾಡು. ಬಹುಪಾಲು ಭೂಹೀನರಾದ ಭಾರತದ ಬಡ ರೈತರ ಲೇವಾದೇವಿಗಾರರ ಕಪಿಮುಷ್ಟಿಯಿಂದ ರಕ್ಷಿಸಲು ಸಾಲವನ್ನು ಒದಗಿಸುವ ವ್ಯವಸ್ಥೆಯನ್ನು ರೂಪಿಸದಿರುವ ಭಾರತದ ಬಂಡವಾಳ ಶಾಹಿ ಭೂಮಾಲಕರ ಆಳರಸರು ಹಾಗೂ ಅವರ ಆಳುವ ಪಕ್ಷಗಳ ಬಗ್ಗೆ ತೀವ್ರ ಆಕ್ರೋಶ ಹಾಗೂ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಸಮ್ಮೇಳನ ಒಂದು ನಿರ್ಣಯವನ್ನು ಅಂಗೀಕರಿಸಿತು. ಈ ರಂಗದಲ್ಲಿ ಕಳೆದ 50 ವರ್ಷಗಳ ಆಗುಹೋಗುಗಳನ್ನು ವಿಶದವಾಗಿ ಪರಿಶೀಲಿಸಿರುವ ಈ ನಿರ್ಣಯ ಬಹುಪಾಲು ಬಡ ರೈತರಿಗೆ ಸಾಲ, ಬೆಂಬಲ ಬೆಲೆ ಹಾಗೂ ಪಡಿತರ ವ್ಯವಸ್ಥೆಯನ್ನು ಕುರಿತಂತೆ ಒಂಭತ್ತು ಅಂಶಗಳ ಒಂದು ಬೇಡಿಕೆ ಪಟ್ಟಿಯನ್ನು ಮುಂದಿಟ್ಟಿದೆ. ಈ ಕುರಿತು ದೇಶಾದ್ಯಂತ ಸಂಯೋಜಿತ ಪ್ರಚಾರ-ಪ್ರಕ್ಷೋಭೆ, ಹೋರಾಟಗಳನ್ನು ರೂಪಿಸಿ ಸಾಧ್ಯವಾದಷ್ಟು ವ್ಯಾಪಕ ರೀತಿಯಲ್ಲಿ ರೈತಾಪಿ ಜನಗಳನ್ನು ಅಣಿನೆರೆಸಬೇಕು ಎಂದು ಈ ನಿರ್ಣಯ ಎಐಕೆಎಸ್ ಘಟಕಗಳಿಗೆ ಕರೆ ನೀಡಿದೆ.

ದಲಿತರ ಮೇಲಿನ ಸಾಮಾಜಿಕ ಅತ್ಯಾಚಾರಗಳ ವಿರುದ್ಧ ಪರಿಣಾಮಕಾರಿ ಪ್ರಚಾರ-ಕಾರ್ಯಾಚರಣೆಗಳನ್ನು ನಡೆಸಿ

ಪರಿಶಿಷ್ಟ ಜಾತಿಗಳು ಮತ್ತು ಬುಡಕಟ್ಟುಗಳು ಭಾರತೀಯ ಜನಸಂಖ್ಯೆಯ ಕಾಲುಭಾಗ ದಷ್ಟಿದ್ದರೆ, ಗ್ರಾಮೀಣ ಬಡವರು ಬಹುಪಾಲು. ಇವರೆಲ್ಲರ ವಿರುದ್ಧ ಸಾಮಾಜಿಕ ಭೇದ-ಭಾವ, ಅತ್ಯಾಚಾರಗಳು ಹೆಚ್ಚುತ್ತಲಿವೆ ಎಂದಿರುವ ಒಂದು ನಿರ್ಣಯ ಕೋಮುವಾದಿ ಮತ್ತು ಜಾತೀವಾದಿ ಶಕ್ತಿಗಳು ಈ ಸನ್ನಿವೇಶದ ಪ್ರಯೋಜನ ಪಡೆದು ರೈತಾಪಿ ವರ್ಗವನ್ನು ಒಡೆಯಲು, ಈ ವರ್ಗದ ಕಾರ್ಯಾಚರಣೆಯ ಶಕ್ತಿಯನ್ನು ದುರ್ಬಲಗೊಳಿಸುತ್ತಿದ್ದಾರೆ ಎಂದೂ ಹೇಳಿದೆ. ಇಂತಹ ಸನ್ನಿವೇಶದಲ್ಲಿ ಇವೆರಡನ್ನು ನಿಲ್ಲಿಸಲು ಇರುವ ಏಕೈಕ ಮಾರ್ಗವೆಂದರೆ ಅಖಿಲ ಭಾರತ ಕಿಸಾನ್ ಸಭಾ ಮಧ್ಯ ಪ್ರವೇಶಿಸಿ ಸಾಮಾಜಿಕ ಪ್ರಶ್ನೆಗಳನ್ನು ಎತ್ತಿಕೊಳ್ಳುವುದು, ಭೂಮಿಗಾಗಿ ಮತ್ತಿತರ ಆರ್ಥಿಕ ಹೋರಾಟಗಳೊಂದಿಗೆ ಕುರುಡು ನಂಬಿಕೆಗಳು ಮತ್ತು ದಮನದ ವಿರುದ್ಧ ಹೋರಾಡುವುದು. ಎಐಕೆಎಸ್ ಘಟಕಗಳು, ಸದಸ್ಯರು ಪರಿಣಾಮಕಾರಿಯಾಗಿ ಮಧ್ಯ ಪ್ರವೇಶಿಸಿ ದಲಿತರಲ್ಲಿ ಬುಡಕಟ್ಟು ಜನಗಳಲ್ಲಿ ತಮ್ಮ ಹಕ್ಕುಗಳ ಬಗ್ಗೆ ಅರಿವು ಮೂಡಿಸಿ ಸಮಾನತೆಗಾಗಿ ಹೋರಾಡುವಂತೆ ಮಾಡಬೇಕು, ಸಮ್ಮೇಳನಗಳು, ವಿಚಾರಸಂಕಿರಣಗಳು ಇತರ ವಿಧಾನಗಳಲ್ಲಿ ಪ್ರಚಾರ-ಪ್ರಕ್ಷೋಭೆಯೊಡನೆ ಅಗತ್ಯವಿದ್ದಲ್ಲಿ ನೇರ ಕಾರ್ಯಾಚರಣೆಗಳನ್ನು ಸಂಘಟಿಸಬೇಕು ಎಂದು ಸಮ್ಮೇಳನ ಕರೆ ನೀಡಿತು.

ವರ್ಗಶೋಷಣೆಯ ವಿರುದ್ಧ ಹೋರಾಟಗಳಿಗೆ ಅತ್ಯಂತ ಅಪಾಯಕಾರಿ ಈ ಕೋಮುವಾದಿ ಶಕ್ತಿಗಳು

ಕೋಮುವಾದಿ ಶಕ್ತಿಗಳು ರೈತ ಆಂದೋಲನವೂ ಸೇರಿದಂತೆ ಎಲ್ಲಾ ಪ್ರಜಾಪ್ರಭುತ್ವ ಆಂದೋಲನಗಳಿಗೆ ಈಗಿನ ಸನ್ನಿವೇಶದಲ್ಲಿ ಒಡ್ಡಿರುವ ಅಪಾಯವನ್ನು ವಿವರಿಸಿರುವ ಇನ್ನೊಂದು ನಿರ್ಣಯ ವರ್ಗ ಶೋಷಣೆಯ ವಿರುದ್ಧ ಹೋರಾಟಗಳನ್ನು ಕಟ್ಟಿ ಬೆಳೆಸುವಲ್ಲಿ ಅತ್ಯಂತ ಅಪಾಯಕಾರಿಯಾದ ಈ ಶಕ್ತಿಗಳ ವಿರುದ್ಧ ಪ್ರತಿರೋಧ ಆಂದೋಲನವನ್ನು ಕಟ್ಟಿ ಬೆಳೆಸಬೇಕು ಎಂದು ರೈತರಿಗೆ ಕರೆ ನೀಡಿದೆ.

ವರ್ಗ ಮತ್ತು ಪ್ರಜಾಪ್ರಭುತ್ವ ಆಂದೋಲನದ ದೌರ್ಬಲ್ಯ, ಹಿಂದಿನ ಕಾಂಗ್ರೆಸ್ ಸರಕಾರಗಳು ಕೋಮುವಾದಿ ಶಕ್ತಿಗಳೊಡನೆ ಮಾಡಿಕೊಂಡ ರಾಜಿ, ಚೆನ್ನಾಟಗಳು ಹಾಗೂ ರಾಜಕೀಯ ಸಮಯಸಾಧಕತನಗಳಿಂದಾಗಿ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದು ಈ ಅಪಾಯ ಹೆಚ್ಚಿದೆ. ಕಳೆದ ಚುನಾವಣೆಗಳಲ್ಲಿ ಕೆಲವು ರಾಜ್ಯಗಳಲ್ಲಿ ಬಿಜೆಪಿ ಮಣ್ಣು ಮುಕ್ಕಿದರೂ ಅದು ಕೋಮುವಾದದ ಸೋಲೆಂದು ತಿಳಿಯುವುದು ಒಂದು ಗಂಭೀರ ತಪ್ಪು ಆಗುತ್ತದೆ. ನಮ್ಮದು ಒಂದು ಅರೆ-ಊಳಿಗಮಾನ್ಯ ದೇಶ. ಸಾಂಸ್ಕೃತಿಕ ಸ್ತರಗಳಲ್ಲಿ ಪಾಳೆಯಗಾರೀ ಪ್ರಭಾವ ವ್ಯಾಪಕವಾಗಿದೆ. ಶಿಕ್ಷಣದಲ್ಲಿ ನಮ್ಮ ದೇಶ ಹಿಂದಿದೆ, ವೈಜ್ಞಾನಿಕ ಪ್ರಜ್ಞೆ ಕೆಳಮಟ್ಟದಲ್ಲಿದೆ, ಮೂಢನಂಬಿಕೆಗಳು ದೊಡ್ಡ ಪ್ರಮಾಣದಲ್ಲಿವೆ. ಇದು ಕೋಮುವಾದ, ಮೂಲಭೂತವಾದ, ವಿಚ್ಛಿದ್ರಕಾರಿ ರಾಜಕೀಯಕ್ಕೆ ಒಂದು ಫಲವತ್ತಾದ ಮಣ್ಣು ಎಂದಿರುವ ಈ ನಿರ್ಣಯ ಕೇವಲ ಅಲ್ಪಸಂಖ್ಯಾತರೆಲ್ಲಾ ಒಟ್ಟು ಸೇರಿದ ಮಾತ್ರಕ್ಕೆ ಬಹುಸಂಖ್ಯಾತ ಕೋಮುವಾದವನ್ನು ಎದುರಿಸಲಾಗದು ಎಂದು ಎಚ್ಚರಿಸಿದೆ. ಇದಕ್ಕೆ ಅಲ್ಪಸಂಖ್ಯಾತರ ಹಾಗೂ ಕೋಮುವಾದಕ್ಕೆ ವಿರುದ್ಧವಾಗಿರುವ ಬಹುಸಂಖ್ಯಾತರ ವಿವಿಧ ವಿಭಾಗಗಳೊಂದಿಗೆ ಪ್ರಜಾಸತ್ತಾತ್ಮಕ ಐಕ್ಯತೆ ಹಾಗೂ ಧರ್ಮನಿರಪೇಕ್ಷ ವಿಚಾರಗಳ ಪ್ರಚಾರ ಅಗತ್ಯ. ಈ ಪ್ರಶ್ನೆಯನ್ನು ಅಲ್ಪಸಂಖ್ಯಾತರ ನಡುವೆ ಬೆಳೆಸಬೇಕು ಎಂದಿರುವ ಎಐಕೆಎಸ್ ಸಮ್ಮೇಳನ ಈ ಅತ್ಯಂತ ಅಪಾಯಕಾರಿ ಕೋಮುವಾದಿ ಶಕ್ತಿಗಳ ವಿರುದ್ಧ ಪ್ರತಿರೋಧ ಆಂದೋಲನ ಕಟ್ಟುವ ಪ್ರತಿಜ್ಞೆ ಮಾಡಿತು.

ಬಿಹಾರದಲ್ಲಿ ದಲಿತರ ಮೇಲೆ ಕ್ರೂರ ಅತ್ಯಾಚಾರ ಅಪರಾಧಿಗಳಿಗೆ ಕಠಿಣ ಶಿಕ್ಷೆ-ಸಂತ್ರಸ್ತರ ನೆರವಿಗೆ ಚಳುವಳಿ

ಬಿಹಾರದಲ್ಲಿ ಭೂಹೀನ ದಲಿತರ ಮೇಲೆ ನಡೆದಿರುವ ಕ್ರೌರ್ಯವನ್ನು ಅತ್ಯಂತ ಬಲವಾಗಿ ಖಂಡಿಸುತ್ತಾ ಗಂಭೀರ ಆತಂಕ ವ್ಯಕ್ತಪಡಿಸಿರುವ ಒಂದು ನಿರ್ಣಯ ಇದನ್ನು ಮಾನವ ಕುಲದ ಇತಿಹಾಸದಲ್ಲೇ ಅತ್ಯಂತ ಅಮಾನುಷ ಅಪರಾಧ ಎಂದು ವರ್ಣಿಸಿದೆ. ಭೂಮಾಲಕರ ಖಾಸಗಿ ಸೇನೆಗಳ ಬುಲೆಟ್‌ಗಳು 70 ವರ್ಷದ ವೃದ್ಧೆಯನ್ನೂ, ಹಾಲು ಹಸುಳೆಗಳನ್ನು ಬಿಟ್ಟಿಲ್ಲ. ಇದಕ್ಕೆ ಬಿಹಾರದ ಬಂಡವಾಳಶಾಹೀ- ಭೂಮಾಲಕರ ಪಕ್ಷಗಳ ರಕ್ಷಣೆಯಿದೆ. ಭೂಮಾಲಕತ್ವವನ್ನು,

ಪುಟ 6 ನೋಡಿ

ಬಹಿರಂಗ ಸಭೆ

ಮಾರ್ಚ್ 8 ರಂದು ಕ್ಯಾಲಿಕಟ್‌ನ ಸಮುದ್ರ ದಂಡೆಯಲ್ಲಿ ನಿರ್ಮಿಸಲಾಗಿದ್ದ ವೇದಿಕೆಯಲ್ಲಿ (AKG ನಗರ) ಬೃಹತ್ ಬಹಿರಂಗ ಸಭೆಯು ನಡೆಯಿತು. ಯಾವುದೇ ವಿಶೇಷ ಪ್ರಯತ್ನಗಳಿಲ್ಲದೆ ಸಭೆಗೆ ತಾವೇ ತಾವಾಗಿ ಬಂದಿದ್ದವರು ಸುಮಾರು ಒಂದು ಲಕ್ಷ ಜನ!

ಸಭೆಯಲ್ಲಿ AIKS ನ ಹಿಂದಿನ ಅಧ್ಯಕ್ಷರಾದ ಬಿನಯ್ ಕೋನಾರ್ ಸ್ವಾಗತ ಸಮಿತಿಯ ಅಧ್ಯಕ್ಷರಾದ ಪಲ್ಲೋಳಿ ಮುಹಮ್ಮದ್ ಕುಟ್ಟಿ ಟ್ರೇಡ್ ಯೂನಿಯನ್ ಇಂಟರ್ ನ್ಯಾಷನಲ್ಸ್ ಪ್ರೆಡ್ಡಿ ಹರ್, ಕೇರಳದ ಮುಖ್ಯಮಂತ್ರಿ ಇ.ಕೆ. ನಾಯನರ್ ಸಿಪಿಐ(ಎಂ)ನ ಪಿ.ಬಿ. ಸದಸ್ಯರಾದ ವಿ.ಎಸ್. ಅಚ್ಯುತಾನಂದನ್ ಮುಂತಾದವರು ಮಾತನಾಡಿದರು.




ವಿವಿಧ ಕಾರ್ಯಕ್ರಮಗಳು

ಸಮ್ಮೇಳನದ ಅಂಗವಾಗಿ ಹಲವಾರು ವಿಚಾರ ಸಂಕಿರಣಗಳು ಮತ್ತು ಕೇರಳದ ರೈತ ಚಳುವಳಿಯ ಇತಿಹಾಸವನ್ನು ಬಿಂಬಿಸುವ ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಸಾಮ್ರಾಜ್ಯಶಾಹಿಯ ಮೊದಲ ಪ್ರತಿನಿಧಿ ವಾಸ್ಕೊಡಿಗಾಮ ಬಂದಿಳಿದ ಕಪ್ಪಾಡ್‌ನ್ನು ತನ್ನ ತೆಕ್ಕೆಯಲ್ಲಿ ಹೊಂದಿರುವ ಕಲ್ಲಿಕೋಟೆಯ ರೈತರು ದುಡಿಯುವ ಜನತೆ AIKS ನ 29 ನೇ ಮಹಾನ್ ಸಮ್ಮೇಳನವನ್ನು ಈ ರೀತಿಯಾಗಿ ಅತ್ಯಂತ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಕ್ಕೂ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯ ವಾರಸುದಾರ AIKS ಗೂ ಚಾರಿತ್ರಿಕ ಮತ್ತು ಕಾಕತಾಳೀಯ ಸಂಬಂಧ ಇದೇ ಆಗಿದೆ.

ಕೋಮುಸೌಹಾರ್ದಕ್ಕಾಗಿ ಒಂದು ಕೋಟಿ ಸಹಿ ಸಂಗ್ರಹ



ನವದೆಹಲಿಯಲ್ಲಿ ನಡೆದ ಕೋಮುವಾದದ ವಿರುದ್ಧ ಜನತಾ ಸಮಾವೇಶದ ಕರೆಯಂತೆ ಕೋಮು ಸೌಹಾರ್ದ ಹಾಗೂ ರಾಷ್ಟ್ರೀಯ ಐಕ್ಯತೆಯ ರಕ್ಷಣೆಯ ಪ್ರತಿಜ್ಞೆಗೆ ಸಹಿ ಸಂಗ್ರಹಿಸುವ ಕಾರ್ಯಕ್ರಮವನ್ನು ಪಶ್ಚಿಮ ಬಂಗಾಳದಲ್ಲಿ ದೇಶದ ಹಿರಿಯ ಮುತ್ಸದ್ದಿ ಜ್ಯೋತಿಬಸುರವರು ಮಾರ್ಚ್ 6 ರಂದು ಕಲ್ಕತ್ತೆಯಲ್ಲಿ ನಡೆದ ಬೃಹತ್ ರ್‍ಯಾಲಿಯೊಂದರಲ್ಲಿ ಪ್ರತಿಜ್ಞೆಗೆ ತನ್ನ ಸಹಿ ಹಾಕುವುದರೊಂದಿಗೆ ಆರಂಭಿಸಿದರು. ಅಂದು ಆ ರಾಜ್ಯದ ಹಲವೆಡೆ ರ್‍ಯಾಲಿಗಳು, ಮೆರವಣಿಗೆಗಳು, ಜಾಥಾಗಳು, ಸಮಾವೇಶಗಳೊಂದಿಗೆ ಸಹಿ ಸಂಗ್ರಹ ಕಾರ್ಯಕ್ರಮ ಆರಂಭವಾಯಿತು. ಮೊದಲ ದಿನವೇ ಸಾವಿರಾರು ಸಹಿಗಳ ಸಂಗ್ರಹವಾಯಿತು. ಇದು ಹದಿನೈದು ದಿನಗಳ ಕಾಲ ನಡೆಯಲಿದೆ.

ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಾ ಜ್ಯೋತಿಬಸುರವರು ಈ ಇಡೀ ಕಾರ್ಯಕ್ರಮ ಒಂದು ಯಾಂತ್ರಿಕ ಕೆಲಸವಾಗದಿರಲಿ ಎಂದು ಎಚ್ಚರಿಸಿದರು. ಮಾರ್ಚ್ 21 ರಂದು ಸಹಿ ಸಂಗ್ರಹ ಕಾರ್ಯಕ್ರಮ ಮುಗಿದರೂ ಕೋಮುವಾದಿ ಶಕ್ತಿಗಳ ವಿರುದ್ಧ ಪ್ರಚಾರಾಂದೋಲನ ಇದೇ ಹುರುಪಿನಿಂದ ಮುಂದುವರೆಯಬೇಕು ಎಂದರು.

ಸಹಿ ಸಂಗ್ರಹದ ಈ ಕಾರ್ಯಕ್ರಮ ಜನಗಳ ಬಳಿಗೆ ಹೋಗಿ ಕೋಮುವಾದಿ ಶಕ್ತಿಗಳು ದೇಶಕ್ಕೇ ಒಡ್ಡಿರುವ ಅಪಾಯವನ್ನು ವಿವರಿಸಲು ಇನ್ನೊಂದು ಅವಕಾಶ ಒದಗಿಸಿದೆ. ತತ್ವಬದ್ಧತೆ, ಸ್ಫೂರ್ತಿ ತುಂಬುವ ಕಣ್ನೋಟ' ಈ ಆಂದೋಲನದ ಮುಖ್ಯ ಲಕ್ಷಣವಾಗಬೇಕು. ಹಾಗಿದ್ದರೆ ಮಾತ್ರವೇ ದೇಶವನ್ನು ಧರ್ಮದ ಹೆಸರಿನಲ್ಲಿ ಒಡೆಯುವ ದುಷ್ಟ ಪ್ರಯತ್ನಗಳಿಗೆ ನಾವು ಬಲವಾದ ಪ್ರತಿರೋಧ ಕಟ್ಟುವತ್ತ ಪ್ರತಿಯೊಂದು ವಿಭಾಗದ ಜನಗಳನ್ನು ಆಕರ್ಷಿಸಲು ಸಾಧ್ಯ ಎಂದರು ಜ್ಯೋತಿಬಸು. "ನಾವು ಎಡಪಂಥೀಯರು ಕೋಮುವಾದದ ಪಿಡುಗಿನ ವಿರುದ್ಧ ನಿರಂತರ ಹೋರಾಟ ನಡೆಸಿದವರು. ಒಂದು ಧರ್ಮನಿರಪೇಕ್ಷ, ಪ್ರಜಾಪ್ರಭುತ್ವವಾದಿ ಐಕ್ಯ ವೇದಿಕೆಯ ಮೇಲೆ ಒಟ್ಟಾಗಿ ನಿಂತು ಕೋಮುವಾದಿ ಶಕ್ತಿಗಳ ದುಷ್ಟ ತಂತ್ರಗಳು ಯಾವುದೇ ರೀತಿಯಲ್ಲಿ, ನಮ್ಮೀ ದೇಶದ ಯಾವುದೇ ಮೂಲೆಯಲ್ಲಿ ಯಶಸ್ವಿಯಾಗದಂತೆ ನೋಡಿಕೊಳ್ಳಬೇಕಾದ ಅಗತ್ಯವನ್ನು ಜನ ಮನಗಾಣುವಂತೆ ಮಾಡುವ ಜವಾಬ್ದಾರಿಯೂ ನಮ್ಮ ಮೇಲೆಯೇ ಇದೆ' ಎಂದು ಜ್ಯೋತಿಬಸು ಹೇಳಿದರು.

ಸಾಮ್ರಾಜ್ಯ ಶಾಹಿ ಶಕ್ತಿಗಳು ಹೋಗುವ ಮೊದಲು ಈ ದೇಶವನ್ನು ವಿಭಜಿಸಿ ರಾಜಕೀಯ ಅಸ್ಥಿರತೆ ಹಾಗೂ ಪರಸ್ಪರ ಸಂದೇಹಗಳಿಂದ ತುಂಬಿಕೊಂಡ ಪರಿಸ್ಥಿತಿಯನ್ನು ನಿರ್ಮಿಸಿ ಹೋದ ದುರಂತವನ್ನು ನೋವಿನಿಂದ ನೆನಪಿಸಿದ ಅವರು ಈಗೀಗ ಸಂಘ ಪರಿವಾರದ ಮತ್ತು ದಿಲ್ಲಿಯಲ್ಲಿರುವ ಬಿಜೆಪಿ ನೇತೃತ್ವದ ಸರಕಾರ ಸಂವಿಧಾನವನ್ನು ಕಾಲ ಕೆಳಗೆ ತುಳಿಯುತ್ತಾ ದೇಶವನ್ನು ಧರ್ಮಗಳ ಆಧಾರದಲ್ಲಿ ತುಂಡರಿಸಲು ನಡೆಸುತ್ತಿರುವ ಯೋಜನಾಬದ್ಧ ಹೀನ ಪ್ರಯತ್ನಗಳನ್ನೆಲ್ಲಾ ತಡೆ ಹಿಡಿಯಲು ಒಂದು ಸೈದ್ಧಾಂತಿಕ ಸಮರವನ್ನು ನಡೆಸಬೇಕೆಂದು ಕರೆ ನೀಡಿದರು. 'ವಿವಿಧತೆಯಲ್ಲಿ ಏಕತೆ'ಗೆ ಕರೆ ನೀಡುವ ಪರಂಪರೆಯನ್ನು ಜನಗಳ ಮನ-ಹೃದಯಗಳಲ್ಲಿ ಮತ್ತೆ ಪ್ರಜ್ವಲಿತಗೊಳಿಸಬೇಕು ಎಂದರು.

ದುರುದ್ದೇಶಪೂರ್ವಕವಾಗಿಯೇ ಹಿಂದೂ ಧರ್ಮವನ್ನು ಒಂದು ನಿರ್ದಿಷ್ಟ ಪಂಥದ ಅಮಾನುಷ ಬಹುಸಂಖ್ಯಾತರವಾದವಾಗಿ ವ್ಯಾಖ್ಯಾನಿಸುತ್ತಾ ಅದರಲ್ಲಿ ದ್ವೇಷ ತುಂಬಿ, ಅನ್ಯಮತ ದ್ವೇಷದ ಅಪಾಯಕಾರಿ ಧೋರಣೆಯನ್ನು ಸಂಘ ಪರಿವಾರದ ಮತ್ತು ಬಿಜೆಪಿಯ ಉನ್ನತ ಮುಖಂಡರು ಹರಿಯಬಿಟ್ಟಿದ್ದಾರೆ ಎಂದು ಅತ್ಯಂತ ಕಟುವಾಗಿ ಟೀಕಿಸುತ್ತಾ ಜ್ಯೋತಿಬಸುರವರು ಹಿಂದೂಧರ್ಮ ಸದಾ ಸಹಿಷ್ಣುತೆ, ಸ್ವೀಕಾರ, ಜನಗಳ ಒಳಿತಿಗಾಗಿ ಇದ್ದು ಅದು ಎಂದೂ ಒಂದು ಅಸಹಿಷ್ಣುತೆಯಿಂದ ಕೂಡಿದ ವಿನಾಶಕಾರಿ ಮನೋಭಾವವನ್ನು ಆಹ್ವಾನಿಸಿಲ್ಲ, ಬೇರೆ ಧಾರ್ಮಿಕ ನಂಬಿಕೆ, ಆಚರಣೆಗಳಲ್ಲಿ ತೊಡಗಿರುವ ಸ್ತ್ರೀ-ಪುರುಷರ ಬಗ್ಗೆ ದಾಯಾದಿ ನಿಲುವನ್ನು ತಳೆದಿಲ್ಲ ಎಂದು ಹಿಂದುತ್ವ ವಾದಿಗಳೆನಿಸಿಕೊಂಡವರಿಗೆ ನೆನಪಿಸಿದರು.

"ಜನಗಳು ತಪ್ಪು ಮಾಡಬಹುದು. ಆದರೆ ಅವರು ಬೇಗನೇ ನಿಜ ಸಂಗತಿ ಅರಿಯುವಂತೆಯೂ ಮಾಡಬಹುದು. ನಗ್ನ ಕೋಮು ವಾದಿ ಭಾರತೀಯ ಜನತಾ ಪಾರ್ಟಿಗೆ ಮತ ನೀಡಿದವರೊಡನೆ ಅವರು ಮತ್ತೆ ಭಾರತದ ದೀರ್ಘಕಾಲದ ಬಹುಮುಖೀ ಪರಂಪರೆಯ ಧರ್ಮನಿರಪೇಕ್ಷ, ಪ್ರಜಾಸತ್ತಾತ್ಮಕ ಮುಖ್ಯ ಧಾರೆಗೆ ಬರುವ ತುರ್ತು ಅಗತ್ಯದ ಬಗ್ಗೆ ಮಾತನಾಡಬೇಕು" ಎಂದರು ಜ್ಯೋತಿಬಸು.

ಬಿಜೆಪಿ ನೇತೃತ್ವದ ಸರಕಾರ ತಾನೇ ನಿರ್ಮಿಸಿಕೊಂಡ ಆರ್ಥಿಕ ಮತ್ತು ಹಣಕಾಸು ದುಸ್ಥಿತಿಯಿಂದ ತಪ್ಪಿಸಿಕೊಳ್ಳಲು ಸತತವಾಗಿ ವಿದೇಶಿ ಬಂಡವಾಳದ ರಾಗ ಹಾಡುತ್ತಿರುವುದನ್ನು ಬಲವಾಗಿ ಟೀಕಿಸಿದ ಅವರು ಕಾಂಗ್ರೆಸ್ ಸರ್ಕಾರಗಳು ಆರಂಭಿಸಿದ 'ವಿದೇಶಿ ನೆರವಿನ' ಧೋರಣೆಯ ಹುಚ್ಚನ್ನು ಈ ಸರಕಾರ ಮುಂದುವರೆಸುತ್ತಿದೆ ಎಂದರು. ತಮ್ಮದೇ ದೇಶದಲ್ಲಿ ದಾರಿದ್ರ್ಯ ಪೀಡಿತರಿಗೆ ಯಾವುದೇ ಪರಿಹಾರ ನೀಡಲಒಲ್ಲದ ವಿದೇಶಿ ಬಂಡವಾಳ ಬಡ, ಹಿಂದುಳಿದ ದೇಶ ಎಂದು ಉಪೇಕ್ಷೆಯಿಂದ ಕಾಣುವ ಭಾರತವನ್ನು ಪಾರು ಮಾಡುತ್ತದೆ ಎಂದು ನಿರೀಕ್ಷಿಸುವುದು ಮೂರ್ಖತನ. "ನೈಸರ್ಗಿಕ ಸಂಪನ್ಮೂಲಗಳಿಂದ, ವಿಶಾಲ ಮಾನವ ಸಂಪನ್ಮೂಲಗಳಿಂದ ಶ್ರೀಮಂತವಾಗಿರುವ ನಾಡು ಭಾರತ ಕಳೆದ ಐವತ್ತು ವರ್ಷಗಳಲ್ಲಿ ಚೀಣಾ ಜನತಾ ಗಣತಂತ್ರದಿಂದ ಬಹಳ ಹಿಂದುಳಿಯುವಂತಾಗಿದೆ" ಎಂದು ಖೇದ ವ್ಯಕ್ತಪಡಿಸಿದರು ಭಾರತದ ಪ್ರಜಾಪ್ರಭುತ್ವ ಆಂದೋಲನದ ಈ ಹಿರಿಯ ಮುಖಂಡರು.

ಇತ್ತೀಚಿನ ಹಲವು ಚುನಾವಣೆಗಳಲ್ಲಿ ಸುತ್ತಮುತ್ತೆಲ್ಲಾ ಅಧಿಕಾರಸ್ಥ ಪಕ್ಷಗಳು ಅಧಿಕಾರ ಕಳಕೊಳ್ಳುತ್ತಿರುವ ಸನ್ನಿವೇಶದಲ್ಲೂ ತನ್ನ 'ಕೋಟೆಗಳನ್ನು ಉಳಿಸಿಕೊಂಡಿರುವ' ಎಡ ಪಂಥೀಯರು ಈಗ ಧರ್ಮನಿರಪೇಕ್ಷ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ಇನ್ನೊಂದು ಮೂರನೇ ರಂಗದ ಆಧಾರವಾಗಿ ಕೆಲಸ ಮಾಡುವ ಚಾರಿತ್ರಿಕ ಜವಾಬ್ದಾರಿ ನಿರ್ವಹಿಸಬೇಕಾಗಿದೆ ಎಂದು ಪುನರುಚ್ಚರಿಸುತ್ತಾ ಕೋಮುವಾದದ ಭಕ್ತರ ವಿರುದ್ಧ ಒಂದು ರಾಷ್ಟ್ರವ್ಯಾಪಿ ಸಾಮೂಹಿಕ ಆಂದೋಲನಕ್ಕೆ ನೇತೃತ್ವ ನೀಡುವುದು ಈಗ ಎಡಪಂಥೀಯರ ಮುಂದಿರುವ ಪ್ರಧಾನ ಕೆಲಸ ಎಂದ ಜ್ಯೋತಿಬಸುವರವರು 'ಹದಿನೈದು ದಿನಗಳ ಸಹಿ ಸಂಗ್ರಹ ಚಳುವಳಿ ದೇಶದ ಉದ್ದಗಲಕ್ಕೂ ಜನಜಾಗೃತಿಯೆಬ್ಬಿಸಿ ಮುಂಬರುವ ತಿಂಗಳುಗಳಲ್ಲಿ ನಡೆಯಲಿರುವ ಜನಾಂದೋಲನದ ಆರಂಭ ಬಿಂದುವಾಗಬೇಕು" ಎಂದು ಕೊನೆಯಲ್ಲಿ ಹೇಳಿದರು.

(ಐಎನ್ಎನ್)

ಎಐಕೆಎಸ್ ನ ನಿರ್ಣಯಗಳು

ಪುಟ 5 ರಿಂದ

ಅತ್ಯಂತ ಕ್ರೂರ ಪಾಳೆಗಾರಿ ಶೋಷಣೆಯನ್ನು ಮುಂದುವರೆಸಲಿಕ್ಕಾಗಿ ಈ ರಕ್ಷಣೆ.

ದುರದೃಷ್ಟವಶಾತ್ ಕೆಲವು ಉಗ್ರಗಾಮಿ, ಸಂಕುಚಿತವಾದೀ ಶಕ್ತಿಗಳು ರೈತರಿಗೆ ಪ್ರತಿ-ಹತ್ಯೆಯ ದಾರಿ ತೋರಿಸಿ, ಆ ಮೂಲಕ ಹಲ್ಲೆಗೊಳಗಾದ ದಲಿತರು ಹಾಗೂ ಹಲ್ಲೆ ಮಾಡುವ ಭೂಮಾಲಕರು ಮತ್ತವರ ಗೂಂಡಾಗಳನ್ನು ಒಂದೇ ತಕ್ಕಡಿಯಲ್ಲಿ ತೂಗುವಂತೆ ಮಾಡುತ್ತಿವೆ. ವರ್ಗ ಸಮಾಜವೊಂದರಲ್ಲಿ ಇಡೀ ಪ್ರಭುತ್ವದ ಶಕ್ತಿ ಶೋಷಕ ವರ್ಗಗಳ ಹಿಂದಿರುವಾಗ ಆ ವರ್ಗಗಳ ಕೆಲವು ವ್ಯಕ್ತಿಗಳನ್ನು ಹತ್ಯೆಗೆ ಪ್ರತಿಯಾಗಿ ಹತ್ಯೆ ಮಾಡಿದರೆ ಅದು ಅಂತಿಮವಾಗಿ ದಲಿತರ ಚಳುವಳಿಗೇ ಮಾರಕವಾಗುತ್ತದೆ. ದಲಿತರ ಈ ಹತ್ಯೆಗಳ ಹಿಂದಿರುವುದು ಊಳಿಗಮಾನ್ಯ ಶೋಷಕ ವ್ಯವಸ್ಥೆ, ಕೆಲವು ಭೂಮಾಲಕರು ಅಥವಾ ಅವರ ಏಜೆಂಟರನ್ನು ಕೊಲ್ಲುವುದರಿಂದ ಈ ಶೋಷಿತ ವ್ಯವಸ್ಥೆಯನ್ನು ನಿರ್ಮೂಲ ಮಾಡಲಾಗುವುದಿಲ್ಲ ಎಂಬುದನ್ನು ದಲಿತ ವರ್ಗಗಳು ಅರಿಯಬೇಕು.

ಕೆಲವು ಜಾತೀವಾದಿ ಶಕ್ತಿಗಳು ಪರಿಸ್ಥಿತಿಯ ರಾಜಕೀಯ ಲಾಭ ಪಡೆದು ಇವು ಜಾತಿ-ಸಮರ ಎನ್ನುವಂತೆ ಚಿತ್ರಿಸಿ ಆ ಮೂಲಕ ಈ ಧಾಳಿಗಳ ವರ್ಗ ಸ್ವರೂಪವನ್ನು ಮುಚ್ಚಿಟ್ಟು ಚಳುವಳಿ ತನ್ನನ್ನು ತಾನೇ ವಿಫಲಗೊಳಿಸಿಕೊಳ್ಳುವ ದಾರಿಗೆ ತಳ್ಳುತ್ತಿದೆ.

ಎಲ್ಲಾ ಕೃಷಿಕಾರ್ಮಿಕರು, ರೈತರು, ಕಾರ್ಮಿಕ ವರ್ಗ, ಮಧ್ಯಮ ವರ್ಗದ ಬುದ್ದಿಜೀವಿಗಳು ಮತ್ತಿತರ ಎಲ್ಲಾ ಶಾಂತಿಪ್ರಿಯ ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಶೋಷಿತ ವಿಭಾಗಗಳ ಬೆಂಬಲಕ್ಕೆ ನಿಂತು ಸಮಾಜದಿಂದ ಈ ದಮನ, ಶೋಷಣೆಯನ್ನು ನಿರ್ಮೂಲ ಮಾಡಲು ಅವರಿಗೆ ಎಲ್ಲಾ ವಿಧದಲ್ಲಿ ನೆರವಾಗಬೇಕು.

ಎಐಕೆಎಸ್‌ನ ಎಲ್ಲಾ ಘಟಕಗಳು ಈ ಭೂಮಾಲಕರ ವಿರುದ್ಧ ಪ್ರಚಾರ ನಡೆಸಿ ಅವರಿಗೆ ಅತ್ಯಂತ ಕಠಿಣ ಶಿಕ್ಷೆ ನೀಡುವಂತೆ ಒತ್ತಾಯಿಸಬೇಕು ಹಾಗೂ ಬಿಹಾರದ ಈ ಹತ್ಯಾಕಾಂಡಗಳಿಗೆ ಬಲಿಯಾದವರ ಕುಟುಂಬಗಳಿಗೆ ಪರಿಹಾರ ನೀಡಲು ನಿಧಿ ಸಂಗ್ರಹಿಸಲು ಒಂದು ಚಳುವಳಿಯನ್ನು ಆರಂಭಿಸಬೇಕು ಎಂದು ಸಮ್ಮೇಳನ ಕರೆ ನೀಡಿದೆ.


ಅಂತರ್‍ರಾಷ್ಟ್ರೀಯ ತ್ರಿಮೂರ್ತಿಗಳ ಒತ್ತಡದಿಂದ ಭಾರತದ ಕೃಷಿಯ ಮೇಲೆ ದೀರ್ಘಕಾಲದ ದುಷ್ಪರಿಣಾಮ ಬೀರುವ ಪೇಟೆಂಟ್ ಕಾನೂನುಗಳು

ಎಐಕೆಎಸ್ ಸಮ್ಮೇಳನ ಮತ್ತೊಂದು ನಿರ್ಣಯವನ್ನು ಅಂಗೀಕರಿಸಿ ಬಿಜೆಪಿ ಸರಕಾರ ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್‌ನ ಶಾಮೀಲಿನಿಂದ ಪೇಟೆಂಟ್ ಕಾನೂನನ್ನು ಪಾಸು ಮಾಡಿಕೊಳ್ಳಲು ಶತಪ್ರಯತ್ನ ನಡೆಸಿರುವ ಬಗ್ಗೆ ಗಂಭೀರ ಆತಂಕ ವ್ಯಕ್ತಪಡಿಸಿತು. ಡಬ್ಲ್ಯು.ಟಿ.ಓ., ವಿಶ್ವಬ್ಯಾಂಕ್, ಐಎಂಎಫ್‌ನ ಆಪ್ತಮಿತ್ರ ಅಂತರ್‍ರಾಷ್ಟ್ರೀಯ ತ್ರಿಮೂರ್ತಿಗಳ ಒತ್ತಡದಿಂದ ಇದನ್ನು ಮಾಡಲಾಗುತ್ತಿದೆ ಎಂದು ಅದು ಹೇಳಿದೆ.

ಡಬ್ಲ್ಯು.ಟಿ.ಓ. ಸದಸ್ಯತ್ವಕ್ಕೆ ಬೇಕಾಗುವ 'ಟ್ರಾನ್ಸಿಟರಿ ರೂಲ್ಸ್'(ಸಂಕ್ರಮಣ ನಿಬಂಧನೆಗಳು) ಹಾಗೂ ಇ.ಎಂ.ಆರ್ (ವಿಶೇಷ ಮಾರಾಟ ಹಕ್ಕು) ಈ ಎರಡು ಅಂಶಗಳಲ್ಲದೆ ಬೌದ್ಧಿಕ ಆಸ್ತಿಕ ಹಕ್ಕುಗಳು, ಜೀವ-ವೈವಿಧ್ಯ ಇತ್ಯಾದಿಗಳ ಬಗ್ಗೆಯೂ ಸರಕಾರ ತರಬೇಕೆಂದಿರುವ ಕಾನೂನುಗಳು ಈ ಅಂತರ್‍ರಾಷ್ಟ್ರೀಯ ತ್ರಿಮೂರ್ತಿ ಹಾಗೂ ಕೃಷಿ ವ್ಯವಹಾರದಲ್ಲಿ ತೊಡಗಿರುವ ಬಹುರಾಷ್ಟ್ರೀಯ ಕಂಪನಿಗಳಿಗೆ ಶರಣಾಗುವ ನಿಲುವುಗಳು ಎಂದಿರುವ ಎಐಕೆಎಸ್ ನಿರ್ಣಯ ಇಂತಹ ಈ ಗುಲಾಮತನದ ನಿಲುವನ್ನು ಬಿಡಬೇಕೆಂದು ಸರಕಾರವನ್ನು ಹಾಗೂ ಪ್ರಮುಖ ಪ್ರತಿಪಕ್ಷ ಕಾಂಗ್ರೆಸ್ಸನ್ನು ಆಗ್ರಹಪಡಿಸಿದೆ.

ಸಸ್ಯ ರಕ್ಷಣೆಯ ಬಗ್ಗೆ ಒಪ್ಪಂದ ಈ ವರ್ಷದ ಅಂತ್ಯದಲ್ಲಿ ಹಾಗೂ ಇಡೀ ಟ್ರಿಪ್ಸ್ ಒಪ್ಪಂದ ನಂತರ ಕೆಲವೇ ತಿಂಗಳಲ್ಲಿ ಪರಾಮರ್ಶೆಗೆ ಬರಲಿರುವಾಗ ಸರಕಾರ ಏಶಿಯಾ, ಆಫ್ರಿಕಾ, ಲ್ಯಾಟಿನ್ ಅಮೆರಿಕಾದ ಬಡ ದೇಶಗಳ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಈ ಶಕ್ತಿಗಳನ್ನು ಅಣಿನೆರೆಸಿ ಈ ಒಪ್ಪಂದಗಳಲ್ಲಿರುವ ಅನ್ಯಾಯಗಳನ್ನು ಸರಿಪಡಿಸುವ ಗಂಭೀರ ಪ್ರಯತ್ನ ನಡೆಸುವ ಬದಲು ಅಂತರ್‍ರಾಷ್ಟ್ರೀಯ ಬಂಡವಾಳಕ್ಕೆ ತಲೆಬಾಗುವ ದಾರಿ ಹಿಡಿದಿರುವ ಬಗ್ಗೆ ನಿರ್ಣಯ ತೀವ್ರ ಆತಂಕ ವ್ಯಕ್ತಪಡಿಸಿತು. ಪೇಟೆಂಟ್ ಪ್ರಶ್ನೆಯ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಸಬೇಕು ಎಂದೂ ಅದು ಸರಕಾರವನ್ನು ಆಗ್ರಹಿಸಿದೆ.

ಭಾರತೀಯ ಕೃಷಿಯ ಮೇಲೆ ದೀರ್ಘಕಾಲದ ಹಾಗೂ ನಂತರ ಎಂದೂ ಸರಿಪಡಿಸಲಾಗದ ದುಷ್ಪರಿಣಾಮ ಬೀರಲಿರುವ ಈ ಪ್ರಶ್ನೆಯ ಬಗ್ಗೆ ಎಐಕೆಎಸ್ ಘಟಕಗಳು ಹಾಗೂ ರೈತರ ನಡುವೆ ದುಡಿಯುತ್ತಿರುವ ಎಲ್ಲಾ ಎಡ-ಪ್ರಜಾಪ್ರಭುತ್ವವಾದಿ ಪ್ರಗತಿಪರ ಶಕ್ತಿಗಳು ಈ ಬಗ್ಗೆ ಜನಗಳನ್ನು ಜಾಗೃತಗೊಳಿಸಿ ಭಾರತದ ಅಮೂಲ್ಯ ಭೂಮಿ, ಔಷಧಿ ಸಸ್ಯಗಳು ಮತ್ತಿತರ ಜೈವಿಕ ಸಂಪತ್ತನ್ನು ಹಾಗೂ ಕೃಷಿಯನ್ನು ಕೇವಲ ಶ್ರೀಮಂತ ದೇಶಗಳ ಬಹುರಾಷ್ಟ್ರೀಯ ಕಂಪನಿಗಳ ಹಿತಾಸಕ್ತಿಗಳನ್ನು ಸಾಧಿಸಲು ಜಾಗತೀಕರಣದ ಬಲಿಪೀಠಕ್ಕೇರಿಸಿರುವುದನ್ನು ಪ್ರತಿಭಟಿಸಬೇಕೆಂದು ಕರೆ ನೀಡಿದೆ.



ಮಾರ್ಚ್ 6, 1999 ರಂದು ಬೆಂಗಳೂರಿನ ಮಹಾತ್ಮಾಗಾಂಧಿ ಪ್ರತಿಮೆಯ ಎದುರು ಕೋಮು ಸೌಹಾರ್ದ ಪ್ರತಿಜ್ಞೆ ಬೋಧಿಸುತ್ತಿರುವ ಡಾ. ಎಸ್.ಸೂರ್ಯನಾರಾಯಣ ರಾವ್. ಜನತಾದಳದ ಕೆಲವು ಮುಖಂಡರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು.

ನಾವು, ಭಾರತದ ಜನತೆ

ಭಾರತೀಯ ಗಣತಂತ್ರದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ತಳಪಾಯವನ್ನು ಕಾಪಾಡಿ ಕೊಳ್ಳಲು ಮತ್ತು ಬಲಪಡಿಸಲು ಕಂಕಣಬದ್ಧರು ಎಂದು ಪುನರುಚ್ಚರಿಸುತ್ತೇವೆ;

ಹಲವಾರು ಶತಮಾನಗಳಲ್ಲಿ ವಿಕಾಸಗೊಂಡಿರುವ ನಮ್ಮ ಬಹುಮುಖೀ ಹಾಗೂ ಸಮನ್ವಯದ ನಾಗರಿಕತೆಯ ಪರಂಪರೆಯನ್ನು ಕಾಯ್ದುಕೊಳ್ಳ ವಚನಬದ್ಧರಾಗುತ್ತೇವೆ.

ಇಂತಹ ದುಷ್ಟ ಶಕ್ತಿಗಳ ಧ್ವಂಸಕಾರ್ಯಗಳಿಂದ ನಮ್ಮ ತಾಯ್ನಾಡನ್ನು ರಕ್ಷಿಸಲು, ಅದರ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಳ್ಳಲು ದೃಢ ನಿರ್ಧಾರ ಮಾಡಿದ್ದೇವೆ

ಮತ್ತು ಅತ್ಯುನ್ನತ ದೇಶಪ್ರೇಮದ ಹುರುಪಿನಿಂದ

ಸ್ವತಂತ್ರ ಭಾರತ ಹಿಂದೆಂದೂ ಎದುರಿಸದಿರುವ ಗಂಭೀರ ಸವಾಲನ್ನು ಎದುರಿಸಲು ಮತ್ತು ಸೋಲಿಸಲು ಐಕ್ಯತೆಯಿಂದ ಪ್ರತಿಜ್ಞೆ ಗೈಯುತ್ತೇವೆ.



ಪ್ರತಿಜ್ಞೆಗೆ ಸಹಿ ಹಾಕುತ್ತಿರುವ ಪ್ರಖ್ಯಾತ ಸಾಹಿತಿ ಚಂದ್ರಶೇಖರ ಪಾಟೀಲ ಹಾಗೂ ಮಾಜಿ ಸಂಸದ ಸಿ.ನಾರಾಯಣ ಸ್ವಾಮಿ

ಇರಾನ್ ಸ್ಥಳೀಯ ಸಂಸ್ಥೆಗಳಲ್ಲಿ ಅಧ್ಯಕ್ಷರ ಬೆಂಬಲಿಗರಿಗೆ ಭಾರಿ ವಿಜಯ

ಇತ್ತೀಚೆಗೆ ಇರಾನ್‌ನಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ನಡೆದ ಚುನಾವಣೆಗ್ಗಳಲ್ಲಿ ಅಧ್ಯಕ್ಷ ಖತಮಿ ಬೆಂಬಲಿಗರಿಗೆ ಭಾರಿ ವಿಜಯ ಲಭಿಸಿದೆ. ಅಧ್ಯಕ್ಷ ಖತಮಿ ಇಸ್ಲಾಮಿಕ್ ಉಗ್ರವಾದಿಗಳನ್ನು ವಿರೋಧಿಸಿ, ಮೂಲಭೂತವಾದಿ ಆಡಳಿತದಲ್ಲಿ ಹಲವು ಸುಧಾರಣೆಗಳನ್ನು ತರುತ್ತಿದ್ದು, ಸಾಮಾಜಿಕ- ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಉದಾರವಾದಿ ನೀತಿಗಳನ್ನು ಜಾರಿಗೆ ತರುತ್ತಿದ್ದಾರೆ. ಈ ಎರಡು ಬಣಗಳ ನಡುವೆ ಆಗಾಗ ಘರ್ಷಣೆಗಳು ನಡೆಯುತ್ತಿದ್ದು, ಅಲ್ಲಿನ ಅಧ್ಯಕ್ಷರ ಚುನಾವಣೆ ಮತ್ತು ಈಗಿನ ಸ್ಥಳೀಯ ಸಂಸ್ಥೆಗಳ ಚುನಾವಣೆ ಪ್ರಮುಖ ಮೈಲಿಗಲ್ಲುಗಳಾಗಿ ಪರಿಗಣಿಸಲಾಗಿದೆ. ಇರಾನ್‌ನ ಇಸ್ಲಾಮಿಕ್ ಕ್ರಾಂತಿ ಈ ವರ್ಷ ಎರಡು ದಶಕಗಳನ್ನು ಮುಗಿಸಲಿದ್ದು, ಇಸ್ಲಾಮಿಕ್ ಆಡಳಿತದ ಉಗ್ರವಾದಿ ಸ್ವರೂಪವನ್ನು ಹಲವರು ಪ್ರಶ್ನಿಸುತ್ತಿದ್ದಾರೆ. ಜನರ ದೈನಂದಿನ ಸಮಸ್ಯೆಗಳ ಬಗ್ಗೆ ಚಿಂತಿಸುವುದು ಬಿಟ್ಟು, ಧಾರ್ಮಿಕ ಮೂಲಭೂತವಾದವನ್ನು ಎಲ್ಲರ ಮೇಲೂ ಹೊರಿಸುವ ಆಡಳಿತದ ವಿರುದ್ಧ ಜನರ ಆಕ್ರೋಶ ದಿನೇ ದಿನೇ ಹೆಚ್ಚುತ್ತಿದೆ. ಉದಾರವಾದಿಗಳ ಚುನಾವಣಾ ವಿಜಯ ಇದನ್ನೇ ತೋರಿಸುತ್ತದೆ.

ಇತ್ತೀಚೆಗೆ ಇಸ್ಲಾಮಿಕ್ ಮೂಲಭೂತ ವಾದದ ವಿರೋಧಿ ಬುದ್ಧಿಜೀವಿಗಳು, ಲೇಖಕರು, ಪತ್ರಕರ್ತರು ಕೊಲೆಯ ಬಗ್ಗೆ ತನಿಖೆ ನಡೆಸಿದಾಗ ಇದರ ಹಿಂದೆ ಸರ್ಕಾರದ ಬೇಹುಗಾರಿಕೆ ಸಚಿವಾಲಯದ ಕೈವಾಡ ಇತ್ತು ಎಂದು ತಿಳಿದು ಬಂದಿತ್ತು, ಉಗ್ರವಾದಿ ಬಣಕ್ಕೆ ಸೇರಿದ ಈ ಸಚಿವಾಲಯ ಮಂತ್ರಿಯನ್ನು ರಾಜೀನಾಮೆ ಕೊಡಲು ಕೇಳಲಾಯಿತು. ಉಗ್ರವಾದಿ ಬಣ ಆ ದೇಶದ ಇಸ್ಲಾಮಿಕ್ ಸಂವಿಧಾನದ ಪ್ರಕಾರ ಅತ್ಯಂತ ಪ್ರಬಲ ವಾಗಿರುವ ಸುಪ್ರೀಂ ಗೈಡ್ ಖಮೇನಿಯ ನಾಯಕತ್ವದಲ್ಲಿದೆ, ಸರ್ಕಾರದ ಅಧಿಕಾರಶಾಹಿಯಲ್ಲಿ ಉಗ್ರವಾದಿ ಬಣ ಪ್ರಬಲವಾಗಿದೆ.

ಉದಾರವಾದಿ ಬಣದ ಈ ಜಯದ ಅರ್ಥ ಇಸ್ಲಾಮಿಕ್ ಮೂಲಭೂತವಾದಕ್ಕೆ ತೀವ್ರ ಸವಾಲು ಬಂದಿದೆ ಎಂದಲ್ಲ. ಅಥವಾ ಜನಪರ ಜಾತ್ಯಾತೀತ ವ್ಯವಸ್ಥೆಯು ಹೊಸ್ತಿಲಲ್ಲಿದೆ ಎಂದಲ್ಲ. ಅಧ್ಯಕ್ಷ ಖಮೇನಿ ಮತ್ತು ಅವರ ಬೆಂಬಲಿಗರೂ ಇಸ್ಲಾಮಿಕ್ ಆಡಳಿತದಲ್ಲಿ ನಂಬಿಕೆ ಇರುವವರೇ. ಆದರೆ ಜನರ ಆಕ್ರೋಶ, ದೇಶದ ದುರ್ಭರ ಆರ್ಥಿಕ ಸ್ಥಿತಿಯ ಒತ್ತಡ ಅವರನ್ನು ಜನರ ಒತ್ತಡಕ್ಕೆ ಗುರಿಮಾಡಿದೆ. ಅಲ್ಲದೆ ಇರಾನನ್ನು ಜಾಗತಿಕ ಆರ್ಥಿಕ ವ್ಯವಸ್ಥೆ ಜತೆ ಮತ್ತೆ ಜೋಡಿಸಬಯಸುವ ಬಂಡವಾಳಶಾಹಿ-ಪರ ಬಣವೂ ಅಧ್ಯಕ್ಷ ಖತಮಿಯ ಬೆಂಬಲದಲ್ಲಿ ಇದ್ದಾರೆ. ಆದರೆ ಅಧ್ಯಕ್ಷ ಖತಮಿ ಅವರ ಉದಾರವಾದಿ ನೀತಿಗಳಿಂದ ಜನ-ಪರ ಜಾತ್ಯಾತೀತ ರಾಜಕೀಯ ಚಟುವಟಿಕೆ ಇರಾನ್‌ನಲ್ಲಿ ಮತ್ತೆ ಆರಂಭವಾಗಬಹುದಾದ ಪ್ರಜಾಸತ್ತಾತ್ಮಕ ಸನ್ನಿವೇಶ ರೂಪುಗೊಳ್ಳುವ ಸಾಧ್ಯತೆ ಇದೆ. ○

ಢಾಕ್ಕಾದಲ್ಲಿ D-8 ಶೃಂಗ ಸಭೆ

ಜಿ-15 ರ ನಂತರ, ಇನ್ನೊಂದು ವಿಕಾಸ ಶೀಲ ದೇಶಗಳ ಗುಂಪು ಒಂದು ಕೂಟ ರಚಿಸಿದೆ. ಎಂಟು ದೇಶಗಳ ಈ ಕೂಟವನ್ನು D-8 ಎಂದು ಕರೆಯಲಾಗಿದೆ. ಎರಡು ವರ್ಷಗಳ ಒಳಗೆ ಇದು ಆಗಲೇ ಎರಡನೇ ಶೃಂಗ ಸಭೆ ನಡೆಸಿದೆ. ಢಾಕ್ಕಾದಲ್ಲಿ ಇತ್ತೀಚೆಗೆ D-8 ಈ ಎರಡನೇ ಶೃಂಗ ಸಭೆ ನಡೆಯಿತು. ಬಾಂಗ್ಲಾ ದೇಶ ಈಜಿಪ್ಟ್, ಇಂಡೋನೇಶ್ಯಾ, ಇರಾನ್, ಮಲೇಶ್ಯಾ ನೈಜೀರಿಯಾ, ಪಾಕಿಸ್ತಾನ ತುರ್ಕಿ ಇವೇ ಆ 8 ದೇಶಗಳು. ಈ ಎಲ್ಲಾ ದೇಶಗಳು ಇಸ್ಲಾಮಿಕ್ ದೇಶಗಳ ಸಂಘಟನೆಯ ಸದಸ್ಯ ದೇಶಗಳು ಸಹ. ಆದರೆ D-8ನ ಉದ್ದೇಶ ಧರ್ಮದ ಆಧಾರದ ಮೇಲೆ ಕೂಟ ರಚಿಸುವುದಲ್ಲ. ಆರ್ಥಿಕ ಸಹಕಾರ ಮತ್ತು ವಾಣಿಜ್ಯ ಬೆಳೆಸುವ ಉದ್ದೇಶ.

D-8 ಅಂಗೀಕರಿಸಿದ 33 ಅಂಶಗಳ ಘೋಷಣೆ ಜಾಗತೀಕರಣ ಮತ್ತು ಅದು ತಂದಿರುವ ಬಿಕ್ಕಟ್ಟಿನ ಕಡೆಗೆ ಗಮನ ಸೆಳೆಯಿತಾದರೂ ಜಾಗತೀಕರಣವನ್ನೇ ಪ್ರಶ್ನಿಸಲಿಲ್ಲ. ಅಂತರ್ರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿ ಸುಧಾರಣೆ, ಕೆಲವು ನಿಯಂತ್ರಣ ತಂದರೆ ಜಾಗತೀಕರಣ ಎಲ್ಲಾ ದೇಶಗಳಿಗೂ ಒಳ್ಳೆಯದು ಮಾಡಬಲ್ಲುದು ಎಂದಿದೆ. 13 ಸಹಕಾರದ ಕ್ಷೇತ್ರಗಳನ್ನು ಪ್ರಾಜೆಕ್ಟ್‌ಗಳನ್ನು ಗುರುತಿಸಲಾಯಿತು. ಮಲೇಶ್ಯಾದ ಪ್ರಧಾನಿ ಡಾ|| ಮಹತೀರ್ ಮಹಮ್ಮದ್ ಮಾತ್ರ ಜಾಗತೀಕರಣದ ಸಿದ್ಧಾಂತದ ವಿರುದ್ಧ ಸ್ಪಷ್ಟ ನಿಲುವು ತಳೆದು ಮಾತನಾಡಿದರು. ಪಾಕಿಸ್ಥಾನದ ಪ್ರಧಾನಿ ನವಾಜ್ ಶರೀಫ್ ಎಂದಿನಂತೆ ಕಾಶ್ಮೀರ ಸಮಸ್ಯೆಯ ರಾಗ ತೆಗೆದರು. 80 ಕೋಟಿ ಜನಸಂಖ್ಯೆ, ಜಗತ್ತಿನ ಶೇಕಡಾ 12 ರಷ್ಟು ತೈಲ, ಶೇಕಡಾ 20 ಪ್ರಾಕೃತಿಕ ಗ್ಯಾಸ್ ಹೊಂದಿರುವ ಈ ಎಂಟು ದೇಶಗಳು ಪರಸ್ಪರ ಆರ್ಥಿಕ ಸಹಕಾರ ಹೆಚ್ಚಿಸಿ, ವಾಣಿಜ್ಯ ಬೆಳೆಸಿದರೆ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಗಮನಾರ್ಹ ಪರಿಣಾಮ ಬೀರಬಲ್ಲುದು. ಸದ್ಯಕ್ಕೆ ಜಾಗತಿಕ ವಾಣಿಜ್ಯ ಕೇವಲ ಶೇಕಡಾ 4 ಈ ದೇಶಗಳದ್ದು, ಈ ದೇಶಗಳ ನಡುವೆ ವಾಣಿಜ್ಯ ಅವುಗಳ ಜಾಗತಿಕ ವಾಣಿಜ್ಯದ ಕೇವಲ ಶೇಕಡಾ4.

'ತೋಳಗಳು ಕೋಳಿಗಳನ್ನು ಸಾಕಲಾರವು' ಬ್ರೆಜಿಲ್ ಪ್ರತಿಭಟನೆ

ಬ್ರೆಜಿಲ್‌ನ ಬಿಕ್ಕಟ್ಟು, ಅದಕ್ಕೆ ಸರ್ಕಾರದ ಸ್ಪೂರ್ತಿ, ಐ.ಎಂ.ಎಫ್.ಗೆ ಶರಣಾಗತಿ ಇವು ಜನರನ್ನು ತೀವ್ರ ಆಕ್ರೋಶಕ್ಕೊಳಪಡಿಸಿವೆ. ಪ್ರತಿ ದಿನ ರಾಜಧಾನಿ ರಿಯೋದಲ್ಲಿ ಪ್ರತಿಭಟನೆಗಳು ಪ್ರದರ್ಶನಗಳು. ಇವುಗಳಲ್ಲೆಲ್ಲಾ ಇತ್ತೀಚಿನ ಭೂಮಿ ರಹಿತ ಗ್ರಾಮೀಣ ಕೂಲಿಕಾರರ ಯೂನಿಯನ್‌ನ ಪ್ರತಿಭಟನಾ ಪ್ರದರ್ಶನ ಗಮನ ಸೆಳೆಯಿತು. ಬ್ರೆಜಿಲ್‌ನ ಕೇಂದ್ರೀಯ ಬ್ಯಾಂಕ್ ಅಧ್ಯಕ್ಷ ಅರ್ ಮೀನೋ ಫ್ರಾಗಾರನ್ನು ನೇಮಿಸಿದ್ದರ ವಿರುದ್ಧವಾಗಿತ್ತು. ಈತ ಈ ಮೊದಲು ಬಾರಿ ಅಂತರ್ರಾಷ್ಟ್ರೀಯ ಹಣಕಾಸು ಲೇವಾದೇವಿ ಮಾಡುವ ಜಾರ್ಜ್ ಸೋರೋಸ್‌ನ ಮುಖ್ಯ ಸಲಹಾಗಾರನಾಗಿದ್ದು, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿ ಕಾಪಾಡುವ ವ್ಯಕ್ತಿ ಎಂದು ಕುಖ್ಯಾತನಾಗಿ ದ್ದಾನೆ. ಇಂತಹವನನ್ನು ಕೇಂದ್ರೀಯ ಬ್ಯಾಂಕ್‌ನ ಮುಖ್ಯಸ್ಥನಾಗಿ ಮಾಡಿದ್ದು ಬ್ರೆಜಿಲ್‌ನ ಜನರನ್ನು ಕುಪಿತಗೊಳಿಸಿದೆ.

ಪ್ರತಿಭಟನಾಕಾರರು ಕೋಳಿಗಳನ್ನು, ತೋಳಗಳು ಕೋಳಿಗಳನ್ನೂ ಸಾಕಲಾರವು ಎಂಬ ಬ್ಯಾನರುಗಳನ್ನು ಹಿಡಿದಿದ್ದರು.





ಲೇ ಆಫ್ ರಿಟ್ರೆಂಚ್‌ಮೆಂಟ್ ವಿರುದ್ಧದ ಕೊರಿಯನ್ ಕಾರ್ಮಿಕರ ಮುಷ್ಕರ

ದಕ್ಷಿಣ ಕೊರಿಯಾದ ಹೆಚ್ಚಿನ ಕೈಗಾರಿಕೆಗಳ ಕಾರ್ಮಿಕರು ಹೆಚ್ಚುತ್ತಿರುವ ಲೇ ಆಫ್, ರಿಟ್ರೆಂಚ್ ಮೆಂಟ್ ವಿರುದ್ಧ ಒಂದು ದಿನದ ಸಾರ್ವತ್ರಿಕ ಮುಷ್ಕರ ಹೂಡಿದರು. ಆ ದಿನ ನಡೆದ ಹಲವು ಪ್ರತಿಭಟನಾ ಪ್ರದರ್ಶನಗಳಲ್ಲಿ ಪೋಲೀಸರು ಕಾರ್ಮಿಕರ ನಡುವೆ ಘರ್ಷಣೆ ನಡೆದು ಹಲವು ಕಡೆ ಕಾರ್ಮಿಕರು ಪೋಲಿಸರ ಶೀಲ್ಡ್‌ಗಳಿಗೆ ಒಡೆಯುವಷ್ಟು ಕುಪಿತರಾಗಿದ್ದರು. ದ.ಕೊರಿಯದ ಕಂಪನಿಗಳು ಪುನಃ ಸಂಘಟಿತವಾಗಿ ನಡೆಯುವ ಲೇ ಆಫ್, ರಿಟ್ರೆಂಚ್ ಮೆಂಟ್ ಈಗಾಗಲೇ ಭೀಕರವಾಗಿರುವ ನಿರುದ್ಯೋಗ ಹಿನ್ನೆಲೆಯಲ್ಲೂ ಬಾರಿ ಅತೃಪ್ತಿಗೆಹೆ ಕಾರಣವಾಗಿದೆ.

ಈಗ ಕೋರಿಯಾದ ನಿರುದ್ಯೋಗಿಗಳ ಸಂಖ್ಯೆ 17.6 ಲಕ್ಷ ಆಗಿದ್ದು ಹಲವು ವರ್ಷಗಳಲ್ಲಿ ಅತ್ಯಂತ ಹೆಚ್ಚಿನ ನಿರುದ್ಯೋಗದ ದರವಾಗಿರುವ ಶೇಕಡಾ 8.5ನ್ನು ಮುಟ್ಟಿದೆ. ಜನವರಿ ಒಂದರಲ್ಲೇ ಲಕ್ಷದಷ್ಟು ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ನಿರುದ್ಯೋಗ ಇನ್ನೂ ಏರಲಿದ್ದು ಕನಿಷ್ಟ ಶೇಕಡಾವಾರನ್ನು ತಲುಪಬಹುದು.

CIS ನ ಮುಖ್ಯಸ್ಥನನ್ನು ಆಸ್ಪತ್ರೆಯಿಂದ ವಜಾಮಾಡಿದ ಯೆಲ್ಸಿನ್

ಅಧ್ಯಕ್ಷ ಯೆಲ್ಸಿನ್ ಆಫೀಸಿನಲ್ಲಿರಲಿ, ಮನೆಯಲ್ಲಿರಲಿ, ಆಸ್ಪತ್ರೆಯಲ್ಲಿರಲಿ, ಯಾರನ್ನಾದರೂ ನೇಮಿಸುತ್ತಿರುತ್ತಾರೆ. ಯಾರನ್ನಾದರೂ ವಜಾ ಮಾಡುತ್ತಿರುತ್ತಾರೆ. ಅವರ ಇತ್ತೀಚಿನ ಬಲಿ CIS (ಮಾಜಿ ಸೋವಿಯೆತ್ ಒಕ್ಕೂಟದ 12 ದೇಶಗಳ ಹೊಸ ಸಂಘಟನೆ) ನ ಮುಖ್ಯಸ್ಥ ಭೋರಿಸ್ ಬೆರೆಝುವೊಸ್ಕಿ. ತಮ್ಮ ಅಧಿಕಾರ ಮೀರಿ ವರ್ತಿಸಿದ್ದಕ್ಕಾಗಿ ಅವರನ್ನು ಅಧ್ಯಕ್ಷ ಯೆಲ್ಸಿನ್ ಆಸ್ಪತ್ರೆಯಿಂದಲೇ, ವಜಾ ಆಜ್ಞೆ ಹೊರಡಿಸಿದರು. ಹೊಟ್ಟೆಯ ಅಲ್ಸರ್ ಚಿಕಿತ್ಸೆಗೆ ಆಸ್ಪತ್ರೆ ಸೇರಿರುವ ಯೆಲ್ಸಿನ್ ಪ್ರಧಾನಿ ಪ್ರಿಮೊಕೊವ್ ಅವರ ಸಲಹೆ ಮೇಲೆ ಈ ಕ್ರಮ ಕೈಗೊಂಡಿದ್ದಾರೆ ಎನ್ನಲಾಗಿದೆ. ರೇಡಿಯೋ, ಟಿ.ವಿ. ಪತ್ರಿಕೆಗಳ ಜಾಲ ಹೊಂದಿರುವ ಪ್ರಬಲ ಶ್ರೀಮಂತನಾದ ಬೆರೆಝುವೊಸ್ಕಿ ಪ್ರಿಮೊಕೊವ್ ವಿರುದ್ಧ ಭಾರಿ ಅಪಪ್ರಚಾರ ನಡೆಸುತ್ತಿದ್ದ ಎನ್ನಲಾಗಿದೆ. ಬೆರೆಝೂವೊಸ್ಕಿ ತನ್ನ ವ್ಯಾಪಾರ, ವಾಣಿಜ್ಯ ಬೆಳೆಸಲು ಹಲವು ಭ್ರಷ್ಟ ಅಧಿಕಾರಿಗಳ ಜತೆ ಶಾಮೀಲಾಗಿದ್ದ ಬಗ್ಗೆ, ಪ್ರಿಮೊಕೊವ್ ತನಿಖೆ ಆರಂಭಿಸಿದ್ದು ಸರಿ ಬರಲಿಲ್ಲ. ಆದ್ದರಿಂದ ಈ ರೀತಿ ಅಪಪ್ರಚಾರ ನಡೆಸಿದ್ದನಂತೆ. ಬೆರೆಝುವೊಸ್ಕಿ ರಶ್ಯಾದ ಅತ್ಯಂತ ಶ್ರೀಮಂತರಲ್ಲಿ ಒಬ್ಬನಾಗಿದ್ದು, ರಶ್ಯಾದ ಹೊಸ ಭ್ರಷ್ಟ ಬಂಡವಾಳಶಾಹಿಯ ಪ್ರತೀಕವಾಗಿದ್ದ.



ಬಾಳೆ ಹಣ್ಣು ವಿವಾದ: ಅಮೇರಿಕದ ಆರ್ಥಿಕ ನಿರ್ಬಂಧಗಳ ಬಗ್ಗೆ ಬ್ರಿಟನ್‌ನಲ್ಲಿ ಆಕ್ರೋಶ:

ಯುರೋಪಿಯನ್ ಒಕ್ಕೂಟದ ಬಾಳೆಹಣ್ಣು ಆಮದು ನೀತಿ ಕೆರ್ರಿಬಿಯನ್ ದೇಶಗಳ ಪರವಾಗಿದೆ. ಅಮೆರಿಕದ ಕಂಪನಿಗಳ ವಿರುದ್ಧವಾಗಿದೆ ಎಂದು ಏಕಪಕ್ಷೀಯ ವಾಗಿ ಅಮೆರಿಕ ಅಪಾದಿಸಿ ಯುರೋಪಿ ಯನ್ ಉತ್ಪನ್ನಗಳ 5200 ದಶಲಕ್ಷ ಡಾಲರುಗಳಷ್ಟು ಆಮದು ಶುಲ್ಕ ವಿಧಿಸಿ ವಾಣಿಜ್ಯದ ಮೇಲೆ ನಿರ್ಬಂಧ ಹೊಂದಿದೆ. ಈ ಬಗ್ಗೆ ಯುರೋಪಿನಲ್ಲಿ ಅಮೆರಿಕದ ನಿಕಟ(ಹೆಚ್ಚಾಗಿ ಏಕಮಾತ್ರ ಸಹ) ಮಿತ್ರ ಎನ್ನಲಾಗುವ ಬ್ರಿಟನ್‌ನಲ್ಲೇ ಇದು ಬಾರಿ ಆಕ್ರೋಶ ಪ್ರತಿಭಟನೆಗೆ ಎಡೆ ಮಾಡಿದೆ. ಅಮೇರಿಕದ ಈ ನಿರ್ಧಾರ ಬ್ರಿಟಿಷ್ ರಫ್ತುಗಳ ಮೇಲೂ ಪರಿಣಾಮ ಬೀರಲಿದೆ. ಪಾರ್ಲಿಮೆಂಟ್ ಎಂದೂ ಕಾಣದ ಅಮೆರಿ ಕನ್ ವಿರೋಧಿ ಹೇಳಿಕೆಗಳು ಕೇಳ ಬಂದವು.

ಬ್ರಿಟನ್‌ನಲ್ಲಿ ಅಮೆರಿಕರ ರಾಯಭಾರಿಯನ್ನು ಸರ್ಕಾರ ಕರೆದು, ತನ್ನ ಅಸಂತೋಷ ವ್ಯಕ್ತಪಡಿಸಿದೆ. ಆ ವಿವಾದ WTO ನ ಮುಂದಿರುವಾಗ ಅಮೇರಿಕ ಈ ಏಕಪಕ್ಷೀಯ ಕ್ರಮಕೈಗೊಂಡಿರುವುದು ಅಮೇರಿಕ ಯುರೋಪಿಯನ್ ಒಕ್ಕೂಟ ಮಾತ್ರವಲ್ಲ, ಅಮೇರಿಕ ಬ್ರಿಟನ್ ನಿಕಟ ಬಾಂಧವ್ಯದ ಮೇಲೆ ತೀವ್ರ ಪರಿಣಾಮ ಬೀರಲಿದೆ.

ಫ್ರಾನ್ಸ್‌ನಲ್ಲೂ ಮಹಿಳಾ ಮೀಸಲಾತಿ ಬಗ್ಗೆ ವಿವಾದ

ಫ್ರಾನ್ಸ್ ಯುರೋಪಿನಲ್ಲೇ ಯಾಕೆ ಜಗತ್ತಿನಲ್ಲೇ ಪ್ರಜಾಪ್ರಭುತ್ವದ ಜನ್ಮಸ್ಥಾನ ಎಂದು ಹೆಸರಾಗಿದೆ. ಅಲ್ಲಿ ಚುನಾಯಿತ ಸ್ಥಾನಗಳಲ್ಲಿ ಮಹಿಳೆಯರ ಸಂಖ್ಯೆ ತೀರಾ ಕಡಿಮೆ. ಪಾರ್ಲಿಮೆಂಟಿನಲ್ಲಿ ಕೇವಲ ಶೇಕಡಾ 10. ಈ ತಾರತಮ್ಯವನ್ನು ಸರಿಪಡಿಸಲು ಈಗಿನ ಸೋಶಲಿಸ್ಟ್ ಸರ್ಕಾರ ಸಂವಿಧಾನ ತಿದ್ದುಪಡಿ ಮಾಡ ಹೊರಟಿರುವುದು ವಿವಾದಾಸ್ಪದವಾಗಿದೆ. ಇತ್ತೀಚಿನ ಚುನಾವಣೆಗಳಲ್ಲಿ ಸೋಶಲಿಸ್ಟ್ ಪಕ್ಷ ಪ್ರತಿ ಅಭ್ಯರ್ಥಿ ಗಳಲ್ಲಿ ಮೂವರಲ್ಲಿ ಒಬ್ಬರು ಮಹಿಳೆಯಾಗಿ ರಬೇಕು ಎಂದು ಪಕ್ಷದೊಳಗೆ ವಿಧಿಸಿ ಕೊಂಡಿತ್ತು. ಇದನ್ನೇ ವಿಸ್ತರಿಸುವ ಹಂಬಲ ಸೋಶಲಿಸ್ಟ್ ಸರ್ಕಾರದ್ದು. ಅವರು ಮಾಡ ಹೊರಟಿರುವ ಸಂವಿಧಾನ ತಿದ್ದುಪಡಿ ನೇರವಾಗಿ ಮೂರನೇ ಒಂದು ಭಾಗ ಸೀಟುಗಳನ್ನು ಮಹಿಳೆಯರಿಗೆ ಮೀಸಲಿಡುವು ದಿಲ್ಲ. ಆ ತಿದ್ದು ಪಡಿ ಪ್ರಕಾರ ಎಲ್ಲಾ ಪಕ್ಷಗಳು ಅಭ್ಯರ್ಥಿಗಳಲ್ಲಿ ಯಾವುದೇ ಅಂಗದವರು ಶೇಕಡಾ 70 ಕ್ಕಿಂತ ಹೆಚ್ಚಿರದಂತೆ ನೋಡಿ ಕೊಳ್ಳಬೇಕು. ಇಲ್ಲದಿದ್ದರೆ ಆ ಪಕ್ಷಕ್ಕೆ ಸರ್ಕಾರಿ ಅನುದಾನ ನಿಲ್ಲಿಸಬಹುದು ಅಷ್ಟೇ. ಇದಕ್ಕೆ ಎಲ್ಲಾ ಪಕ್ಷದ ಕೆಲವು ವಿಭಾಗಗಳಲ್ಲಿ ಪರ, ವಿರೋಧ ಕಂಡು ಬಂದು ವಿರೋದ ಸೃಷ್ಟಿಯಾಗಿದೆ.

ಈ ತಿದ್ದುಪಡಿ ವಿರೋಧಿಗಳು ಫ್ರೆಂಚ್ ಕ್ರಾಂತಿಯ ಒಂದು ಆದರ್ಶವಾದ ಸಮಾನತೆಗೆ ಇದು ಅಡ್ಡಿ ಬರುತ್ತದೆ ಎಂದು ವಾದಿಸುತ್ತಿದ್ದಾರೆ! ತಿದ್ದುಪಡಿಪರ ಇರುವವರ ಆ ಸಮಾನತೆಯ ಆದರ್ಶ ಸಾಧಿಸಲಿಕ್ಕೆ ಈ ತಿದ್ದುಪಡಿ ಎಂದಿದ್ದಾರೆ.

ಚುನಾಯಿತ ಸ್ಥಾನಗಳಲ್ಲಿ ಫ್ರಾನ್ಸ್‌ನಲ್ಲಿ ಮಹಿಳೆಯರ ಸ್ಥಾನ ಯುರೋಪ್ ಮಾತ್ರವಲ್ಲ ಇಡೀ ಅಭಿವೃದ್ಧಿ ದೇಶಗಳಲ್ಲೇ ಅತ್ಯಂತ ಕಡಿಮೆ (ಗ್ರೀಸ್ ಬಿಟ್ಟರೆ) ಸಾಮಾನ್ಯವಾಗಿ ಸಾರ್ವಜನಿಕ ಜೀವನದಲ್ಲಿ ಚುನಾಯಿತ ಸ್ಥಾನಗಳಲ್ಲಿ ತೀರಾ ಕಡಿಮೆ. ಚುನಾಯಿತ ಸ್ಥಾನಗಳಲ್ಲಿ ಮಹಿಳೆಯರ ಪ್ರಾತಿನಿಧ್ಯ ಕೆಲವು ಅಭಿವೃದ್ಧ ದೇಶಗಳಲ್ಲಿ ಹೀಗಿವೆ-

ಸ್ವೀಡನ್	42-7%.
ಡೆನ್ಮಾರ್ಕ್	37.4%
ನೆರೆದಲ್ಯಾಂಡ್	36.0%
ಫಿನ್‌ಲ್ಯಾಂಡ್	34.0%
ಜರ್ಮನಿ	30.9%
ಆಸ್ಟ್ರೀಯ	25.4%
ಸ್ಪೈನ್	24.2%
ಲಕ್ಸೆಂಬರ್ಗ್	18.3%
ಬ್ರಿಟನ್	17.5%
ಬೆಲ್ಜಿಯಂ	13.3%
ಅಮೇರಿಕ	13.3%
ಪೋರ್ಚುಗಲ್	13.0%
ಇಟಲಿ	12.1%
ಐಲೆಂಡ್	12.0%
ಫ್ರಾನ್ಸ್	10.6%
ಗ್ರೀಸ್	6.9%,

ಆದರೆ ಸದ್ಯಕ್ಕೆ ಸಚಿವರಲ್ಲಿ ಪ್ರಾತಿನಿಧ್ಯ ಫ್ರಾನ್ಸ್‌ನಲ್ಲಿ ಶೇಕಡಾ 34.6.

ಸಾರ್ವಜನಿಕ ಕ್ಷೇತ್ರದ ನೌಕರಿಗಳಲ್ಲಿ ಶೇಕಡಾ 56.5 ಮಹಿಳೆಯರು. ಉನ್ನತ ಪದವಿಗಳಲ್ಲಿ ಪ್ರಾತಿನಿಧ್ಯ ಕೇವಲ ಶೇಕಡಾ7. ○

ದಿಲ್ಲಿಯಲ್ಲಿ ಮಹಿಳಾ ಮಹಾ ಅಧಿವೇಶನ

ಬದಲಾವಣೆಯ, ಮಹಿಳೆಯ ಮುನ್ನಡೆಯ ರಾಜಕೀಯ ಅಜೆಂಡಾ



"ನನ್ನ ಹೋರಾಟ ನ್ಯಾಯಕ್ಕಾಗಿ ಹೋರಾಟ. ಅವರು ನನಗೆ ತಲೆ ಕಟ್ಟಿದೆಯೆಂದರು, ನನ್ನತ್ತ ಕಲ್ಲೆಸೆದರು, ನನ್ನ ಶೀಲಭಂಗ ಮಾಡಿದರು, ನನ್ನ ಮಕ್ಕಳನ್ನು ನನ್ನಿಂದ ಎಳೆದೊಯ್ದರು, ನಾನೀಗ ನಿಮ್ಮ ಮುಂದೆ ಇದ್ದೇನೆ, ನ್ಯಾಯಕ್ಕಾಗಿ ನನ್ನ ಹೋರಾಟವನ್ನು ಮುಂದುವರಿಸುವ ದೃಢ ನಿರ್ಧಾರ ಮಾಡಿದ್ದೇನೆ". ಒರಿಸ್ಸಾದ ಅಂಜನಾಮಿಶ್ರಾ ಈ ಮಾತುಗಳನ್ನಾಡಿದಾಗ ಮಾರ್ಚ್ 7 ರಂದು ನವದೆಹಲಿಯ ಕೋಟ್ಲಾ ಮೈದಾನದಲ್ಲಿ ಮಹಿಳಾ ಮಹಾ ಅಧಿವೇಶನದಲ್ಲಿ ನೆರೆದಿದ್ದ 15000 ಮಹಿಳೆಯರ ಕರತಾಡನ ಗಗನ ಮುಟ್ಟಿತು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (AIDWA) ಅಂತರ್ರಾಷ್ಟ್ರೀಯ ಮಹಿಳಾ ದಿನದ ಮುನ್ನಾದಿನ ಏರ್ಪಡಿಸಿದ್ದ ಈ ಸಮಾವೇಶದಲ್ಲಿ ಇನ್ನೂ ಹಲವು ಮಹಿಳೆಯರು ಮಾತನಾಡಿದರು. ಈ ಚಾರಿತ್ರಿಕ ಸಮಾವೇಶ ಐದು ನಿರ್ಣಯಗಳನ್ನು ಅಂಗೀಕರಿಸಿತು - ಬೆಲೆಯೇರಿಕೆ; ಸಾರ್ವಜನಿಕ ವಿತರಣಾ ವ್ಯವಸ್ಥೆಯ ಪುನರ್ರಚನೆ; ಅಲ್ಪಸಂಖ್ಯಾತರ ಹಕ್ಕುಗಳು ಮತ್ತು ಬಹುಮುಖೀ ಸಂಸ್ಕೃತಿಯ ರಕ್ಷಣೆ; ಜಾತಿ ಪದ್ಧತಿ ಹಾಗೂ ಅಸ್ಪೃಶ್ಯತೆಯ ವಿರುದ್ಧ; ಹಾಗೂ ಮಹಿಳಾ ಮೀಸಲಾತಿ ಮಸೂದೆ. ಈ ಐದು ನಿರ್ಣಯಗಳು ಒಟ್ಟಾಗಿ ಬದಲಾವಣೆಯ, ಮಹಿಳೆಯರ ಮುನ್ನಡೆಯ ರಾಜಕೀಯ ಅಜೆಂಡಾವಾಗಿ ಮೂಡಿಬಂದವು.

ಶ್ಯಾಮಲೀ ಗುಪ್ತಾರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾವೇಶವನ್ನು ಆಝಾದ್ ಹಿಂದ್ ಸೇನೆಯ ವೀರ ನಾಯಕಿ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ್ತಿ ಕ್ಯಾಪ್ಟನ್ ಲಕ್ಷ್ಮಿ ಸಹಗಲ್ ಉದ್ಘಾಟಿಸಿದರು. ಮಹಿಳೆಯರು ಈಗ ಬಲಿಪಶುಗಳಾಗಲು ಸಿದ್ಧರಿಲ್ಲ, ಹೋರಾಟದ ಪ್ರತೀಕಗಳಾಗಿದ್ದಾರೆ ಎಂದರು ಅವರು. ಸಮಾವೇಶದ ಮಹತ್ವದ ಬಗ್ಗೆ ಮಾತನಾಡುತ್ತಾ ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಬೃಂದಾಕಾರಟ್‌ರವರು ಇದು ಈ ಶತಮಾನದ ಕೊನೆಯ ಮಹಿಳಾ ದಿನ ಎಂದು ನೆನಪಿಸಿದರು. 20 ನೇ ಶತಮಾನದ ಒಂದು ಪ್ರಮುಖ ರಾಜಕೀಯ ಪಾಠವೆಂದರೆ ಮಹಿಳೆಯರಿಗೆ ಅಧೀನತೆ ಮತ್ತು ಪಕ್ಷಪಾತದಿಂದ ಸ್ವಾತಂತ್ರ್ಯ ದೊರೆಯದೆ ಯಾವುದೇ ದೇಶ ಸ್ವಾತಂತ್ರ್ಯವನ್ನು ಗಳಿಸುವುದು, ಉಳಿಸಿಕೊಳ್ಳುವುದು ಸಾಧ್ಯವಿಲ್ಲ ಎಂದು ಅವರು ಹೇಳಿದರು.

ನೂರಾರು ದಲಿತ ಜಾತಿಗಳ, ಅಲ್ಪಸಂಖ್ಯಾತ ಕೋಮುಗಳ ಮಹಿಳೆಯರು, ಕ್ರೈಸ್ತ ಸನ್ಯಾನಿಯರು, ಕಾರ್ಮಿಕರು, ನರ್ಸ್‌ಗಳು, ಶಾಲಾಶಿಕ್ಷಕಿಯರು, ವೃತ್ತಿಪರರು ಮತ್ತಿತರರು ಈ ಸಮಾವೇಶ ದಲ್ಲಿ ಭಾಗವಹಿಸಿದರು. ಸುಮಾರಾಗಿ ಭಾರತದ ಎಲ್ಲಾ ರಾಜ್ಯಗಳಿಂದ ಮಹಿಳೆಯರ ಪ್ರಾತಿನಿಧ್ಯವಿತ್ತು. ಕರ್ನಾಟಕ ದಿಂದ ಐನೂರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು.

ರಾಷ್ಟ್ರಪತಿ ಕೆ.ಆರ್.ನಾರಾಯಣನ್‌ರವರು ಸಮಾವೇಶಕ್ಕೆ ಶುಭಾಶಯ ಸಂದೇಶ ಕಳಿಸಿದ್ದರು. ಅದನ್ನು ಓದಿದಾಗ ಪ್ರತಿನಿಧಿಗಳು ಹಾರ್ದಿಕ ಕರತಾಡನ ಮಾಡಿದರು.

ವಿವಿಧ ನಿರ್ಣಯಗಳ ಮೇಲೆ ಮಾತನಾಡಿದವರೆಂದರೆ ಬಿಹಾರದ ಧುಮ್ಕಾದಲ್ಲಿ 8 ವರ್ಷಗಳಿಂದ ಆದಿವಾಸಿಗಳ ನಡುವೆ ದುಡಿಯುತ್ತಿರುವ ಸಿಸ್ಟರ್ ಸೆಲ್ಮಾ, ಶ್ರೀಕೃಷ್ಣ ಆಯೋಗದ ಎದುರು ಮುಂಬೈ ದಂಗೆಗಳಿಗೆ ಬಲಿಯಾದ ಹಲವಾರು ಮಂದಿಗೆ ವಕೀಲರಾಗಿ ದುಡಿದ ತಮ್ಮ ಅನುಭವಗಳನ್ನು ಹೇಳಿದ ನಿಲೋಫರ್ ಭಾಗವತ್, ಸಿಖ್ ಗುರುದ್ವಾರಾ ಪ್ರಬಂಧಕ ಕಮಿಟಿ ವೈಯಕ್ತಿಕ ಕಾನೂನು ಬಗ್ಗೆ ಅಂಗೀಕರಿಸಿದ ನಿರ್ಣಯ ಸಿಖ್ ಮಹಿಳೆಯರ ಮೇಲೆ ಉಂಟು ಮಾಡುವ ಪ್ರತಿಕೂಲ ಪರಿಣಾಮಗಳ ಬಗ್ಗೆ ಮಾತನಾಡಿದ ಪಂಜಾಬಿನ ತಾರಾ, ಆಂಧ್ರಪ್ರದೇಶದ ದಲಿತ ಕಾರ್ಪೋರೇಟರ್ ರತ್ನಮಾಲಾ, ದಂಗೆಯಲ್ಲಿ ಗಂಡನನ್ನು ಕಳಕೊಂಡ ಕಾನಪುರದ ಮುಸ್ಲಿಂ ಮಹಿಳೆ ಅಕಿಲಾ, ಮುಂಬೈ ಪೋಲೀಸ್ ಗೋಳೀಬಾರಿನಲ್ಲಿ ಇತರ ಹನ್ನೊಂದು ಮಂದಿಯೊಂದಿಗೆ ತನ್ನ ಮಗನನ್ನು ಕಳಕೊಂಡ ಪಾರ್ವತಿ ಬಾಯಿ- ಇನ್ನೂ ಇಂತಹ ವೈಯಕ್ತಿಕ ಅನುಭವಗಳನ್ನು ಹಂಚಿಕೊಂಡ ಹಲವು ಮಹಿಳೆಯರು. ರಾಷ್ಟ್ರೀಯ ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ತಾಹಿಲ್ ಮಹಮದ್ ಕೂಡಾ ಸಮಾವೇಶವನ್ನುದ್ದೇಶಿಸಿ ಮಾತನಾಡಿದರು.

ಕಾಪತ್ತಂನ ದಲಿತ ಯುವತಿಯರು ಸಾಮಾನ್ಯವಾಗಿ ಪುರುಷರು ನಡೆಸುವ ನೃತ್ಯವನ್ನು ಸಿಸ್ಟರ್ ಚಂದ್ರಾ ನೇತೃತ್ವದಲ್ಲಿ ಪ್ರದರ್ಶಿಸಿದಾಗ ಸಭಿಕರೆಲ್ಲಾ ಮಂತ್ರ ಮುಗ್ಧರಾದರು. (ಐಎನ್‌ಎನ್)

ಇ.ಎಂ.ಎಸ್. ಭವನ ನಿಧಿ



ಹಿಂದಿನ ಮೊತ್ತ
ರೂ. 8,73,011-00
ಸಿಪಿಐ(ಎಂ) ವರ್ತೂರುಪ್ರಾದೇಶಿಕ ಸಮಿತಿ - ಬೆಂಗಳೂರು ರೂ. 13500
ಕಾಂ. ಎಸ್.ರೇವಣ್ಣ-ಬೆಂಗಳೂರು ಮಾಡಿದ ಸಂಗ್ರಹ ರೂ. 5000
ಕಾಂ. ಎನ್.ಕೆ.ಉಪಾಧ್ಯಾಯ ಮೂಲಕ ಸಂಗ್ರಹ ರೂ. 3563
ಎ.ಎಸ್.ಪಾಟೀಲ ರೂ. 250
ಗಂಗಪ್ಪ ಕಾರಜನಗಿ ರೂ. 101
ಕೃಷ್ಣಾಜಿ ಕುಲಕರ್ಣಿ ರೂ. 101
ಜಿ.ಎನ್.ದೇಶಪಾಂಡೆ ರೂ. 500
ಎ.ಎನ್.ತೊರಗಲ್ ರೂ. 111
ಎಸ್.ವಿ.ಪುಣೇಕರ್ ರೂ. 2500
ಸುರೇಶ್, ಪವರ್‌ಲೂಂ - ಬೆಂಗಳೂರು ರೂ. 30
ರಫೀ ಉನ್ನೀಸಾ, ಪೆರೇಸಂದ್ರ, ಚಿಕ್ಕಬಳ್ಳಾಪುರ ರೂ. 100
ಸಿಪಿಐ(ಎಂ)-ಐಟಿಸಿ ಶಾಖೆ - ಬೆಂಗಳೂರು ರೂ. 4800
ವರಲಕ್ಷ್ಮಿ ಎ.ನಾರಾಯಣ - ಬೆಂಗಳೂರು ರೂ. 500
ಸಿಪಿಐ(ಎಂ) ಶಿವಮೊಗ್ಗ ಪ್ರಾದೇಶಿಕ ಸಮಿತಿ ಮೂಲಕ -
ವಿಐಎಸ್ ಎಂಪ್ಲಾಯೀಸ್ ಕೋ ಆಪರೇಟಿವ್ ಬ್ಯಾಂಕ್ ನೌಕರರು ರೂ.1000
ಡಿ.ಕಣ್ಣನ್, ವಿಐಎಸ್‌ಎಲ್- ಭದ್ರಾವತಿ ರೂ. 500
ಟಿ.ಎಂ.ಬೆಟ್ಟೇಗೌಡ -"- ರೂ. 1000
ಪರಿಮಳ ಆಯಿಲ್ಸ್, ಭದ್ರಾವತಿ ಕಾರ್ಮಿಕರಿಂದ ರೂ. 1420
ಕೆ.ಮಂಜು - ಭದ್ರಾವತಿ ಡಿವೈಎಫ್‌ಐ ಮುಖಂಡರು ರೂ. 500
ಕೆ.ಆರ್.ವಿಶ್ವನಾಥ್, ಭದ್ರಾವತಿ ಡಿವೈಎಫ್‌ಐ ಮುಖಂಡರು ರೂ. 100
ವಜೀರ್, ಭದ್ರಾವತಿ ಹೆಚ್.ಎಸ್.ಸಿ.ಎಲ್. ನೌಕರರುರೂ.100
ಎಲ್.ಐ.ಸಿ. ಸಂಗಾತಿಗಳು- ರಾಯಚೂರು ರೂ. 1250
ಸಿಪಿಐ(ಎಂ) - ವಿರಾಜಪೇಟೆ, ಕೊಡಗು ಶಾಖೆ 2800
ಹಿತೈಷಿ 2500
ಜಮೀರ್ 300
ಒಟ್ಟು 9,09,174.00

ಸಶಸ್ತ್ರ ಪಡೆಗಳ ಹಿರಿಯ ಹುದ್ದೆಗಳ ನೇಮಕಗಳು ಏಕೆ ವಿವಾದಾಸ್ಪದವಾಗುತ್ತಿವೆ?

ಸಶಸ್ತ್ರ ಪಡೆಗಳ ಉನ್ನತ ಹುದ್ದೆಗಳಿಗೆ ನೇಮಕ ಸಾಮಾನ್ಯವಾಗಿ ವಿವಾದಾಸ್ಪದವಾಗ ಬಾರದು. ಆದರೆ ಬಿಜೆಪಿ ನೇತೃತ್ವದ ಸರಕಾರದ ಆಡಳಿತದಲ್ಲಿ ಅದೇ ಆಗುತ್ತಿದೆ. ವೈಸ್ ಅಡ್ಮಿರಲ್ ಹರಿಂದರ್ ಸಿಂಗ್ ರನ್ನು ನೌಕಾಸೇನೆಯ ಉಪಸೇನಾಧಿಪತಿ ಯಾಗಿ ನೇಮಿಸಲು ಅದು ನಿರ್ಧರಿಸಿದೆ.ಇದೊಂದು ಗಂಭೀರ ಅತಂಕದ ವಿಷಯ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೊ ಹೇಳಿದೆ. ಈ ವ್ಯಕ್ತಿ ತನ್ನ ಸೇನಾಧಿಪತಿಯ ಮೇಲೆಯೇ ಕೋಮುವಾದಿ ಛಾಯೆಯ ನಿರಾಧಾರ ಆಪಾದನೆ ಹಾಕಿದ್ದವರು. ನೌಕಾಸೇನಾಧಿಪತಿಯ ಹೆಂಡತಿ'ಅರೆ ಮುಸ್ಲಿಂ' ಎಂದು ವರ್ಣಿಸಿ ಆ ಸೇನಾಧಿಪತಿ ಕೋಮುವಾದಿ ಸ್ವಭಾವದವರು, ಒಂದು ನಿರ್ದಿಷ್ಟ ಕೋಮಿನ ಅಧಿಕಾರಿಗಳು ಅವರನ್ನು ಸುತ್ತುವರಿದಿರುತ್ತಾರೆ ಎಂದು ಅವರು ಲಿಖಿತವಾಗಿ ದೂರಿದ್ದರು. ಒಬ್ಬ ಸೇನಾಧಿಕಾರಿಯ ಇಂತಹ ಮಾತಿಗೇ ಆತನ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕಾಗಿತ್ತು. ಆದರ ಬದಲು ವಾಜಪೇಯಿ ಸರಕಾರ ನೌಕಾಪಡೆಯ ಮುಖ್ಯಾಲಯ ಈತನ ವಿರುದ್ಧ ದಾಖಲಿಸಿರುವ ಪ್ರತಿಕೂಲ ಟಿಪ್ಪಣಿಗಳನ್ನೇ ತೆಗೆದುಹಾಕಿ ಅದೇ ಅಧಿಕಾರಿಯನ್ನು ಅಡ್ಮಿರಲ್ ಭಾಗವತ್ ಕೈಕೆಳಗೆ ಉಪಸೇನಾಧಿಪತಿಯಾಗಿ ನೇಮಿಸಲಾಯಿತು.ಇಂತಹ ಒಂದು ಕ್ರಮ ಸಶಸ್ತ್ರ ಪಡೆಗಳ ಸಮಗ್ರತೆ ಹಾಗೂ ಧರ್ಮನಿರಪೇಕ್ಷತೆಯೊಳಗೆ ಕೈಯಾಡಿಸ ಬಹುದು ಎಂಬ ಭಾವನೆಯನ್ನು ಉಂಟುಮಾಡುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೊ ಈಕ್ರಮವನ್ನು ಬಲವಾಗಿ ವಿರೋಧಿಸಿದೆ.ಅಡ್ಮಿರಲ್ ಭಾಗವತ್ ರ ವಜಾ ಹಾಗೂ ಸೇನಾಧಿಪತ್ಯ ದಲ್ಲಿ ಈ ರೀತಿ ಮೂಗುತೂರಿಸುತ್ತಿರುವುದು ಸಶಸ್ತ್ರಪಡೆಗಳಲ್ಲಿ ಅಸಂತೋಷವುಂಟು ಮಾಡಿದೆ. ಇಂತಹ ಕೇಡಿನ ದಾರಿಯನ್ನು ತಕ್ಷಣ ಬಿಡಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೊ ಸರಕಾರವನ್ನು ಅಗ್ರಹಪಡಿಸಿದೆ.

ಲೆಫ್ಟ್‌ವರ್ಡ್-ಒಂದು ಹೊಸ ಎಡಪಂಥೀಯ ಪ್ರಕಾಶನ

ಮಾರ್ಚ್ 15 ರಂದು ನವದೆಹಲಿಯಲ್ಲಿ ಒಂದು ಹೊಸ ಪ್ರಕಾಶನ ಸಂಸ್ಥೆಯನ್ನು ಆರಂಭಿಸಲಾಗುತ್ತಿದೆ. ಇದರ ಹೆಸರು 'ಲೆಫ್ಟ್‌ವರ್ಡ್'(ಎಡಪದ). ಸಿಪಿಐ(ಎಂ) ನ ನಯಾರಾಸ್ತಾ ಪಬ್ಲಿಷರ್ಸ್ ಪ್ರೈ. ಲಿಮಿಟೆಡ್‌ನ ಒಂದು ವಿಭಾಗವಾಗಿ ಇದು ಆರಂಭವಾಗುತ್ತಿದೆ. ಒಂದು ರಾಷ್ಟ್ರೀಯ ಎಡಪಂಥೀಯ ಪ್ರಕಾಶನ ಸಂಸ್ಥೆಯ ಅಗತ್ಯವನ್ನು ಇದು ಈಡೇರಿಸಲಿದೆ. ರಾಜಕೀಯ, ಅರ್ಥಶಾಸ್ತ್ರ, ಸಮಾಜ, ಸಂಸತಿ, ಸಿದ್ಧಾಂತ ಇತ್ಯಾದಿ ವಿಬಿನ್ನ ವಿಷಯಗಳ ಮೇಲೆ ಪುಸ್ತಕಗಳನ್ನು ಇದು ಪ್ರಕಟಿಸಲಿದೆ.


ಮಾರ್ಚ್ 15 ರಂದು ಮೊದಲ ಪ್ರಕಟಣೆಯೊಂದಿಗೆ ಇದು ಪ್ರಾರಂಭವಾಗುತ್ತಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಬಿಡುಗಡೆ ಮಾಡುವ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಕುರಿತಾದ ಪುಸ್ತಕ ಇದರ ಮೊದಲ ಪ್ರಕಟಣೆ. ಕಮ್ಯುನಿಸ್ಟ್ ಪ್ರಣಾಳಿಕೆಯ 150ನೇ ವಾರ್ಷಿಕೋತ್ಸವದ ಸಮಾರೋಪದ ಭಾಗವಾಗಿ ಇದನ್ನು ತರಲಾಗುತ್ತಿದೆ. ಪ್ರಕಾಶ್ ಕಾರಟ್ ಮುನ್ನುಡಿಯಿರುವ ಈ ಪುಸ್ತಕದಲ್ಲಿ ಪ್ರಖ್ಯಾತ ಮಾರ್ಕ್ಸ್‌ವಾದಿ ವಿದ್ವಾಂಸರಾದ ಇರ್ಫಾನ್ ಹಬೀಬ್, ಪ್ರಭಾತ್ ಪಟ್ನಾಯಕ್ ಮತ್ತು ಐಝಾಜ್ ಅಹ್ಮದ್‌ರ ಲೇಖನಗಳಿವೆ.

ಉತ್ತಮ ಪುಸ್ತಕಗಳನ್ನು ಸುಲಭ ಬೆಲೆಗಳಲ್ಲಿ ಒದಗಿಸಲು 'ಲೆಫ್ಟ್‌ವರ್ಡ್' ಒಂದು ಪುಸ್ತಕ ಕ್ಲಬ್ ಕೂಡಾ ಆರಂಭಿಸಿದೆ. 500 ರೂ. ಕೊಟ್ಟು ಇದರ ಸದಸ್ಯತ್ವ ಪಡೆದರೆ ಮೊದಲ ಹತ್ತು ಪ್ರಕಟಣೆಗಳಿಗೆ 40% ರಿಯಾಯ್ತಿ ನೀಡಲಾಗುವುದು. 200 ರೂ. ಕೊಟ್ಟು ಸಹ ಸದಸ್ಯರಾದರೆ ಮೊದಲ ಹತ್ತು ಪೇಪರ್ ಬ್ಯಾಕ್ ಪ್ರಕಟಣೆಗಳಿಗೆ 30% ರಿಯಾಯ್ತಿ ನೀಡಲಾಗುವುದು ಎಂದು ತಿಳಿಸಲಾಗಿದೆ. (ಐಎನ್‌ಎನ್)

ವಾರದ ವ್ಯಂಗ್ಯಚಿತ್ರ

'ಹಿಂದು'ನಲ್ಲಿ ಕೇಶವ್

ಎಲ್ಲಿಗೂ ಹೋಗದ ಬಸ್



ಬಿಜೆಪಿಯ 'ಸುರಾಜ್ಯ' ವನ್ನು ನೋಡಿ! ಮೋಹನ್ ಗುರುಸ್ವಾಮಿಯ ಕನ್ನಡಿಯಲ್ಲಿ!!

ಮೋಹನ್ ಗುರುಸ್ವಾಮಿ ಈಗ ಸುದ್ದಿಯಲ್ಲಿದ್ದಾರೆ. ಇವರು ಯಾರು ಗೊತ್ತೆ? ಕೇಂದ್ರ ಹಣಕಾಸು ಮಂತ್ರಿಗಳ ಸಲಹೆಗಾರರಾಗಿದ್ದವರು. ಭಾರತ ಸರಕಾರದ ಕಾರ್ಯದರ್ಶಿ ಸ್ಥಾನಮಾನ ಹೊಂದಿದ್ದವರು. ಅಡ್ವಾಣಿಯವರ ನೆಚ್ಚಿನ ಬಂಟರವರು. ಆದ್ದರಿಂದಲೇ ಈ ರಾಜಕೀಯ ನೇಮಕ.

ಇದ್ದಕ್ಕಿದ್ದಂತೆ ಜನವರಿ 27 ರಂದು ಅವರು ರಾಜೀನಾಮೆ ನೀಡಿದರು. ಫೆಬ್ರವರಿ 3 ರಂದು ಸರಕಾರ ಅವರನ್ನು ವಜಾ ಮಾಡಿರುವುದಾಗಿ ಸಾರಿತು. ಎರಡೂ ನಿಗೂಢ ವಿಷಯಗಳು. ಗುರುಸ್ವಾಮಿ ತನ್ನ ಮಿತಿ ಮೀರಿದರು ಎಂದು ಸರಕಾರ ದೂಷಿಸಿದರೆ ಸರಕಾರ ಸತ್ಯವನ್ನು ಅಡಗಿಸಿಟ್ಟಿದೆ ಎಂದರು ಗುರುಸ್ವಾಮಿ.

ಆದರೆ ಬೇರೊಂದು ಸತ್ಯ ಹೊರಬಂತು. ಇಲ್ಲ, ಬಯಲಾಯಿತು. ಗುರುಸ್ವಾಮಿ ಬಾಯಿ ತೆರೆದರು. ಬಿಜೆಪಿಯ ದೋಣಿ ಅಲ್ಲಾಡಿತು. ಪ್ರಧಾನ ಮಂತ್ರಿಗಳು ಮತ್ತು ಐದು ಇತರ ಮಂತ್ರಿಗಳು ಕಟಕಟೆಗೆ ಬಂದಿದ್ದಾರೆ.

ಇಂಗ್ಲೀಷ್ ಪತ್ರಿಕೆಯೊಂದರಲ್ಲಿ ಗುರುಸ್ವಾಮಿಯ ಆಪಾದನೆಗಳ ಪಟ್ಟಿ ನೋಡಿ - ಪ್ರಧಾನ ಮಂತ್ರಿಗಳು ಹಿಂದೂಜಾಗಳ ವಶೀಲಿ ಮಾಡಿದರಂತೆ; ಗೃಹಮಂತ್ರಿ ಎಸ್ಸಾರ್ ಎಂಬ ಇನ್ನೊಂದು ಬಂಡವಾಳಶಾಹಿ ಗುಂಪಿಗೆ ಅನುಕೂಲ ಮಾಡಿಕೊಟ್ಟರಂತೆ; ಬಹಳ ಮೆರೆದಾಡುತ್ತಿರುವ ವಾರ್ತಾ-ಪ್ರಸಾರ ಮಂತ್ರಿ ಪ್ರಮೋದ್ ಮಹಾಜನ್ ಮಿತ್ತಲ್‌ಗಳ ಮತ್ತೊಂದು ಗುಂಪಿನ ಪೋಷಕರಂತೆ, ಉಕ್ಕು ಮಂತ್ರಿ ನವೀನ್ ಪಟ್ನಾಯಕ್ ಉಕ್ಕು ಬೆಲೆ ನಿರ್ಧಾರದಲ್ಲಿ ಮೋಸ ಮಾಡಿದರಂತೆ; ಸ್ವತಃ ಹಣಕಾಸು ಮಂತ್ರಿಗಳು ಯುನಿಟ್ ಟ್ರಸ್ಟ್ ಐ.ಟಿ.ಸಿ.ಯ ಶೇರುಗಳನ್ನು ಬ್ರಿಟಿಶ್-ಅಮೇರಿಕನ್ ಟೊಬಾಕೋ ಕಂಪನಿಗೆ ಅಗ್ಗ ದರದಲ್ಲಿ ಮಾರಲು ಕಾರಣರಾದರಂತೆ.

ಗುರುಸ್ವಾಮಿಯವರ ಲೇಖನ ಓದಿದ ಮೇಲೆ ಬಿಜೆಪಿ ನೇತೃತ್ವದ ಸರಕಾರದ ಮಂತ್ರಿಗಳು ಎಂತಹ ಅಡ್ಡ ಪ್ರವಾಹಗಳಲ್ಲಿ ಈಜುತ್ತಿದ್ದಾರೆ ಎಂದು ತಿಳಿಯುತ್ತದೆ. ಪ್ರತಿಯೊಂದು ಮಂತ್ರಿಯ ಹಿಂದೆ ಒಂದು ದೊಡ್ಡ ಬಂಡವಾಳಿಗ ಗುಂಪಿದೆ - ಅಂಬಾನಿಗಳೋ, ಮಿತ್ತಲ್‌ಗಳೋ, ಹಿಂದೂಜಾಗಳೋ, ರೂಯಾಗಳೋ! ಯಾವುದೋ ಒಬ್ಬ ಮಂತ್ರಿಯನ್ನು ಹಿಡಿದು ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಇವರೆಲ್ಲಾ ಮಗ್ನರಾಗಿದ್ದಾರೆ. ಇದೀಗ ಬಿಜೆಪಿಯ 'ಸುರಾಜ್ಯ' - ಗುರುಸ್ವಾಮಿಯ ಕನ್ನಡಿಯಲ್ಲಿ ಬಟಾಬಯಲಾದ 'ಸುರಾಜ್ಯ'!

Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು:ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ.2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ